ಅಂತರಂಗ ಕಾರ್ಯಾಲಯ, ಉಡುಪಿ.

0—8—0

ಪ್ರಜಾಪ್ರಭುತ್ವವನ್ನು ಕುರಿತು

ಶಿವರಾಮ ಕಾರಂತರು.

ಅಂತರಂಗ ಕಾರ್ಯಾಲಯ, ಉಡುಪಿ.

ಪ್ರಜಾಪ್ರಭುತ್ವವನ್ನು ಕುರಿತು

****

೧ ದೇಶ ಯಾರದು?

ಮೂಲ ಮಾನವ

ಮನುಷ್ಯನ ಮೂಲ ಸಮಾಜಗಳು ಚಿಕ್ಕ ಪುಟ್ಟ ಗುಂಪುಗಳಾಗಿದ್ದುವೆಂದು ತಿಳಿದು ಬರುತ್ತದೆ. ಕಪಿಗಳಂತೆಯೋ, ಜಿಂಕೆಗಳಂತೆಯೋ ಮನುಷ್ಯ ಒಂದೊಂದು ಬಳಗವನ್ನು ಕೂಡಿಕೊಂಡ ಕೂಟವಾಗಿ, ವಾಸಿಸುತ್ತಿದ್ದನೆಂದು ಊಹಿಸಲು ಸಾಕಷ್ಟು ಆಧಾರಗಳಿವೆ. ಹೀಗಿದ್ದುದು ಆತ ನಾಗರಿಕನೆನಿಸುವ ಮುಂಚೆ. ನಾಗರಿಕನೆಂಬ ಪದವೇ ಹೇಳುತ್ತದೆ "ನಗರದಿಂದ ಉಂಟಾದದ್ದು ಅದರ ಸಂಸ್ಕೃತಿ" ಎಂದು. ಮೂಲ ಮಾನವನ ಜೀವನವು ಸಂಚಾರಿ ಜೀವನವಾಗಿತ್ತು. ನಾಲ್ಕು ದಿನ ಆತ ಒಂದು ಕಡೆಯಲ್ಲಿರುತ್ತಾನೆ. ಐದನೆಯ ದಿನ ಬೇರೊಂದು ಕಡೆ ಹೋಗುತ್ತಿದ್ದ. ನೆಲದ ಮೋಹ ಅವನಿಗಿರಲಿಲ್ಲ, ಇರುವುದಕ್ಕೆ ಕಾರಣವೂ ಇಲ್ಲ. ಆತ ಮೊದಮೊದಲು ತನ್ನ ಆಹಾರವನ್ನು ಬೆಳೆಯಿಸಿದವನಲ್ಲ. ಬೆಳೆದುದನ್ನು ಕಾಡುಗುಡ್ಡಗಳಿಂದ ಆಯ್ದು ತಿಂದವನಷ್ಟೆ. ಹಣ್ಣು, ಕಂದಮೂಲಗಳು, ಜೇನು, ನೀರು ಬೇಟೆಯ ಪ್ರಾಣಿಗಳು ಎಲ್ಲಿ ದೊರೆಯುತ್ತಿದ್ದುವೋ ಅಲ್ಲಿಗೆ ಹೋಗಿ ಅವನು ವಾಸಿಸಬೇಕಿತ್ತು. ಅಲ್ಲಿ ಆಹಾರ ಕಡಿಮೆ ಆಯಿತೆಂದರೆ ಆ ನೆಲೆಯನ್ನು ಬಿಟ್ಟು ಬೇರೊಂದು ನೆಲೆಗೆ ಹೋಗಬೇಕಿತ್ತು. ಮರದ ನೆರಳಿನಲ್ಲೇ ಅವನ ಬಿಡಾರ. ಇನ್ನೂ ಹಿಂಸ್ರ ಪಶುಗಳ ಹೆದರಿಕೆಯಿಂದ ಕೆಲವೊಂದು ಗವಿಗಳಲ್ಲಿ ಮನೆ ಮಾಡಿಕೊಂಡೂ ಇದ್ದವರುಂಟು. ಇಂಥ ಸಾವಿರಾರು ಮನುಷ್ಯ, ಸಮಾಜಗಳು–ಅಲ್ಲಲ್ಲಿ ಜೀವನ ಮಾಡಿಕೊಂಡಿದ್ದುವು. ಈ ಗುಂಪುಗಳೇ ಕ್ರಮೇಣ ಒಂದು ಊರಲ್ಲಿ ನೆಲೆನಿಂತು, ನೆಲದ ಮೋಹವನ್ನು ಗಳಿಸಿದ್ದಿದ್ದರೆ, ಅದು ಕೃಷಿಯ ಪ್ರಭಾವದಿಂದ.

ಕೃಷಿಕಸಾಂಗಲು

ಕಾಡುಗಳಲ್ಲಿ, ಹಣ್ಣು ಹಂಪಲುಗಳ ಮೇಲೆಯೇ ಹೊಂದಿ ಬದುಕಿರುವುದು. ಒಂದು ಕಾಲಕ್ಕೆ ಅವನಿಗೆ ಕಷ್ಟವಾಗಿ ಬಂದಿರಬೇಕು. ಆಗಾಗ ಬರಗಾಲಗಳು ಕಾಲಿರಿಸಿರಬೇಕು. ನೀರಿನ ಕ್ಷಾಮ ಕಾಣಿಸಿರಬೇಕು. ಹೆಚ್ಚಿನ ನಾಗರಿಕತೆಗಳು ನದಿ ತೀರಗಳಲ್ಲೇ ಬೆಳೆದುದನ್ನು ಕಂಡರೆ, ನೀರೇ ಅವನನ್ನು ಹಾಗೆ ಸೆಳದು ತಂದ ಶಕ್ತಿ ಎಂದು ಊಹಿಸಬಹುದು. ನೀರಿಲ್ಲದೆ ಯಾರೂ ಬದುಕಲಾರರು. ನೀರಿನ ಜತೆಗೆ ನೀರಲ್ಲಿರುವ ಮೀನು ಮಾನವನ ಆಹಾರವಾಗಿದ್ದಿರಬಹುದು. ಮೊದಲು ತಿಳಿಸಿದ ಅವಶ್ಯಕತೆ ಈಗ ಕಾಣಿಸಿಕೊಳ್ಳಲು ಒಂದು ಕಾರಣವೆಂದರೆ ಮನುಷ್ಯನ ಗುಂಪುಗಳಲ್ಲಿ, ಸಂತಾನ ಹೆಚ್ಚಿ, ಇರುವ ನೀರಿಗೂ, ಆಹಾರಕ್ಕೂ ಮಿತಿ ಬಂದು, ಅವರು ಧಾರಾಳವಾಗಿ ನೀರು ಸಿಗುವ ನದಿಗಳ ಬಳಿಯೋ, ಸರೋವರಗಳ ಬಳಿಯೋ, ತಮ್ಮ ಮುಖ್ಯ ಕೇಂದ್ರವನ್ನಾಗಿ ಆರಿಸಿರಬೇಕು. ಇಲ್ಲೂ ಆಹಾರ ಅವರಿಗೆ ಸಾಕಷ್ಟು ದೊರೆತಿರಲಾರದು. ಅವರಲ್ಲಿ ಕೆಲವರು ಪಶುಪಾಲನೆಯಿಂದ ತಮ್ಮ ಆಹಾರವನ್ನು ದೊರಕಿಸಲು ಕಲಿತರು. ಬರಿಯ ಬೇಟೆಯಿಂದಲೇ ಮಾಂಸ ಒದಗದಿದ್ದಾಗ ಕಾಡುನಾಯಿ, ದನ, ಕುದುರೆಗಳನ್ನು ಪಳಗಿಸಿ, ಅವುಗಳ ಸಂತಾನ ಹೆಚ್ಚಿಸಿಕೊಂಡು, ತಮ್ಮ ಆಹಾರದ ಪ್ರಶ್ನೆಯನ್ನು ಪೂರೈಸಿರಬೇಕು. ಈ ಕೆಲಸದಲ್ಲಿ—ನಾಯಿ ಮನುಷ್ಯನಿಗೆ ತೀರ ಹಿಂದಿನ ಗೆಳೆಯನಾಗಿದ್ದಂತೆ ಕಾಣುತ್ತದೆ. ಅವನ ಬೇಟೆಗೆ ಮೊದಲಿನಿಂದಲೂ ಸಹಾಯಕ ಪ್ರಾಣಿಯಾಗಿದ್ದಂತೆ ಕಾಣುತ್ತದೆ. ಆದರೆ ಈ ಬಗೆಯ ಪಶುಪಾಲಕ ಜೀವನವೇ ಮನುಷ್ಯನು ಒಂದು ಸ್ಥಳದಲ್ಲಿ ನೆಲೆಸಿ ಬದುಕಿರುವುದಕ್ಕೆ ಸಹಾಯ ಮಾಡಿರಲಾರದು. ಇಂತಹ ಜನ ಬಯಲುಗಾವಲು ಬೆಳೆದ ಕಡೆ ಸಂಚಾರಮಾಡಬೇಕಾಗುತ್ತದೆ. ಇಂತಹ ಸಂಚಾರಗಳ ಸಮಯದಲ್ಲಿ ಮನುಷ್ಯ ಕಾಳುಕೊಡುವ ಹುಲ್ಲಿನ ಬೆಳೆಯನ್ನು ಹಿಡಿದು, ಅದನ್ನು ತಾನಾಗಿ ತಂದು ನದಿಯ ನೀರಿನಿಂದಲೋ, ಸರೋವರದ ನೀರಿನಿಂದಲೋ, ನಟ್ಟು ಬೆಳೆಯಿಸಲು ಕಲಿತಿರಬೇಕು. ಬೇಟೆಗಾರರಾಗಿದ್ದ ಕಾಡುಜನಗಳಲ್ಲಿ, ಹಿಂದಿನ ದ್ರಾವಿಡ

ರಲ್ಲಿ ಇಂಥ ಕೃಷಿಯ ಕೆಲಸದ ಹೊರೆಯನ್ನು ಹೆಂಗಸರೇ ಅಧಿಕವಾಗಿ ವಹಿಸುತ್ತಿದ್ದಂತೆ ತೋರುತ್ತದೆ. ಅಂತೂ ಕಾಳುಕಡ್ಡಿಗಳನ್ನು ಬೆಳೆಸಲು ಕಲಿತ ಮನುಷ್ಯ, ನೀರಿನ ಆಸರೆಗಾಗಿ ನದಿತೀರಗಳಲ್ಲಿ ವಾಸಮಾಡ ಬೇಕಾಗಿ ಬಂದುದು ಅನಿವಾರ್ಯ. ನದಿಯ ದಂಡೆಗಳಲ್ಲಿ, ಒರಟು ನೇಗಿಲುಗಳಿಂದ ನೆಲವನ್ನು ಉತ್ತು, ಬೀಜವನ್ನು ಬಿತ್ತಿ ಕಾಳನ್ನು ಬೆಳೆಯುತೊಡಗಿದಾಗಲೇ, ಅವನ ನಾಗರಿಕತೆಯ ಪ್ರಥಮ ಹೆಜ್ಜೆ ನಟ್ಟಿತು. ಅದರಿಂದ ಇಂದಿನ ಅನ್ನ ಮಾತ್ರವಲ್ಲ, ನಾಳಿನ ಅನ್ನವನ್ನೂ ಅವನು ಸಂಗ್ರಹಿಸುವುದು ಸಾಧ್ಯವಾಯಿತು. ಈಜಿಪ್ಟ್, ಯುಫ್ರಿಟಿಸ್, ಸಿಂಧೂ ನದಿಗಳ ದಂಡೆಗಳಲ್ಲಿ ಆರೆಂಟು ಸಾವಿರ ವರ್ಷಗಳ ಹಿಂದಿನ ನಾಗರಿಕ ಸಂಸಾರಗಳನ್ನು ಕಾಣುತ್ತೇವೆ. ಇಂಥ ಕಡೆಗಳಲ್ಲಿ, ಸಾಕಷ್ಟು ಜನ ಗುಂಪಾಗಿಯೇ ವಾಸಿಸಿದ್ದರು. ವಾಸಿಸುವುದಕ್ಕೆ ಮನೆಗಳ ಅವಶ್ಯ ಕತೆಯೂ ಅವರಿಗೆ ಬೇಕಾಯಿತು. ಗವಿಗಳಿದ್ದಲ್ಲಿಗೆ ಹೋಗಿ, ನೆರಳು ಗಳಿದ್ದಲ್ಲಿ ಹೋಗಿ, ಮಳೆ ಬಿಸಿಲುಗಳಿಂದ ರಕ್ಷಣೆಗೊಳುತ್ತಿದ್ದ ಮನುಷ್ಯ ಈಗ ತನ್ನ ನೆರಳನ್ನು ತಾನೇ ಕಲ್ಪಿಸಬೇಕಾಯಿತು. ಮನೆ ಕಟ್ಟ ಬೇಕಾಯಿತು.

ನೆರಳು, ನಗರ

ಈ ರಕ್ಷಣೆಯ ರೂಪ ತಾನಿರುವ ನೆಲ, ಸುತ್ತುಮುತ್ತಲಿನ ಪ್ರದೇಶ ಇವುಗಳನ್ನು ಹೊಂದಿರಬೇಕಾದದ್ದು ಸ್ವಾಭಾವಿಕ. ಮಣ್ಣಿನ ಗೋಡೆಗಳಿಂದ ಆತ ಮನೆ ಕಟ್ಟಿದ್ದುಂಟು. ಮಣ್ಣಿನ ಇಟ್ಟಿಗೆ ಮಾಡಿ ಸುಟ್ಟು, ಗೋಡೆ ಕಟ್ಟಿದ್ದುಂಟು. ಮರಗಳಿಂದ, ಬಿದಿರುಗಳಿಂದ ಮಳೆ ಬೀಳದಂತೆ ಮಾಡು ಕಟ್ಟಿದ್ದುಂಟು. ಮಣ್ಣಿನ ಮೆತ್ತಿಗೆಯ ಮಾಡನ್ನು ಮಾಡಿದ್ದೂ ಉಂಟು. ಈಜಿಪ್ಟ್. ಯುಫ್ರಿಟಿಸ್, ಸಿಂಧೂ ನದಿಗಳ ದಂಡೆಗಳಲ್ಲಿ ಮಣ್ಣಿನ ಮಾಡನ್ನು ಮಾಡಬೇಕಾದ ಅವಶ್ಯಕತೆ ಬಂದಿತು. ಮನೆಯ ಮಾಡಿಗೆ ಮರಗಳನ್ನು ಅಡ್ಡ ಹಾಕಿ, ಅವುಗಳ ಮೇಲೆ ನದಿ ಯಲ್ಲಿ ಬೆಳೆಯುವ ದೋರೆ ಹುಲ್ಲನ್ನು ಹಾಸಿ ಮುಚ್ಚಿ, ಅದರ ಮೇಲೆ ಜಿಗುಟು ಮಣ್ಣನ್ನು ದಪ್ಪನಾಗಿ ಹಾಕಿ ಮಾಡನ್ನು ನಿರ್ಮಿಸಿದ.

ಸಾಮಾನ್ಯ ಮಳೆಯ ರಭಸಕ್ಕೆ ಕೆಳಕ್ಕೆ ಇಂಗದಂತೆ ಮಾಡಿದ. ಬೋರ್ನಿಯ, ಮಲಯ, ಮೊದಲಾದ ಹೆಚ್ಚಿನ ಮಳೆಬೀಳೀವ ಪ್ರದೇಶಗಳಲ್ಲಿ-ನಡುನೀರಿನಲ್ಲಿಯೇ ಎತ್ತರವಾದ ಕಂಬಗಳನ್ನು ನೆಟ್ಟು, ಮರ, ಬಿದಿರುಗಳ ಅಟ್ಟಣೆ ಮಾಡಿ, ತಾಳೆ, ತೆಂಗಿನ ಗರಿಗಳನ್ನು ಹೊದೆಯಿಸಿ, ಇಳುಕಲು ಮಾಡನ್ನು ಮಾಡಿದ್ದನ್ನು ಕಾಣುತ್ತೇವೆ. ಹೀಗೆ ಅವು ವನ್ಯ ಮೃಗಗಳ ಭೀತಿಯಿಂದ ದೂರವಾಗಿರುವುದಕ್ಕೂ ಸಹಾಯವಾಯಿತು. ನೂರಾರು ಮನೆಗಳು, ಒಂದೊಂದು ಗುಂಪಾಗಿರುವುದು ಕ್ರಮ. ಇಂದಿಗೆ ಹತ್ತು ಹದಿನೈದು ಸಾವಿರ ವರ್ಷಗಳ ಹಿಂದೆಯೇ ಮಾಡಲು ಕಲಿತಿದ್ದ ಇವೇ ಆಗಿನ ನಗರಗಳು. ಇವುಗಳಿಂದ ಹುಟ್ಟಿತು ಅವನ ನಾಗರಿಕತೆ.

ದಾಂಪತ್ಯ—ಬಳಗ.

ಒಂದೊಂದು ಬಳಗಕ್ಕೆ ಒಬ್ಬೊಬ್ಬ ಯಜಮಾನನಿರುತ್ತಿದ್ದ. ಬಲಶಾಲಿಯಾದವನೂ ಗುಂಪಿಗೆ ಹಿರಿಯನಾದವನೂ ಆ ಯಜಮಾನತನಕ್ಕೆ ತಕ್ಕವ. ಪ್ರಾಣಿಗಳಲ್ಲಿಯೂ ಹೀಗೆಯೇ ಇರುವುದನ್ನು ಕಾಣುತ್ತೇವೆ. ಗುಂಪಿನ ಹೆಣ್ಣುಗಳೆಲ್ಲ ಅವನವೇ. ಮನುಷ್ಯನಲ್ಲಿ ಈಗಿರುವಂತೆ ಮದುವೆಯ ಸಂಸ್ಕಾರ ತೀರ ಹಿಂದೆ ಇದ್ದಿರಲಾರದು. ಹೆಣ್ಣಿಗಾಗಿ ಸಾಕಷ್ಟು ಹೋರಾಟಗಳು ನಡೆದು, ರಕ್ತಪಾತವಾದ ಮೇಲೆ, ಈ ಸಲುವಾಗಿಯೋ ಏನೋ ವಿವಾಹದ ಏರ್ಪಾಟು ಬಂದಿತು. ಅನಂತರ "ಗಂಡಹೆಂಡಿರು" ಅವರವರ ಮಕ್ಕಳು ಎಂದು ಮನುಷ್ಯನ ಗುಂಪು ಬಂದು ದಾಂಪತ್ಯದ ಸುತ್ತ ಬೆಳೆಯಿತು. ಇದು ಎರಡು ಬಗೆಯಾಗಿ ಬೆಳೆದುದನ್ನು ಕಾಣುತ್ತೇವೆ. ಒಂದು ಮಾತೃಪ್ರಧಾನವಾದ ಗುಂಪು; ಇನ್ನೊಂದು ಪಿತೃಪ್ರಧಾನವಾದ ಗುಂಪು. ಒಂದರಲ್ಲಿ ತಾಯಿ ಯಜಮಾನಿ; ಅವಳ ಅಣ್ಣ ಇಲ್ಲವೇ ತಮ್ಮ ಅವಳ ಪರವಾಗಿ ಯಜಮಾನಿಕೆ ನಡೆಯಿಸುವವ. ದ್ರಾವಿಡರಲ್ಲಿ ಈ ಪದ್ಧತಿ ಹೆಚ್ಚಾಗಿತ್ತೆಂದು ಅನ್ನುತ್ತಾರೆ. ಈ ಪದ್ಧತಿಯ ಉದಾಹರಣೆ — ಕೇರಳ ದಕ್ಷಿಣ ಕನ್ನಡಗಳಲ್ಲಿ ಕಾಣುವ ಮರುಮಕ್ಕತಾಯಂ, ಅಳಿಯ ಸಂತಾನ ಪದ್ಧತಿಗಳಾಗಿ ಇಂದಿಗೂ ರೂಢಿಯಾಗಿ ಬಂದಿದೆ.

ಪಿತೃಪ್ರಧಾನವಾದ ಗುಂಪಿನಲ್ಲಿ ಗಂಡು ಪ್ರಧಾನ ವ್ಯಕ್ತಿ. ತಂದೆಯೇ ಮುಖಂಡ. ತಂದೆಯಿಂದ ಗಂಡುಮಕ್ಕಳು, ಅಧಿಕಾರ ಪಡೆದರು. ಆರ್ಯರಲ್ಲೇ ಕುಟುಂಬ ಹೀಗಿತ್ತು. ಈ ಬಗೆಯ ವಿಭಾಗದಿಂದ ಸಮಾಜದ ಬೆಳವಣಿಗೆ ಹೇಗಾಯಿತೆಂದು ಹೇಳುವುದು ಇಲ್ಲಿನ ಉದ್ದೇಶವಲ್ಲ. ಮೂಲ ಮಾನವನು ಹೇಗೆ ಗುಂಪು, ಕುಟುಂಬ, ಕುಟುಂಬವಾಗಿ ಬೆಳೆಯಿತೆಂದು ತಿಳಿದರೆ ಸಾಕು. ಇಂಥ ಹಲವಾರು ಕುಟುಂಬಗಳು ಒಂದೊಂದು ಊರಿನಲ್ಲಿ ಕಲೆತು ನೆಲೆಸಿದರು.

ಯಜಮಾನ

ನದಿಯ ದಂಡೆಗಳಲ್ಲಿ — ವಾಸಿಸಿ ಕೂಡಿ, ಜಮೀನನ್ನು ಉತ್ತರು, ಬಿತ್ತಿದರು ಬೆಳೆದುದನ್ನು ಹಂಚಿಕೊಂಡರು. ಇಂಥ ಗುಂಪುಗಳಲ್ಲಿ, ಕೆಲಸ ವಿಭಾಗಿಸುವುದಕ್ಕೆ, ಕೆಲಸಮಾಡುವುದಕ್ಕೆ ಅವರವರ ಜೀವನಗಳಲ್ಲಿ ತೊಡಕು ತೊಂದರೆಗಳಿಗೆ ಸಮಾಧಾನ ಹೇಳುವುದಕ್ಕೆ ಯಜಮಾನನೆಂಬ ವ್ಯಕ್ತಿ ಬೇಕೇ ಬೇಕಷ್ಟೆ. ಒಂದೊಂದು ಊರಲ್ಲಿ ಆಯಾಯ ಊರವರು ಒಬ್ಬ ಯಜಮಾನನನ್ನು ಆರಿಸಲೇ ಬೇಕಾಯಿತು. ಅವನ ಉಪಯೋಗ ಸಮಾಜಕ್ಕೆ ಯಾವ ರೀತಿಯಿಂದ ಇದೆ ಎಂಬುದನ್ನು ನೋಡಿ ಆ ಸಮಾಜದ ಯಜಮಾನನನ್ನು ಆರಿಸಿರಬೇಕು. ದೆವ್ವ ದೇವತೆಗಳಿಗೆ ಬೆದರಿಕೊಂಡಿದ್ದ ಜನರ ಪಾಲಿಗೆ ಅವುಗಳನ್ನು ಒಲಿಸುವೆನೆಂದು ತೋರಿಸಿಕೊಂಡ ಪಾಮರನು,ಜನರ ಯಜಮಾನನಾದ. ಹೆಚ್ಚಿನ ಪ್ರಶ್ನೆಗಳು ಸಮಾಜದಲ್ಲಿ ಏಳದಿದ್ದಾಗ ತೀರ ಹಿರಿಯನಾದವನು, ಅನುಭವಶಾಲಿಯಾದವನು, ಯಜಮಾನನಾದ. ಈ ಯಜಮಾನನಿಗೆ ಎಲ್ಲ ಜನ ಸದಾ ವಿಧೇಯರಾಗಿ ಇದ್ದರು ಎಂದು ಊಹಿಸಬೇಕಾಗಿಲ್ಲ. ಕೆಲವರಿಗೆ ಅವನ ಮಾತು ಸರಿಹೋಗದಿದ್ದಿರಬಹುದು. ಅಂಥ ವೇಳೆಯಲ್ಲಿ, ಆ ಯಜಮಾನನು ತನ್ನ ಮುಷ್ಟಿ ಬಲದಿಂದಲೂ ಅಧಿಕಾರ ನಡೆಯಿಸಲು ಶಕ್ತನಾಗಿರಬೇಕಾಗುತ್ತಿತ್ತು.

ಅರಸು

ಇನ್ನೊಂದು ಕಾರಣದಿಂದಲೂ ಇಂಥ ಗುಂಪುಗಳಿಗೆ ಯಜಮಾನ ಅನಿವಾರ್ಯವಾಯಿತು. ಮನುಷ್ಯನ ಹಲವು ಸಮಾಜಗಳು ಅಲ್ಲಲ್ಲಿ

ನೆಲೆಹಿಡಿದು ನಿಂತ ಸಮಾಜಗಳಾಗಿದ್ದರೂ, ಎಲ್ಲರೂ ಹಾಗೆ ಮಾಡಲಿಲ್ಲ. ಅನೇಕರು ಇನ್ನೂ ಸಂಚಾರಿ ಜೀವನ ನಡೆಯಿಸುತ್ತಿದ್ದರು. ಪಶು ಪಾಲನೆಗಾಗಿ ಹಾಗೆ ಮಾಡಿದ್ದಿರಬಹುದು. ಬೇಟೆಯನ್ನು ಹಿಂಬಾಲಿಸಿ ಕೊಂಡು ದೇಶ ದೇಶಗಳಿಗೆ ಅಲೆದಾಡುತ್ತಿದ್ದಿರಬಹುದು. ಅಂಥವರ ಗುಂಪಿಗೂ ಯಜಮಾನರಿದ್ದಿರಬೇಕು. ಆರ್ಯರು, ಬಹು ಹಿಂದೆಯೇ ಅಂಥ ಜೀವನ ನಡೆಯಿಸಿದವರು. ವೇದದ ಹಲವು ಋಕ್ಕುಗಳು ಅವರ ಈ ಬಗೆಯ ಜೀವನ ಬಣ್ಣಿಸುತ್ತವೆ ಇಂಥ ಸಂಚಾರಿ ಗುಂಪುಗಳು ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವಾಗ, ಒಂದೇ ಕಡೆ ಮನೆ ಮಠ ಕಟ್ಟಿಕೊಂಡು ಬಾಳಿದ ಜನಗಳನ್ನು ಸಂಧಿಸಿದ್ದುಂಟು. ಅವರಲ್ಲಿ ಕೆಲವರಿಗೆ ನಾಗರಿಕರ ಹೆಣ್ಣುಗಳನ್ನು ಕದಿಯುವ ಅಪೇಕ್ಷೆ ಬಂದಿರ ಬೇಕು; ದನ ಕುರಿಗಳನ್ನು ಕದಿಯುವ ಅಪೇಕ್ಷೆ ಬಂದಿರಬೇಕು. ಅವ ರಿಗೆ ಕೂಡಿ ಒಬ್ಬರ ಕಾಳನ್ನೊಬ್ಬರು ಅಪಹರಿಸುವ ಮನಸ್ಸೂ ಆಗಿರ ಬಹುದು. ಇದರಿಂದ ನಾಗರಿಕರಿಗೂ. ಸಂಚಾರಿಗಳಿಗೂ ಅನೇಕ ವೇಳೆ ಯುದ್ಧ ಪ್ರಾಪ್ತಿಸಿರಬೇಕು ಇಂತ ಜೀವನ ನೆಲೆಸಬೇಕೆಂದು ಒಂದು ಕಡೆ ಬೀಡು ಬಿದ್ದಾ ನಾಗರಿಕರ ಕೆಲಸ, ಇದರಿಂದಾಗಿ ತೊಂದರೆಗೀಡಾ ಯಿತು. ಬೇಸಾಯದ ಜನತೆಗೆ ಅಂದು ಯುದ್ಧವೃತ್ತಿಯನ್ನು ಕೈ ಕೊಳ್ಳಬೇಕಾಯಿತು ಅದಕ್ಕಾಗಿ ಬಲಿಷ್ಠನಾದವನನ್ನೂ, ಕಾದಾಟ ದಲ್ಲಿ ಚತುರನನ್ನೂ ತಮ್ಮ ಯಜಮಾನನನ್ನಾಗಿ ಆರಿಸಬೇಕಾಯಿತು. ಪ್ರತಿ ಮನೆಯವರು ಶಕ್ತರಾದ ಯುವಕರನ್ನು ಆ ಕ್ಷಣಕ್ಕೆ ಒಪ್ಪಿಸ ಬೇಕಾಯಿತು. ಊರುಗಳು ವಿಸ್ತಾರದಲ್ಲಿ ಬೆಳೆದಂತೆ, ಊರಿನ ರಕ್ಷಣೆಗೆ ಸೇನೆ, ಕಾವಲು ಬೆಳೆಯಬೇಕಾಯಿತು. ಹಲವಾರು ಜನ ಅದೇ ವೃತ್ತಿಯನ್ನು ಕೈಗೊಳ್ಳಬೇಕಾಯಿತು. ಅದರ ಯಜಮಾನನು ಅರಸ ನೆನಿಸಿದ. ಅವನ ಸೇನೆ ಸಾಕುವುದಕ್ಕೆ ಊರಿನ ಜನ ತೆರ ಕೊಡ ಬೇಕಾಯಿತು.

ವಿವಿಧ ಕಸಬುಗಳು

ನಗರಗಳು ಬೆಳೆದುವು; ಅವುಗಳಿಂದ ಜನಕ್ಕೆ ನೆಮ್ಮದಿಯಾಯಿತು; ಜನ ಸಂಖ್ಯೆಯೂ ಸ್ವಾಭಾವಿಕವಾಗಿ ಹೆಚ್ಚಿತು. ಅದರಿಂದ ಬೇಸಾಯ

ವೂ ಹೆಚ್ಚಾಗಬೇಕಾಯಿತು. ನದಿಯ ನೀರಿನಿಂದ ನೀರಾವರಿಯನ್ನು ಮಾಡಿಕೊಂಡು ಬೆಳೆಬೆಳೆಯುವ ಪಾಠವನ್ನು ಜನ ಕಲಿತರು ನೂರಾರು ಮನೆಮಠಗಳು ಬೆಳೆದಲ್ಲಿ, ಇತರ ಸಲಕರಣೆಗಳೂ ಜನಕ್ಕೆ ಬೇಕಾದುವು. ಹಾದಿಗಳೂ, ದೇವಾಲಯಗಳೂ, ಗ್ರಾಮಚಾವಡಿಗಳೂ ಇವೆಲ್ಲ ಅನಿವಾರ್ಯವಾದುವು. ಮನುಷ್ಯ ಬರಿಯ ಅನ್ನಜೀವಿಯಾಗಿರುವ ಬದಲು ಮಾನಸಿಕ ಜೀವಿಯೂ ಆಗತೊಡಗಿದ. ಶೃಂಗಾರ ಪ್ರಿಯನೂ ಆದ. ಬಟ್ಟೆ ತೊಡಲು ಕಲಿತ, ವಿರಾಮದಲ್ಲಿ ಹಾಡಲು, ಆಡಲು ಕಲಿತ. ನಾಗರಿಕತೆ ಎಂಬುದು ಇದೇನೆ. ಬರಿಯ ಅನ್ನದಿಂದ ತೃಪ್ತಿಯಾಗಿದ್ದ ಮಾನವಜೀವಿ, ತನ್ನ ಬುದ್ಧಿ ಕೌಶಲ್ಯಕ್ಕೆ ಒಗ್ಗುವ ನೂರಾರು ಸಾಧನಗಳನ್ನೂ, ವಿಲಾಸಗಳನ್ನೂ ಕಲಿತನು ಹೀಗಾಗಿ ಜನರು ಬೇಟೆ, ಬೇಸಾಯ, ಸೈನ್ಯ ಇಷ್ಟೇ ಉದ್ಯೋಗಗಳನ್ನಲ್ಲದೆ, ಇತರ ಕೈಗಾರಿಕೆಗಳನ್ನೂ ಕಲಿತುಕೊಂಡರು. ನೇಕಾರರು, ಚಿನಿವಾರರು ಕಂಚುಗಾರರು, ಬಡಗಿಗಳು, ಸಮಗಾರರು, ಕ್ಷೌರಿಕರು ಮೊದಲಾದವರೆಂದು–ಒಂದೊಂದು ಮನೆಯವರು ಒಂದೊಂದು ವೃತ್ತಿಯನ್ನು ನಡೆಯಿಸಿಕೊಂಡು ಬಂದರು. ಈ ವೃತ್ತಿಯವರು ಮಾಡುವ ಸೇವೆ ಸಮಾಜಕ್ಕೆ ಅಗತ್ಯ, ಸಮಾಜ ಬೆಳೆಯುವ ಅನ್ನ ಇವರಿಗೆ ಅವಶ್ಯ. ಒಬ್ಬರು ಬೆಳೆದುದನ್ನು ಇನ್ನೊಬ್ಬರಿಗೆ ಕೊಟ್ಟು, ಅವರು ಮಾಡಿದ್ದನ್ನು ಕೊಳ್ಳುವ ವ್ಯಾಪಾರವೂ ಬೇಕಾಯಿತು. ಈ ವ್ಯಾಪಾರವನ್ನೇ ವೃತ್ತಿಯಾಗಿ ಅನುಕರಿಸಿಕೊಂಡು ಹೋಗುವ ಜನಗಳೂ ಉಂಟಾದರು. ಕಾಲಕ್ರಮೇಣ ನಾಗರಿಕತೆ ಎಂಬುದು ಒಂದು ಗುಂಪಿನ ಯಾವತ್ತು ಅವಶ್ಯಕತೆಗಳನ್ನು ಪೂರೈಸಬೇಕಾದ ಒಂದು ಸಂಸ್ಥೆಯೇ ಆಗಿ ಪರಿಣಮಿಸಿತು.

ಪಟ್ಟಣಗಳ ನಾಗರಿಕತೆ

ಗ್ರೀಸ್ ದೇಶದಲ್ಲಿ ಪಟ್ಟಣಗಳ ನಾಗರಿಕತೆ ಬಹಳವಾಗಿ ಮುಂದುವರಿದುದನ್ನು ಕಾಣುತ್ತೇವೆ. ಅಲ್ಲಿ ಕವಿಗಳೂ, ತತ್ವಜ್ಞಾನಿಗಳೂ, ಪೂಜಾರಿಗಳೂ ಜನತೆಯ ಅತ್ಯಾದರಕ್ಕೆ ಪಾತ್ರರಾದುದನ್ನು ಕಾಣುತ್ತೇವೆ. ದೇಶವನ್ನು ವೈರಿಗಳಿಂದ ರಕ್ಷಿಸಬಲ್ಲ ಸೇನಾನಿ

ಗಳೂ, ಸೈನಿಕರೂ, ಅಷ್ಟೇ ಜನತೆಯ ಆದರಕ್ಕೆ ಪಾತ್ರರಾಗಿದ್ದರು. ಇಂಥ ವಿವಿಧ ವ್ಯಕ್ತಿಗಳುಳ್ಳ ಒಂದು ಸಮಾಜದಲ್ಲಿ ಗುಂಪಿನ ಜೀವನ ಹೇಗೆ ಸಾಗಿರಬೇಕು? ಅದರ ಯಜಮಾನ ಹೇಗಿರಬಹುದು? ಗುಂಪಿನ ಯಾವತ್ತು ಅವಶ್ಯಕತೆಗಳನ್ನು ವ್ಯವಸ್ಥಿತವಾಗಿ ಸಾಗಿಸುವ ಯೋಗ್ಯತೆಯುಳ್ಳ ಹಿರಿಯರು ಮಾತ್ರ ಯಜಮಾನಿಕೆಗೆ ತಕ್ಕವರಾಗುತ್ತಿದ್ದರು. ಊರಿನ ಜನ ಅಂಥ ಹಿರಿಯರನ್ನು ತಾವಾಗಿ ಆರಿಸುತ್ತಿದ್ದರು. ಆತನ ಬೆಂಬಲಕ್ಕೆ, ಸಹಾಯಕ್ಕೆ ಒಂದೊಂದು ವಿಷಯದಲ್ಲಿ ತಿಳುವಳಿಕೆಯುಳ್ಳ ಒಬ್ಬೊಬ್ಬ ಬುದ್ಧಿವಂತನನ್ನು ಕೊಡುತ್ತಿದ್ದರು. ಈ ನಗರ ತೀರ ದೊಡ್ಡದಾದಾಗ ಈ ಪ್ರತಿನಿಧಿಗಳು ಸೇರಿ ಸಭೆಯಾಗಿ ಊರಿನ ಆಗುಹೋಗುಗಳನ್ನು ನಿರ್ಧರಿಸುತ್ತಿದ್ದರು. ಕಂದಾಯ, ಬೇಸಾಯ, ಯುದ್ಧ, ಹಬ್ಬ, ಪೂಜೆ, ಆರೋಗ್ಯ ವಿಲಾಸ ಎಲ್ಲವುಗಳನ್ನೂ ಊರ ಪ್ರತಿನಿಧಿಗಳು ಸೇರಿ ನಡೆಯಿಸಿಕೊಂಡು ಹೋಗಲು ಕಲಿತರು. ಊರು ತೀರ ಚಿಕ್ಕದಿದ್ದಾಗ ಪ್ರಾಯಸ್ಥರಾದ ಊರಿನ ಜನರೆಲ್ಲರೂ ಒಟ್ಟು ಸೇರಿ, ಇಂಥ ವಿಷಯಗಳ ಕುರಿತು ಚರ್ಚಿಸಿ, ಕೆಲಸ ನಡೆಯಿಸುತ್ತಿದ್ದರು. ತಮ್ಮ ಪ್ರತಿನಿಧಿಗಳು ಅನ್ಯಾಯವಾಗಿ ವರ್ತಿಸಿದರು. ಇಲ್ಲವೆ ಅಯೋಗ್ಯವಾಗಿ ವರ್ತಿಸಿದರು—ಎಂದು ಕಂಡಾಗ ಪ್ರಜೆಗಳೆಲ್ಲರು ಸೇರಿ ಅವರನ್ನು ಕಿತ್ತುಹಾಕಿ, ಬೇರೆಯವರನ್ನು ಆರಿಸುವ ಕ್ರಮವು ರೂಢಿಗೆ ಬಂದಿತು. ಈ ಬಗೆಯ ಮುಖಂಡತ್ವ ಮತ್ತು ಸಮಾಜವ್ಯಕ್ರಮವು ಬಹು ಹಿಂದಿನಿಂದಲೂ ಗ್ರೀಸ್ ಮೊದಲಾದ ದೇಶಗಳಲ್ಲಿತ್ತು. ಜನಕ್ಕೆ ತಮ್ಮ ಸ್ವಾತಂತ್ರ್ಯದ ವಿಷಯವಾಗಿ ತಮ್ಮ ಸುಖದುಃಖಗಳ ವಿಚಾರವಾಗಿಯೂ ಬುದ್ಧಿ ಚೆನ್ನಾಗಿ ಓಡುವಲ್ಲಿ ಈ ಬಗೆಯ ಸರಕಾರಕ್ಕಾಗಿ ಅವರು ಪ್ರಯತ್ನಿಸುವುದು ತೀರ ಸ್ವಾಭಾವಿಕ.

ಅನುವಂಶಿಕ ಅರಸುತನ

ಆದರೆ ಪ್ರತಿನಾಗರಿಕನಿಗೂ ಇಷ್ಟೆಲ್ಲ ಬುದ್ಧಿ ಶ್ರಮ ಬೇಡವೆನಿಸಿದಾಗ ಇತರ ಕಠಿಣ ಪ್ರಸಂಗಗಳು ಬಂದಾಗ ಮೇಲಿಂದ ಮೇಲೆ ಹೋರಾಡುವ ಬದಲಾಗಿ, ಅದಕ್ಕಿಂತ ಹೆಚ್ಚಾಗಿ ತಮ್ಮನ್ನು ಕಷ್ಟದಿಂದ ಪಾರು ಮಾಡು

ವನು ಮಾತ್ರ ತಮಗೆ ಇದ್ದರೆ ಸಾಕು ಎಂದು ತೋರಿದ್ದೂ ಉಂಟು ಉದಾಹರಣೆಗಾಗಿ — ಒಂದು ನಗರದ ಮೇಲೆ, ಮೇಲಿಂದ ಮೇಲೆ ಶತ್ರುಗಳ ಧಾಳಿ ಆಗುತ್ತಿದೆ ಎಂದು ಯೋಚಿಸಿರಿ. ಹಾಗೆ ವೈರಿಗಳಿಂದ ಪೀಡಿತರಾಗುವ ಜನ ತಮ್ಮ ಬದುಕಿಗೇ ಹೆಣಗಾಡಬೇಕಾಗುತ್ತದೆ. ಅಂಥ ವೇಳೆಯಲ್ಲಿ ಉಳಿದ ವಿಷಯಗಳಿಗಿಂತ ಹೆಚ್ಚಾಗಿ, ಚೆನ್ನಾಗಿ ಯುದ್ಧ ಮಾಡಬಲ್ಲ ಶಕ್ತನನ್ನೇ ಅವರು ಹಿಂಬಾಲಿಸಬೇಕಾಗುತ್ತದೆ. ಅವನ ಉಳಿದ ಕುಂದುಕೊರತೆಗಳನ್ನು ಮರೆತು, ಅವನನ್ನೇ ತಮ್ಮ ಅರಸನನ್ನಾಗಿ ಮಾಡಬೇಕಾಗುವುದೂ ಉಂಟು. ಸ್ವಾಭಾವಿಕವಾಗಿ ಯಾರು ನಮ್ಮನ್ನು ಅನಿವಾರ್ಯವೆಂದು ತಿಳಿಯುತ್ತಾರೋ, ಅವರ ಮೇಲೆ ನಾವು ನಮ್ಮ ಅಧಿಕಾರ ಹೊರಿಸುವುದು ಹೆಚ್ಚು. ನಾನಿಲ್ಲದೆ ಉಳಿದವರೇನು ಮಾಡಿಯಾರು? ಎಂಬ ಹೆಮ್ಮೆ ಅಂಥ ಮುಖಂಡನಿಗೆ, ಅರಸನಿಗೆ ಬರುವುದುಂಟು. ಸದಾ ಜನರನ್ನು ಒಲಿಸಿ, ಅವರಿಂದ ಅಧಿಕಾರ ಗಳಿಸಿ, ಉಳಿಸಿಕೊಳ್ಳುವ ಕೆಲಸ ಕಷ್ಟ. ತಮ್ಮ ಶಕ್ತಿಯ ಹೆಚ್ಚಳದಿಂದ ಜನರನ್ನು ಬೆದರಿಸಿ, ತಮ್ಮ ಅಧಿಕಾರಕ್ಕೆ ಅವರು ಮಣಿಯುವಂತೆ ಮಾಡುವುದು ಸುಲಭ. ಇಂಥ ಅರಸರೂ ಉಂಟಾದರು. ಅಂತು ಅರಸುತನ ಇತರ ವೃತ್ತಿಗಳಂತೆಯೇ ಕುಲವನ್ನು ಹೊಂದಿಕೊಂಡು ಅನುವಂಶಿಕವಾಗಿ ಬೆಳೆದು ಬಂದಿತು. ಜನಕ್ಕೆ ತಂತಮ್ಮ ಜೀವನದ ಪಾಡು ಹೆಚ್ಚೆಂದು ಕಾಣಿಸುತ್ತಿದ್ದಾಗ ಯಾರು ನಮ್ಮನ್ನಾಳಿದರೇನು? ಶಾಂತಿಯಿಂದ ಬದುಕುವುದಕ್ಕೆ ಸಾಧ್ಯವಾದರಾಯಿತು ಎಂದು ತೋರುವುದು ಸಹಜ. ಅಂತೂ ಒಂದೆರಡು ಸಾವಿರ ವರ್ಷಗಳ ನಾಗರಿಕ ಜೀವನದೊಳಗಾಗಿ, ಅರಸುತನ ಅನುವಂಶಿಕವಾದ ಒಂದು ಸಂಸ್ಥೆಯಾಯಿತು.

ಮತ ಧರ್ಮಗಳು

ಇದರಂತೆ ಜನಗಳ ಮನಸ್ಸನ್ನು ವಿಶೇಷವಾಗಿ ಕದಲಿಸಿದ, ಕದಲಿಸುವ ಮತ, ಧರ್ಮಗಳೇ ಬವು ಅದೇ ಹಾದಿಯನ್ನು ಹಿಡಿದು ಜನರ ಪುರೋಹಿತರು, ವೈದ್ಯರು ಅನುವಂಶಿಕ ಅಧಿಕಾರಿಗಳಾದರು. ಕೆಲವು ಆದಿವಾಸಿಗಳಲ್ಲಿ – ಅರಸನೂ ಪುರೋಹಿತನೂ ಒಂದೇ ವ್ಯಕ್ತಿಯಾಗಿದ್ದು

ದನ್ನು ಕಾಣುತ್ತೇವೆ. ಅವರಿಬ್ಬರೂ ಬೇರೆ ಬೇರೆ ವ್ಯಕ್ತಿಗಳಾಗಿರುವಲ್ಲಿ, ಜನತೆಯ ಮನ್ನಣೆಗಾಗಿ ಪರಸ್ಪರ ಸ್ಪರ್ಧೆ ಉಂಟಾಗುತ್ತಿತ್ತು. ಈ ಎರಡು ಅಧಿಕಾರಿಗಳೂ ಜನತೆಯ ಮನಸ್ಸನ್ನೂ, ದೌರ್ಬಲ್ಯವನ್ನೂ, ಬಹುವಾಗಿ ಹೊಂದಿರತಕ್ಕ ಸಂಗತಿಗಳು. ಪ್ರಾಚೀನ ಈಜಿಪ್ಟಿನಲ್ಲಿ "ಪರೋಪರು" ಅರಸು ಮತ್ತು ಪೂಜಾರಿಗಳಾಗಿ ಶತಮಾನ ಶತಮಾನಗಳ ತನಕ ನಿರಂಕುಶ ಪ್ರಭುತ್ವ ಸಾಗಿಸಿದರು. ಹೀಗಾಗಿ ಜನರ ಮನಸ್ಸನ್ನು ಸೆಳೆಯುವ ಐಹಿಕ ವಿಚಾರಗಳಿಗೂ ಇಲ್ಲವೇ ಪಾರಮಾರ್ಥಿಕ ವಿಚಾರಗಳಿಗೂ ಒಂದೇ ಯಜಮಾನನುಂಟಾಗಿ ಮತ-ಮತ್ತು ರಾಜಕೀಯಗಳಿಗೆ ಸ್ಪರ್ಧೆ ಬರಲಿಲ್ಲ. ಪ್ರಾಚೀನ ಎಸ್ಸೀರಿಯಾ ನಾಗರಿಕತೆಗಳಲ್ಲಿ ಜನರ ಮೇಲೆ ಅರಸನ ಪ್ರಭಾವಕ್ಕಿಂತ ಪುರೋಹಿತರ ವರ್ಚಸ್ಸೇ ಅಧಿಕವಾಗಿತ್ತು. ಅವರೆಂದಂತೆ ರಾಜಕೀಯ ನಡೆಯಬೇಕಾಗಿತ್ತು.

ಮತ ಪ್ರಭಾವ

ಯುರೋಪಿನ ಇತಿಹಾಸದಲ್ಲಿ ಬೇರೆಯೇ ಪರಿಸ್ಥಿತಿಯನ್ನು ಕಾಣುತ್ತೇವೆ. ಅಲ್ಲಿ ಕೆಥೋಲಿಕ್ ಮತ ಪ್ರಚಾರಗೊಂಡಿತು. ಈ ಮತ ಸಂಸ್ಥೆ .ಬಹು ದೊಡ್ಡ ಸಂಸ್ಥೆಯಾಯಿತು. ಪಾದ್ರಿಗಳು, ಪೋಪರು ಜನರ ಮಾನಸಿಕ ಮನ್ನಣೆಯನ್ನು ಹೆಚ್ಚಾಗಿ ಪಡೆದರು! ದೇಶಗಳಲ್ಲಿ ಹಲವು ಅರಸರಿದ್ದರು. ಅರಸರಿಗೂ ಮತ ಗುರುಗಳಿಗೂ ಹಲವು ಶತಮಾನಗಳ ತನಕ ಸ್ಪರ್ಧೆ ಉಂಟಾಯಿತು. ತಮ್ಮ ಶಕ್ತಿ ಕುಗ್ಗಬಾರದೆಂದು ಮತಾಚಾರ್ಯರು, ರಾಜಕೀಯದಲ್ಲೂ ತಮ್ಮ ಕೈಯನ್ನು ತುಡುಕಿಸಿದರು. ಇದರಿಂದ ಪ್ರಜೆಗಳ ಮನಸ್ಸು ವಿಹ್ವಲವಾಯಿತು- ಒಬ್ಬರು ಇನ್ನೊಬ್ಬರನ್ನು ಕೊಲ್ಲಲು ಪ್ರಯತ್ನಿಸಿದರು. ಗುರುಗಳು ಅರಸರನ್ನು ತಮ್ಮ ಬಲೆಗೆ ಕೆಡವಲು ಪ್ರಯತ್ನಿಸಿದರು. ಅರಸರು ಗುರುಗಳನ್ನು ತಮ್ಮ ಬಲೆಗೆ ಕೆಡವಲು ಪ್ರಯತ್ನಿಸಿದರು. ಜನರ ಭಕ್ತಿಯು ಇವರಲ್ಲಿ ಬೇರೆ ಬೇರೆ ಪ್ರಮಾಣದಿಂದ ಹರಡಿ ಹೋಯಿತು.

ಚೀನಾದೇಶದಲ್ಲಿ ಅಲ್ಲಿ ಪ್ರಚಾರವಾಗಿದ್ದ ಟೋಯಿ. ಲೋತ್ಸಿ. ಕನ್‌ಫ್ಯೂಸನ ಮೊದಲಾದ ಮತಗುರುಗಳಿಗೂ ಅಲ್ಲಿನ ಆಗಿನ ಅರಸರಿಗೂ

ಸಾಕಷ್ಟು ಸ್ಪರ್ಧೆ ಇದ್ದಿತು. ಎಷ್ಟೋ ಅರಸರು ಈ ಸ್ಪರ್ಧೆ ನಿವಾರಿಸಲು ಇಂಥ ಧರ್ಮ ಗುರುಗಳನ್ನು, ತಮ್ಮ ಪ್ರಧಾನರನ್ನಾಗಿ ಮಾಡಿಕೊಂಡರು. ಈ ರೀತಿಯಿಂದ ಅರಸರು ಜನರ ಮನಸ್ಸನ್ನೊಲಿಸಲು ಪ್ರಯತ್ನಿಸಿದರು.

ಹಲವು ಅರಸರು, ಹಲವು ಗುರುಗಳು

ನಾಗರಿಕತೆ ಬೆಳೆದಂತೆ ಊರು ಊರುಗಳು ಸೇರಿ, ದೇಶಗಳಾದುವು. ಅರಸರ ರಾಜ್ಯ ವಿಸ್ತರಿಸಿತು. ಅವರಲ್ಲಿ ರಾಜ್ಯ ವಿಸ್ತಾರದ ಆಶೆಯೂ ಬೆಳೆಯಿತು. ಈ ದುರಾಸೆಯಿಂದಾಗಿ, ಮೇಲಿಂದ ಮೇಲೆ ಕದನಗಳಾದುವು. ಊರ ಜನ ಈ ಕನದಗಳಲ್ಲಿ ಬಲಿಯಾದರು, ಸುಲಿಗೆಗಳಿಗೆ ತುತ್ತಾದರು. ಹಲವು ಬಗೆಯ ಹಾನಿಗಳಿಗೆ ಗುರಿಯಾದರು. ಅದರ ಹೆಣ್ಣುಗಂಡುಗಳು ಗೆದ್ದ ಅರಸನ ಮತ್ತು ಸೇನೆಯ ಗುಲಾಮರಾಗಿ ಮನೆ ಮಠ ಬಿಟ್ಟು ನಾನಾ ವಿಧವಾಗಿ ಬನ್ನ ಪಡಬೇಕಾಯಿತು .ಇಂಥ ಅರಸುಗಳ ಸ್ವಂತ ಜೀವನವೂ ಯೋಚನೆ ಇಲ್ಲದೆ ಸಾಗದಂತಾಯಿತು. ಅರಸುತನಕ್ಕಾಗಿ ಅವನ ಅಣ್ಣ ತಮ್ಮಂದಿರು, ಮಕ್ಕಳು ಸ್ಪರ್ಧಿಸಿದರು. ಅರಮನೆಯೊಳಗೆ ಕಪಟ ಕುತಂತ್ರಗಳು ನಡೆದು, ಕೊಲೆಗಳಾದುವು, ದಂಗೆಗಳಾದುವು. ಅನುವಂಶಿಕ ಅರಸುತನ ಈ ಬಗೆಯ ಅಧಿಕಾರ ಲಾಲಸೆಯ ಕೈಗೂಸಾಯಿತು. ಇದರಿಂದ ಜನಕ್ಕೆ ತೊಂದರೆ ಹಿಂಸೆಗಳಾಗುತ್ತಲೇ ಇತ್ತು. ಅನುವಂಶಿಕ ಅರಸರ ಯೋಗ್ಯತೆ–ಕೇವಲ ಬಲಶಾಲಿ ಕುತಂತ್ರರಾದವರಿಗೆ ಬರುವ ಅಧಿಕಾರವನ್ನು ಕಂಡು ಜನಕ್ಕೆ ಅರಸುತನದ ಮೇಲಿನ ಗೌರವ ಕಡಿಮೆಯಾಯಿತು.

ಮತಗಳೂ ಧರ್ಮಗಳೂ

ಒಂದು ದೇಶದಲ್ಲಿ ಸದಾ ಯುದ್ಧ ನಡೆಯುತ್ತಿರುವುದಿಲ್ಲವಾದರೂ, ಶಾಂತಿ ಕಾಲದಲ್ಲಿ ಜನಗಳ ಜೀವನ ನಿಶ್ಚಿಂತವಾಗಿರುತ್ತದೆ ಎನ್ನುವಂತಿಲ್ಲ. ನಾಗರಿಕತೆ ಬೆಳೆದಂತೆ ಅದರ ಜತೆಗೆ ನೂರಾರು ಮತ ಧರ್ಮಗಳು ಹುಟ್ಟಿದುವು. ಮನುಷ್ಯನ ಊಹೆ ಎಷ್ಟೋ ಬಗೆಯ ದೇವರು ದೇವತೆಗಳನ್ನು ಕಲ್ಪಿಸಬಹುದೋ ಅಷ್ಟಲ್ಲಿ ದೇವರು ದೇವತೆಗಳುಂಟಾದುವು.

ಅಷ್ಟೆಲ್ಲ ಮತ ಪ್ರಚಾರಕರೂ ಗುರುಗಳೂ ಆದರು. ಸಣ್ಣ ಪುಟ್ಟ ದೇವರುಗಳ ಬದಲಿಗೆ ದೊಡ್ಡ ದೇವರುಗಳೂ ಆದರು. ಅಂಥ ಮತ ಧರ್ಮಗಳು ಮನುಷ್ಯ ಹುಟ್ಟಿದಂದಿನಿಂದ ಸಾಯುವ ತನಕ ಹೀಗಿರಬೇಕು, ಹೀಗಿರಬಾರದು – ಎಂದು ನೂರಾರು ಬಗೆಗಳಲ್ಲಿ ಬೋಧಿಸತೊಡಗಿದುವು. ಸಾವಿನ ಆಚಿನ ಬೆದರಿಕೆ ಮನುಷ್ಯನಿಗೆ ಮೊದಲಿನಿಂದಲೂ ಇತ್ತು. ಹೀಗಾಗಿ ಮರಣದ ಬಳಿಕ ಸ್ವರ್ಗ ನರಕಗಳ ಬೆದರಿಕೆ ತೋರಿಸಿ ಮನಸ್ಸನ್ನು ಕಲುಕಿಸುವ ಮತಗಳೂ ಹುಟ್ಟಿದುವು. ಮನುಷ್ಯನ ಸಮುದಾಯದಲ್ಲಿ ಇಂಥ ಅನೇಕ ಮತಗಳು ಹುಟ್ಟಿದುವು. ಸತ್ತುವು. ಅವುಗಳಲ್ಲಿ ಒಳ್ಳೆಯವುಗಳೂ ಇದ್ದುವು, ಕೆಟ್ಟವುಗಳೂ ಇದ್ದುವು. ವಿಶಾಲವಾದ ನೋಟದಿಂದ, ಎಲ್ಲ ಮಾನವರು ಒಂದು ತಂದೆಯ ಮಕ್ಕಳು ಎಂದು ಸಾರಿದ ಉದಾರ ಮತಗಳುಂಟು. ‘ಈ ದೇವರು ಈ ಮತದ ಮೂಲಪುರುಷ. ಈ ಜನರ ತಂದೆ ಉಳಿದವರೆಲ್ಲರೂ ನರಕಕ್ಕೆ ತಕ್ಕವರು’ ಎಂದು ಕೆಂಗಾಜಿನಿಂದ ನೋಡಿದ ಮತಗಳೂ ಉಂಟು. ಒಳ್ಳೆಯ ಬದುಕನ್ನು ಒತ್ತಿ ಹೇಳಿದ ಮತಗಳೂ ಉಂಟು. ನಾಳಿನ ಸ್ವರ್ಗ ನರಕಗಳನ್ನು ಒತ್ತಿ ಹೇಳಿದವೂ ಉಂಟು. ಇಂದಿನ ಬದುಕೇ ಸರ್ವಸ್ವ ಎಂದ ಮತಗಳೂ ಉಂಟು. ಅಂತು ದೇಶ ದೇಶಗಳ, ಕಾಲ ಕಾಲಗಳ ಜನರ ಮನಸ್ಸನ್ನು ಸೆಳೆದು ಹಿಡಿದ ಪ್ರಧಾನ ಶಕ್ತಿ ಮತಗಳು, ಧರ್ಮಗಳಾದುವು. ತಂತಮ್ಮ ಮತಗಳೇ ಸತ್ಯವೆಂದು ಆವೇಶದಿಂದ ಇನ್ನೊಂದು ಜನಗಳ ಮೇಲೆ ಹಾರಿ ಹೋದ ಆಚಾರ್ಯರು, ಅರಸರು ಹಲವಾರು ಮಂದಿ. ಉಳಿದವರ ದೇವರುಗಳನ್ನು, ಧರ್ಮಗ್ರಂಥಗಳನ್ನು, ಗುಡಿಗಳನ್ನು, ಮತಾಚಾರಗಳನ್ನು ಬಲವಂತದಿಂದ ಧ್ವಂಸಮಾಡಲು ಪ್ರಯತ್ನಿಸಿ ಜನರ ದುಃಖವನ್ನು ಹೆಚ್ಚಿಸಿದವರು ಬೇಕಷ್ಟು ಮಂದಿ ಮತಾಚಾರ್ಯರು, ಅರಸರು ಇದ್ದರು. ಇಂದಿನ ಯುಗದಲ್ಲಿ ಈ ಮತಗಳ ಹಾವಳಿಯನ್ನು ನಾವು ಅಷ್ಟೊಂದು ಕಾಣುತ್ತಲಿಲ್ಲವಾದರೆ ಅದು ಮತಗಳು ತಮ್ಮ ವರ್ಚಸ್ಸನ್ನು ಕಳೆದುಕೊಂಡುದರಿಂದಲ್ಲ, ಜನರ ಮನಸ್ಸಿನ ಮೇಲೆ ಅವುಗಳ ಹತೋಟಿ ಇನ್ನೂ ಉಳಿದಿದೆ. ಹಿಂದುಸ್ಥಾನ ಇಬ್ಭಾಗವಾಗುವಾಗ ಅದು ಕೆರಳಿಸಿದ ಆವೇಶ ಕಂಡರೆ ಮತವೆಂಬುದು ಎಷ್ಟು ದುಷ್ಪರಿಣಾಮ ಮಾಡಬಲ್ಲುದು

ಎಂಬುದನ್ನು ನಾವು ಕಂಡಿದ್ದೇವೆ. ಜನಗಳಲ್ಲಿ ವಿವಿಧ ಬಣಗಳಾಗುವುದಕ್ಕೆ ಮತಗಳು ತುಂಬ ಕಾರಣವಾದುವು.

ಯುದ್ಧದ ಕಾರಣಗಳಲ್ಲಿ ಒಂದು

ಯುಗವಮಾನಗಳ ಜೀವನದಲ್ಲಿ, ಜನಕ್ಕೆ ಸಂಪತ್ತು ಪ್ರಾಪಂಚಿಕ ಸುಖಗಳ ಕಲ್ಪನೆ ಬಹು ಹೆಚ್ಚಾಗಿ ಬೆಳೆದು ಬಂದು ಅವುಗಳ ಪ್ರಭಾವ ಅತಿಶಯವಾಯಿತು. ಬದುಕಿನ ಅವಶ್ಯಕತೆಗಳ ರೂಪವೂ ಹೆಚ್ಚಿತು; ಹೋರಾಟ ಹೆಚ್ಚಿ, ಅದನ್ನು ವ್ಯವಸ್ಥಿತವಾಗಿ ಕೊಡಬಲ್ಲ ಸರಕಾರಗಳ ಕೆಲಸವು ದೊಡ್ಡದಾಗುತ್ತ ಬಂದು, ಮತ ಪ್ರಶ್ನೆಗಳಿಗಿಂತ ದೊಡ್ಡ ಆಕಾರ ತಾಳಿತು. ಇವೆಲ್ಲವುಗಳಿಗೆ ಜನರನ್ನಾಳುವ ಸರಕಾರ ಒಂದು ಜಟಿಲವಾದ ವಿಶೇಷವಾದ ಸಂಸ್ಥೆಯಾಗಿ ಪರಿಣಮಿಸಿತು. ಇದು ಬೆಳೆದು ಬಂದ ರೀತಿಯಲ್ಲಿ ಅರಸನಿರಲಿ, ಇಲ್ಲದಿರಲಿ ಸರಕಾರದ ಬೇರುಗಳು ನಾಲ್ಕೆಡೆಗೂ ಚಾಚಿ ತಮ್ಮ ಶಕ್ತಿಯನ್ನು ಬೆಳೆಯಿಸಿಕೊಂಡಿವೆ. ಮತ-ಮತಗಳ ತಿಕ್ಕಾಟದಿಂದ, ಮತ ಸಂಸ್ಥೆಗಳ ಹಿಡಿತ ಜನರ ಮೇಲೆ ಕಡಿಮೆಯಾಗಿದೆ: ಈ ಕಾರಣಗಳಿಂದಾಗಿ ಇಂದು ಪ್ರಮುಖ ದೇಶಗಳಲ್ಲೆಲ್ಲ ಮತಕ್ಕೂ ಸರಕಾರಕ್ಕೂ ಅಥವಾ ರಾಜಕೀಯಕ್ಕೂ ಅಂತರ ಹೆಚ್ಚಿತು. ಮಾತ್ರವಲ್ಲ, ಆಯಾಯ ಸರಕಾರಗಳ ಮುಂದೆ ಮತ ಸಂಸ್ಥೆಗಳು ಪ್ರಧಾನ ಕಾರಣವಾಗುವ ದಿನ ಕಳೆದು ಹೋಯಿತು. ಬದಲು ಸಂಪತ್ತಿಗೆ ಸಂಬಂಧಿಸುವ ಪ್ರಶ್ನೆಗಳು ಮಾತ್ರ ಇಂದು ಯುದ್ಧವನ್ನು ಪ್ರೇರಿಸುವ ಶಕ್ತಿಗಳಾಗಿ ಉಳಿದಿವೆ. ಇದು ಒಳಿತಿಗೇ ಇರಲಿ, ಕೆಟ್ಟುದಕ್ಕೇ ಇರಲಿ ಮತದ ಕಾರಣವು ಮಾಯವಾಗಿದೆ ಎಂಬುದನ್ನು ನಾವು ಒಪ್ಪಬೇಕು.

ಇಂದು ಜನ ಜೀವನದ ಸರಕಾರಗಳು ಕೇವಲ ಸಾಂಪತ್ತಿಕವಾದ ಪ್ರಶ್ನೆಗಳೆಂದರೂ ಸಲ್ಲುತ್ತದೆ. ಅವು ನಡೆಯುವ ಬಗೆಯನ್ನೂ ಅನುವಂಶಿಕ ಅರಸುತನ ಮಾಯವಾಗಿ ಪ್ರಜಾಪ್ರಭುತ್ವ ಬೆಳೆದು ಬರುತ್ತಿರುವ ಬಗೆಯನ್ನೂ ಮುಂದೆ ಪರಿಶೀಲಿಸೋಣ.

೨ ಸರಕಾರದ ಹೊಣೆ.

ಊರಿನ ಅವಶ್ಯಕತೆಗಳು

ನಾವು ಮೊದಲು ಪರಿಶೀಲಿಸಿದ್ದು, ಅನಾದಿ ಮನುಷ್ಯರ ಗುಂಪು ಊರುಕೇರಿಗಳನ್ನು ಕಟ್ಟಿಕೊಂಡು ವಾಸಿಸಿದ ಬಗೆಯನ್ನು. ಆಗ ಒಂದೊಂದು ಗುಂಪಿನವರು ಒಂದೊಂದು ಊರಿನಲ್ಲಿ ನೆಲೆಯಾಗಿದ್ದರೆಂದು ತಿಳಿಯೋಣ. ಇದು ಹತ್ತೋ, ನೂರೋ ಮನೆಗಳುಳ್ಳ ಒಂದು ಜನ ವಸತಿಯಾಗಿರಬಹುದು. ಬೇಕಾಗುವ ಯಾವತ್ತು ಸಾರ್ವಜನಿಕ ಅನುಕೂಲತೆಗಳನ್ನು ಅವರ ಪುಟ್ಟ ಸರಕಾರ ಮಾಡಬೇಕಲ್ಲವೆ! ಅವು ಯಾವುವು ಎಂದು ತಿಳಿಯುವ. ಊರಿನ ಬೇರೆ ಬೇರೆ ಭಾಗಗಳಿಗೆ ಹೋಗುವ ಹಾದಿಗಳು ಬೇಕು. ಅವುಗಳನ್ನು ರಚಿಸಬೇಕು, ಆಗಾಗ ದುರಸ್ತಿಯಲ್ಲಿಡಬೇಕು. ಊರಿಗೆ ನೀರಿನ ಅನುಕೂಲತೆ ಬೇಕು. ನದಿಯ ನೀರಿದ್ದರೆ ಅದನ್ನು ಬೇಸಾಯಕ್ಕೆ ಸಾಗಿಸುವ ನಾಲಗಳು ಬೇಕು. ನದಿ ಇಲ್ಲದಲ್ಲಿ ಕೆರೆ ಬಾವಿಗಳನ್ನು ಅಗೆದು ನೀರಿನ ಪೂರೈಕೆ ಮಾಡಬೇಕು. ಊರಿನ ಕೊಳೆ ತೆಗೆಯುವ ಏರ್ಪಾಟು ಆಗಬೇಕು. ಊರಿನ ಆಹಾರಕ್ಕಾಗಿ ಬೇಸಾಯದ ಹೊಲಗದ್ದೆಗಳು ಬೇಕು. ಅವುಗಳನ್ನು ಬೆಳೆಸಬೇಕು. ಬೆಳೆದ ಬೆಳೆಯನ್ನು ಹಂಚುವ ವಿಧಾನವನ್ನು ಮಾಡಬೇಕು. ನೇರವಾಗಿ ಬೆಳೆ ಬೆಳೆಸದವರಿರುತ್ತಾರೆ. ಅಂಥವರು ತಮ್ಮ ಸೇವೆಯಿಂದ ಸಮಾಜಕ್ಕೆ ಅವಶ್ಯವಾದ ಜನಶಕ್ತಿಯನ್ನು ಪೂರೈಸಬೇಕು. ಗೋಪಾಲಕರು, ಸಮಗಾರರು. ಉಪಾಧ್ಯಾಯರು, ಪುರೋಹಿತ, ಪೂಜಾರಿ, ವೈದ್ಯ, ಮೊದಲಾದವರಿದ್ದಾರೆ. ಅಂಥವರಿಗೆ ಕಾಳುಕಡ್ಡಿಗಳನ್ನು ವೇತನವಾಗಿಯೋ, ಉಂಬಳಿಯಾಗಿಯೋ, ಕೊಡುವ ಏರ್ಪಾಟಾಗಬೇಕು. ಹೊರಗಿನ ವೈರಿಗಳು ಬಾರದಂತೆ ನೋಡಿಕೊಳ್ಳುವ ಕಾವಲಿನ ಮನೆ ಬೇಕು. ಕಾವಲಿನವರು ಬೇಕು. ಇಷ್ಟೊಂದು ಕೆಲಸಗಳನ್ನು ಊರಿನ ಜನ ಸೇರಿ ತಮ್ಮ ಅವಶ್ಯಕತೆಗಳನ್ನು ಕುರಿತು ಚರ್ಚಿಸಿ ಯಾರು ಯಾರು ಯಾವ ಯಾವ ಕೆಲಸ ಮಾಡಬೇಕು ಎಂಬುದನ್ನೆಲ್ಲ ಗೊತ್ತುಪಡಿಸು

ವುದು ಸುಲಭದ ಕೆಲಸವಲ್ಲ. ಅದಕ್ಕೆಲ್ಲ ಒಬ್ಬ ಮುಖಂಡನನ್ನು ಅವನ ಬೆಂಬಲಕ್ಕೆ ಕೆಲವೊಂದು ಮಂದಿ ಹೊಣೆಯರಿತ ಹಿರಿಯರನ್ನು ಆರಿಸಿಕೊಳ್ಳಬೇಕು. ನಮ್ಮ ದೇಶದಲ್ಲಿ ಬಹು ಕಾಲದ ಹಿಂದೆ ಈ ಬಗೆಯ ಪಂಚಾಯತ ಸರಕಾರ ಏರ್ಪಾಟಿನಲ್ಲಿದ್ದಂತೆ ಕಾಣುತ್ತದೆ. ದೇಶಕ್ಕೊಬ್ಬ ಅರಸನಿದ್ದಾಗಲೂ ಪ್ರತಿಯೊಂದು ಊರಿನ ಅಥವಾ ಹಳ್ಳಿಯ ಹೊಣೆಯನ್ನು ಆಯಾಯ ಊರಿನ ಜನ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಗ್ರೀಸ್ ನಗರಗಳಲ್ಲಿ ಇದೇ ಬಗೆಯಲ್ಲಿ ಆದರೆ ತುಸು ದೊಡ್ಡ ಪ್ರಮಾಣದಲ್ಲಿ ಪ್ರಜಾಪ್ರಭುತ್ವ ನಡೆಯುತ್ತಿದ್ದಂತೆ ಕಾಣುತ್ತದೆ. ಪ್ರಜೆ ಎಂದರೆ ಯಾರು? ಅವನ ಹಕ್ಕೇನು? ಇದನ್ನೆಲ್ಲ ಆ ಮೇಲೆ ಯೋಚಿಸುವ. ಮೊದಲು ಸರಕಾರ ಬೆಳೆದು ಬಂದ ಬಗೆ ಯೋಚಿಸುವ.

ದೇಶದ ಸರಕಾರ

ಸಾವಿರಾರು ಊರುಗಳು ಸೇರಿ ಒಂದು ದೇಶವಾಗುತ್ತದೆ. ಆ ಒಂದು ದೇಶದ ರಕ್ಷಣೆಯನ್ನು ನೋಡಿಕೊಳ್ಳುವುದೆಂದರೆ ಕೆಲಸ ಇನ್ನೂ ಹೆಚ್ಚು. ಅದಕ್ಕೆ ಬೇಕಾಗುವ ಏರ್ಪಾಟೂ ದೊಡ್ಡದಾಗಬೇಕು. ಊರಿಗೊಬ್ಬ, ದೇಶಕ್ಕೊಬ್ಬ ಅರಸನಿದ್ದಾನೆ-ಎಂದೆಣಿಸಿದರೆ, ಆತ ಈ ಎಲ್ಲ ಹೊಣೆಯನ್ನು ಹೊರಬೇಕು. ಅವನ ಹೊಣೆ ಏನಿರಬಹುದು ಎಂಬುದನ್ನು ವಿಚಾರಿಸಿ ನೋಡುವ.

ಮಳೆ ಅನಿಶ್ಚಿತವಾದಾಗ ಹಲವಾರು ಊರುಗಳಿಗೆ ಅನುಕೂಲಿಸುವಂತೆ ದೊಡ್ಡ ಕೆರೆಗಳನ್ನು ಕಟ್ಟಿಯೋ, ನದಿಗಳಿಗೆ ಅಡ್ಡ ಹಾಕಿಯೋ ನೀರಾವರಿಯ ಯೋಜನೆ ಮಾಡಬೇಕು. ಊರು ಊರುಗಳಿಗೆ ಹೋಗುವಂತೆ ರಾಜ್ಯದ ಎಲ್ಲ ಪ್ರಾಂತ್ಯಗಳಿಗೂ ರಸ್ತೆ ಕಲ್ಪಿಸಬೇಕು. ಅವುಗಳನ್ನು ದುರಸ್ತಿಯಲ್ಲಿಡಬೇಕು. ಸಾಮಾನು ಸರಂಜಾಮುಗಳು ಒಂದೂರಿನಿಂದ ಇನ್ನೊಂದೂರಿಗೆ ಹೋಗುವಾಗ ಕಳ್ಳಕಾಕರ ತುತ್ತಿಗೆ ಅವು ಪಾಲಾಗದಂತೆ ಒಂದಲ್ಲ ಒಂದು ವಿಧದ ಪೋಲೀಸರ ರಕ್ಷಣೆ ಬೇಕು. ಊರೂರುಗಳಲ್ಲಿ ಜಗಳಗಳಾಗುತ್ತವೆ. ಅನ್ಯಾಯಗಳಾಗುತ್ತವೆ; ಅನ್ಯಾಯ ಮಾಡಿ ಊರು ಬಿಟ್ಟು, ಬೇರೆ ಊರನ್ನು ಸೇರುವವರೂ ಇರುತ್ತಾರೆ.

ಆದುದರಿಂದ ಒಟ್ಟು ದೇಶದಲ್ಲಿ ನ್ಯಾಯ ಇರುವಂತೆ ನ್ಯಾಯಸ್ಥಾನಗಳ ಏರ್ಪಾಟು ಮಾಡಬೇಕು. ಅವುಗಳ ಅಧಿಕಾರ ನಡೆಯುವಂತೆ ನೋಡಿಕೊಳ್ಳುವ ಏರ್ಪಾಟು ಇರಬೇಕು. ಜನಕ್ಕೆ ವಿದ್ಯೆ ಬೇಕು, ಅದು ಮತಶಿಕ್ಷಣವೇ ಆಗಲಿ, ಇನ್ನಾವ ಬಗೆಯ ಶಿಕ್ಷಣವೇ ಇರಲಿ, ಅದನ್ನು ಕೊಡಲು ದೊಡ್ಡ ವಿದ್ಯಾಲಯಗಳು ಬೇಕು. ದಾಂಹೋಕರಿಗೆ ಅನ್ನಛತ್ರಗಳಿರಬೇಕು. ಬರಗಾಲ ಬಂದಾಗ ಒಂದೂರಿನ ಕಾಳು ಇನ್ನೊಂದೂರಿಗೆ ಹೋಗಿ ಜನತೆಗೆ ಅನ್ನ ದೊರೆಯುವ ಏರ್ಪಾಟು ಬೇಕು. ರೋಗಚಿಕಿತ್ಸೆಗೆ ಆಸ್ಪತ್ರೆಗಳು ಬೇಕು. ಸರಕಾರಕ್ಕೆ ವಿಶೇಷ ಸೇವೆ ಸಲ್ಲಿಸುವವರ ಸಲುವಾಗಿ ಉಂಬಳಿ ಇನಾಮುಗಳನ್ನು ಕೊಡುವ ವ್ಯವಸ್ಥೆಯಾಗಬೇಕು. ದೇಶದೊಳಗೆ ದಂಗೆಯಾಗದಂತೆ, ಹೊರಗಿಂದ ಶತ್ರುಗಳು ಬಾರದಂತೆ, ದೊಡ್ಡ ಸೈನ್ಯದ ಏರ್ಪಾಟು ಬೇಕು. ಕೋಟೆ ಕೊತ್ತಳಗಳು ಬೇಕು. ರಾಜರಾಜರೊಳಗೆ ಸಂಧಾನ ವ್ಯವಹಾರಗಳ ಸಲುವಾಗಿ ರಾಯಭಾರಿಗಳು ಬೇಕು. ಇಂಥ ದೇಶದ ಸರಕಾರವೆಂಬುದು ಒಟ್ಟಿಂದ ಬಹು ದೊಡ್ಡ ಸಂಸ್ಥೆಯಾಗುತ್ತದೆ. ಈ ಬಗೆಯು ಸರಕಾರ.

ಅರಸನೊಬ್ಬನಿಂದಾಗದ ಕೆಲಸ

ಆಯಾಯಾ ಊರಿನವರು ತಂತಮ್ಮ ಊರಿನ ಅವಶ್ಯಕತೆಯನ್ನು ತಿಳಿದು ಪೂರೈಸುವುದಕ್ಕೂ ಒಬ್ಬ ಒಂದು ದೇಶದ ಕಲ್ಯಾಣಕ್ಕಾಗಿ ಮಾಡುವ ಏರ್ಪಾಟಿಗೂ ವಿಶೇಷ ಅಂತರವಿದೆ. ಎಲ್ಲ ಕೆಲಸಗಳಿಗೂ ಇನ್ನೂ ಹೆಚ್ಚಿನ ಜ್ಞಾನಬೇಕಾಗುತ್ತದೆ, ಹಣಬೇಕಾಗುತ್ತದೆ. ವ್ಯವಸ್ಥೆಯಿಂದ ಕೆಲಸ ಮಾಡಿಸುವವರು ಬೇಕಾಗುತ್ತಾರೆ. ಇಂಥ ಏರ್ಪಾಟನ್ನು ಒಬ್ಬ ಅರಸನು ಮಾಡುತ್ತಾನೆಂದರೆ ಹೇಗೆ? ಅದು ಆನುವಂಶಿಕನಾದ ಅರಸು ಮಾಡಬಲ್ಲನೇ? ತಂದೆ ತೀರಿ ಮಗ ಹದಿನೆಂಟು ವರ್ಷಕ್ಕೆ ಅರಸನಾದರೂ ಈ ಹೊಣೆಯನ್ನೆಲ್ಲ ಹೊರಬೇಕಲ್ಲ! ಈ ಹೊಣೆ ಹೊರುವುದರ ಸಲುವಾಗಿ ಕಾಲಕ್ರಮೇಣ ಸರಕಾರದ ಒಂದು ಯಂತ್ರವೇ ನಿರ್ಮಾಣವಾಯಿತು. ಪ್ರತಿಯೊಂದು ದೇಶದಲ್ಲೂ ಅರಸನ ಹೇಳಿಕೆಯಂತೆ ದುಡಿಯುವ ಜನರು ಇವರು. ಅವನು ಕೊಡುವ ಸಂಬಳಕ್ಕಾಗಿ

ದುಡಿಯುತ್ತಾರೆ ಈ ನೌಕರರು ಒಂದೊಂದು ಇಲಾಖೆಯಾಗಿ ಏರ್ಪಟ್ಟು, ಒಂದೊಂದು ಜ್ಞಾನದಲ್ಲಿ, ಕೆಲಸದಲ್ಲಿ ತಜ್ಞತೆಯನ್ನು ಪಡೆದು, ದುಡಿಯಬೇಕಾಗುತ್ತದೆ. ಕಟ್ಟಡ, ಕಾಮಗಾರಿ ಬಲ್ಲವರು ಬೇರೆ. ಆ ಇಲಾಖೆಯಲ್ಲಿ ಒಡ್ಡು ಕಟ್ಟುವವರು, ಹಾದಿ ಕಡಿಯುವವರು, ಅರಮನೆ ಸೇತುವೆ, ದೇವಾಲಯ, ಕೋಟೆ ಇಂಥ ಭಾರಿಯ ಕಟ್ಟಡ ಯೋಚಿಸಿ ರಚಿಸಬಲ್ಲ ಶ್ರಮಗಾರರು ಬೇಕಾಗುತ್ತದೆ.

ದೇಶದ ಒಳಗೆ, ನ್ಯಾಯ ನೀತಿ ಉಳಿಯುವ ಸಲುವಾಗಿ ಜನರ ನಡವಳಿ, ಅವರು ಅನುಸರಿಸುತ್ತಿರುವ ಮತ, ಕಟ್ಟಳೆ, ಆ ದೃಷ್ಟಿಯಿಂದ ನ್ಯಾಯ ತೀರ್ಮಾನ ನಡೆಯಿಸಬಲ್ಲ ನ್ಯಾಯ ವಿಚಕ್ಷಣರು ಬೇಕಾಗುತ್ತಾರೆ. ಜನರು ಮಾನಸಿಕ ಸುಖಪಡುವ ಸಲುವಾಗಿ ಕಲೆಗಳಿಗೆ ಪ್ರೋತ್ಸಾಹ ಕೊಡುವ ಇಲಾಖೆಯು ಬಂದಿತು. ಒಳ್ಳೆಯ ಚಿತ್ರಕಾರರು, ಶಿಲ್ಪಿಗಳು, ಸಂಗೀತಗಾರರು, ನರ್ತಕರು ರಾಜನ ಆಶ್ರಯದಲ್ಲಿ ಕಲೆತರು. ವ್ಯಾಪಾರ ಬೆಳೆಯಲು, ವ್ಯಾಪಾರಕ್ಕೆ ಏನು ಬೇಕೆಂದು ತಿಳಿದವರು ವಸ್ತು ವಿನಿಮಯ ಸುಲಭವಾಗಲು, ಹಣಕಾಸಿನ ಏರ್ಪಾಟು ಮಾಡಬಲ್ಲವರು, ಅರಸ ಮತ್ತು ಸರಕಾರದ ವೆಚ್ಚಕ್ಕೆ ಬೇಕಾಗುವ ಹಣವನ್ನು ಜನರಿಂದ ಒಂದಲ್ಲ ಒಂದು ಬಗೆಯ ತೆರ, ಕಂದಾಯಗಳ ಮೂಲಕ ಎತ್ತಬಲ್ಲ ಅರ್ಥಶಾಸ್ತ್ರಜ್ಞರು ಬೆಳೆದರು. ಅದರಂತೆಯೇ ಯುದ್ಧಕಲೆ ಹೇಗೆ ಹೇಗೆ ಬೆಳೆಯಿತೋ; ಹಾಗೆ ಹಾಗೆ ಅದರಲ್ಲಿ ನಿಪುಣತೆ ಹೊಂದಿದ ಸೇನಾನಿಗಳು ಬೇಕಾದರು. ಹೀಗೆ ಹಲವು ಇಲಾಖೆಗಳು ತಜ್ಞ ನೌಕರರ ಕೆಳಗೆ ಏರ್ಪಟ್ಟು, ಅವರ ಕೆಳಗೆ ನೂರಾರು ಮಂದಿ ದುಡಿಯುವ ವ್ಯವಸ್ಥೆ ಆಗ ಬೇಕಾಯಿತು. ಇವರನ್ನು ನೇಮಿಸಿಕೊಳ್ಳುವವರಾರು? ದೇಶಕ್ಕೆ ಮುಖಂಡನಾದ ಅರಸ. ಆತನಿಗೆ ಇಷ್ಟೊಂದು ವಿಷಯಗಳನ್ನೆಲ್ಲ ತಿಳಿದುಕೊಳ್ಳುವುದು ಸಾಧ್ಯವೇ? ಸಾಧ್ಯವಲ್ಲ. ಆದುದರಿಂದ ಅರಸ ತನ್ನ ಸುತ್ತಲು ಬೇರೆ ಬೇರೆ ವಿಷಯಗಳಲ್ಲಿ ಜ್ಞಾನ ಪಡೆದ ಜನಗಳನ್ನು ತನ್ನ ಪ್ರಧಾನಿಗಳನ್ನಾಗಿ ನೇಮಿಸಿಕೊಳ್ಳಬೇಕಾಯಿತು. ಅವರ ಮೂಲಕವಾಗಿ ಆತ ಸರಕಾರದ ಯಂತ್ರವನ್ನು ನಡೆಯಿಸಬೇಕಾಯಿತು.

ಕುಂದು ಕೊರತೆಗಳು

ಈ ಬಗೆಯ ರಾಜ್ಯ ಪದ್ಧತಿಯು ಒಂದೊಂದು ದೇಶದಲ್ಲೂ ಶತಮಾನಗಳ ತನಕ ನಡೆದು ಬಂದಿದೆ. ಅದು ನಡೆದು ಬಂದಂತೆ ಅವುಗಳಲ್ಲಿನ ಹುಳುಕು ಬೆಳಕಿಗೆ ಬರತೊಡಗಿತು. ಇದರಲ್ಲಿ ಮೊದಲಿನ ಕೊರತೆ ಎಂದರೆ ಆಳಿಸಿಕೊಳ್ಳುವ ಪ್ರಜೆಗೆ ತನ್ನ ಗ್ರಾಮ ಪಂಚಾಯಿತಿನಲ್ಲಿ ಯಾವ ಬಗೆಯ ಅಧಿಕಾರವಿತ್ತೋ, ಆ ಅಧಿಕಾರ ವಾಣಿಯು ದೇಶದ ಸರಕಾರ ನಡೆಯಿಸುವುದರಲ್ಲಿ ಸಂಪೂರ್ಣ ನಾಶ ವಾದದ್ದೆ. ಅವನ ಅವಶ್ಯಕತೆಗಳಾಗಲೀ, ಅಸಮಾಧಾನವಾಗಲೀ ಮನ ವಿಯ ರೂಪದಲ್ಲಿ ದೊರೆಗೆ ಮುಟ್ಟಬೇಕಷ್ಟೆ. ಹಾಗೆ ಮುಟ್ಟುವುದೂ ಕಷ್ಟ. ನೂರಾರು ನೌಕರರನ್ನು ದಾಟಿ--ಅದು ಅವನಿಗೆ ಸಿಕ್ಕಬೇಕಲ್ಲವೇ? ಒಮ್ಮೆ ಅದು ದೊರೆಗೆ ಮುಟ್ಟಿದರೂ, ಯಾವುದೋ ಒಂದು ಮೂಲೆಯಲ್ಲಿ ಆಳುತ್ತಿರುವ ದೊರೆ ಅವನನ್ನು ಕೇಳಬೇಕೆಂದೇನು? ಅವನು ಕೇಳದೇ ಹೋದರೆ ಕೇಳುವಂತೆ ಮಾಡುವ ಶಕ್ತಿ ಯಾರಿಗಿದೆ? ಇತ್ತ ಅರಸ ದುಷ್ಟ ನಾದರೆ—ಜನರೆಲ್ಲ ಅವನ ಪೀಡೆ ಸಹಿಸಬೇಕು. ಅವನು ಕೇಳಿದಷ್ಟು ಕಂದಾಯ ಕೊಡಬೇಕು. ಮನೆಯ ಹೆಣ್ಣನ್ನು ಕೇಳಿದರೂ ಕೊಟ್ಟು ಮಾತಿಲ್ಲದೆ ಸುಮ್ಮನಿರಬೇಕು. ಅನಾವಶ್ಯಕವಾಗಿ ಇನ್ನೊಂದು ದೇಶ ದೊಡನೆ ಆತ ಯುದ್ಧ ಕಟ್ಟಿಕೊಂಡರೆ, ಅದರ ಹಾನಿಗೆ ಪ್ರಜೆಗಳೆಲ್ಲರೂ ಗುರಿಯಾಗಬೇಕು. ಆತ ಹೆಡ್ಡನಾದರೆ—ಅರಸನ ಹೆಸರಿನಲ್ಲಿ ಅವನ ಮಂತ್ರಿಗಳು ತಮಗೆ ಕಂಡ ಹಾಗೆ ಮಾಡಬಹುದು. ಇಂಥ ಮಂತ್ರಿಗಳ ಕೈಗೊಂಬೆಯಾಗುತ್ತಾನೆ ಅರಸ. ಅರಸನಿಗೆ ವಿಲಾಸ ಬುದ್ಧಿ ಅಧಿಕವಾ ಗಿದ್ದಲ್ಲಿ ಅವನ ಮೋಜಿಗೆ ಬೇಕಾದುದನ್ನು ಒದಗಿಸಿ ಕೊಟ್ಟು, ಅವನನ್ನು ತಮ್ಮ ಇಷ್ಟದಂತೆ ಕುಣಿಸುವ ಮಂತ್ರಿಗಳು ಇರುತ್ತಾರೆ. ಅರಸನ ನಾಲ್ಕೆಂಟು ಮಂತ್ರಿಗಳಲ್ಲಿ, ನಾಲ್ಕೆಂಟು ಪಂಗಡಗಳಾಗಬಹುದು. ತಮ್ಮ ಇಷ್ಟದಂತೆ ವರ್ತಿಸದ ಅರಸನನ್ನು ರಾಜ್ಯದಿಂದ ಕಿತ್ತು ಅವನ ಬದಲು ಇನ್ನೊಬ್ಬ ಹಕ್ಕುದಾರರನ್ನು ಅಲ್ಲಿ ಕಳುಹಿಸುವ ಆಟಕ್ಕೂ ಈ ರಾಜ್ಯ ಪದ್ಧತಿಯಲ್ಲಿ ಬೇಕೆನ್ನುವಷ್ಟು ಅವಕಾಶವಿದೆ. ಹತ್ತು ಜನ ಅರಸರಲ್ಲಿ

ಒಬ್ಬ ಒಳ್ಳೆಯನಿರುವುದೂ ಬುದ್ಧಿವಂತನಿರುವುದೂ ಕೂಡ ಸಾಧ್ಯವಾದ ಮಾತು. ಹಲವು ದೇಶಗಳ ಚರಿತ್ರೆಯಿಂದ ನಾವು ತಿಳಿಯಬಲ್ಲ ಪಾಠವೆಂದರೆ ನಿರಂಕುಶ ಅರಸುತನ ಅವನ ಹಿಂದೆ ಮುಂದೆ ಕುಣಿಯುವ ನಾಲ್ಕಾರು ಅಧಿಕಾರಿಗಳಿಗೂ ಮಂತ್ರಿಗಳಿಗೂ ಪ್ರಿಯವಾಗಿ ಕಂಡರೂ, ಜನಸಾಮಾನ್ಯಕ್ಕೆ ಅದು ಪ್ರಿಯವಾಗದೆ ಹೋಯಿತು. ಆದರೆ ಅರಸನನ್ನು ಇದಿರಿಸುವ ರಕ್ತ ಜನಕ್ಕೆ ಎಲ್ಲಿಂದ ಬಂದೀತು? ಅರಸನ ಶಕ್ತಿಯು ಸೇನೆ, ಜನ, ಹಣ, ಹಿಂಸೆಗಳ ಪ್ರಭಾವದಿಂದ ಕೂಡಿದ್ದು ಎಂಬುದನ್ನು ನಾವು ಮರೆಯಬಾರದು.

ರಾಜತ್ವಕ್ಕೆ ವಿರೋಧ— ತನ್ನವರಿಂದ

ಎರಡು ಬಗೆಗಳಿಂದ ರಾಜತ್ವಕ್ಕೆ ವಿರೋಧ ಬೆಳೆದು ಬಂದುದನ್ನು ನಾವು ಪರೀಕ್ಷೆಯಿಂದ ತಿಳಿದುಕೊಳ್ಳಬಹುದು. ಅರಸನ ವರ್ಚಸ್ಸು ಅಧಿಕಾರವೆಲ್ಲ ನಡೆಯುತ್ತಿದ್ದುದು ಸೇನೆಯ ಬಲದಿಂದ. ಸೇನೆ ಎಂದರೆ ಪ್ರಜೆಗಳನ್ನು ಅಥವಾ ಪ್ರತಿಭಟರನ್ನು ಹಿಂಸೆಯ ಬಲದಿಂದ ನಾಶಮಾಡುವಂಥ ಶಕ್ತಿ. ಅಧಿಕಾರಕ್ಕಾಗಿ ಬಾಯ್ಬಿಡುವ ಸೇನಾನಿಗಳು, ಮಂತ್ರಿಗಳು, ಅರಸನ ದಾಯಾದಿಗಳು ಅರಸನಿಂದ ಪ್ರಾಂತ ಪ್ರಾಂತಗಳಲ್ಲಿ ಮೇಲು ತನಿಖೆಗೆ ನೇಮಿಸಲ್ಪಟ್ಟ ಗವರ್ನರುಗಳಾಗಿದ್ದರು. ಈ ಗವರ್ನರುಗಳು ಈ ಶಕ್ತಿಯನ್ನೇ ಬಳಸಿಕೊಂಡು ಅರಸರುಗಳ ಮೇಲೆ ಎದುರು ಬಿದ್ದರು. ತಮ್ಮ ಹಂಗಿನಲ್ಲಿರುವ ಸೈನ್ಯ ಕಟ್ಟಿಕೊಂಡು, ಅರಸನ ಎದರು ಬಿದ್ದರು ತಮ್ಮ ಹಂಗಿನಲ್ಲಿರುವ ಸೈನ್ಯ ಕಟ್ಟಿಕೊಂಡು, ಅರಸನ ಮೇಲೆ ದಂಗೆ ಹೂಡಿದರು. ಯುದ್ಧ ಮಾಡಿದರು. ಈ ಬಗೆಯ ದಂಗೆಯಿಂದ ಗೆದ್ದ ಪ್ರಮುಖನು, ತನಗೆ ಒಲಿದ ಅರಸನ ದಾಯಾದಿಯನ್ನು ಪಟ್ಟಕ್ಕೇರಿಸಿದನು. ಅವನು ತುಂಬ ಶಕ್ತನಾದರೆ ತಾನೇ ಅರಸನಾಗಿ ನಿಂತುದು ಉಂಟು. ಔರಂಗಜೇಬ್ ತನ್ನ ತಂದೆ ಮತ್ತು ಅಣ್ಣಂದಿರನ್ನು ಸೆರೆಯಲ್ಲಿರಿಸಿ ತಾನು ಅರಸನಾದುದು ಈ ಬಗೆಯಿಂದ. ಇಂಥ ದಂಗೆಗಳಲ್ಲಿ ಜನಸಾಮಾನ್ಯರ ಪಾತ್ರ ವಿಶೇಷವಿಲ್ಲ. ಒಬ್ಬ ಅರಸನ ಬದಲಿಗೆ ಇನ್ನೊಬ್ಬ ಅರಸನು ಬಂದಷ್ಟೇ ಆಗಿ

ಸರಕಾರದ ಗುಣ ದೋಷಗಳ ಮೇಲೆ ಅವರಿಗೆ ಯಾವ ವರ್ಚಸ್ಸೂ ಇರಲಿಲ್ಲ. ಕೆಲವೊಮ್ಮೆ ದಂಗೆಯ ವೇಳೆ, ದಂಗೆ ಎಬ್ಬಿಸುವುದಕ್ಕೋ, ದಂಗೆ ನಾಶ ಪಡಿಸುವುದಕ್ಕೋ; ಸಹಾಯ ಮಾಡಿದಾಗ, ಅಂಥ ಪಂಗಡಕ್ಕೆ ಜಯ ಬಂದಾಗ ಗೆದ್ದವರ ಪಾಲಿಗೆ ಹೆಚ್ಚಿನ ಅನುಕೂಲತೆ ದೊರೆಯಬಹುದು. ಕೆಲವು ಪ್ರಜೆಗಳಿಗೆ ಬಹುಮಾನ ಬರಬಹುದು. ಕೆಲವರಿಗೆ ಉಂಬಳಿ ಸಿಗಬಹುದು. ಕೆಲವರಿಗೆ ನೌಕರಿಯೂ ಸಿಗಬಹುದು. ಗೆಲುವ ಬದಲು ಸೋತರೆ—ಆಗ ಅಷ್ಟೇ ಕಠಿಣವಾದ ಶಿಕ್ಷೆಯೂ ಪ್ರಾಪ್ತಿಸಬಹುದು.

ವಿರೋಧ ಜನರಿಂದ

ಜನ ಹೇಗೆ ವಿರೋಧ ಕಟ್ಟಿಕೊಳ್ಳಬಲ್ಲುದು? ತೀರ ಸಾಮಾನ್ಯ ಮನುಷ್ಯ ಅರಸನಿಗೆ ಎದುರಾಗಿ ನಿಲ್ಲದೆ ಹೋದರೂ ಪ್ರಮುಖರಾದವರು ಈ ಕೆಲಸಮಾಡಲು ಸಾಧ್ಯವಿದೆ. ಅರಸು ಸಲ್ಲದ ಯುದ್ಧಗಳಿಂದ, ವಿಲಾಸಗಳಿಂದ ಹಣ ದುಂದುಮಾಡುತ್ತಾನೆಂದು ತಿಳಿಯಿರಿ. ಆಗ ಸಾಮಾನ್ಯ ತೆರಕಂದಾಯಗಳಿಂದ ಅವನ ಖಜಾನೆ ತುಂಬುವುದಿಲ್ಲ. ಆತ ಹಲವು ಅನ್ಯಾಯದ ತೆರಿಗೆಗಳನ್ನು ಜನರ ಮೇಲೆ ಹೊರಿಸುತ್ತಾನೆ. ತಲೆಗಂದಾಯ ಮತಗಂದಾಯ, ವಸ್ತು ಒಡವೆಗಳ ಮೇಲೆ ಸುಂಕ, ನ್ಯಾಯವಾದ, ನ್ಯಾಯವಲ್ಲದ, ಅತಿಯಾದ ಕೆಲವರನ್ನು ಬಾಧಿಸುವ—ತೆರಿಗೆ ಹೊರಿಸುವುದುಂಟು. ಅಂಥ ಪ್ರಸಂಗಗಳಲ್ಲಿ ಕಂದಾಯ, ತೆರಕೊಡುವ ಜನ ರೊಚ್ಚಿಗೇಳುತ್ತಾರೆ ಇವರನ್ನು ಕೂಡಿಸಿಕೊಂಡು ಅರಸನ ಮೇಲೆ ದಂಗೆ ಎದ್ದ ಮುಖಂಡರುಂಟು. ಇವರು ಜನ ಸಾಮಾನ್ಯರಿಂದಲೇ ಆಯ್ದು ಮುಖಂಡತನವನ್ನು ಗಳಿಸಿದವರಲ್ಲ. ಆಯಾಯ ಊರಿನ ಶ್ರೀಮಂತರೆಲ್ಲರು ಜಮೀನುದಾರರು—ಮೊದಲಾದವರು ಇತರರಂತೆ ಅರಸನಿಗೆ ಹೆಚ್ಚಿನ ತೆರ ಕೊಡಬೇಕಾಗಿ ಬರುತ್ತದೆ. ಅವರಿಗೆ ಊರಿನ ಜನರ ಮೇಲೆ ಹೆಚ್ಚಿನ ವರ್ಚಸ್ಸಿರುತ್ತದೆ. ಅವರ ಕೆಳಗೆ ದುಡಿಯುವ ನೂರಾರು ಜನರಿರುತ್ತಾರೆ, ಆಳುಗಳಿರುತ್ತಾರೆ. ಸಣ್ಣ ಪುಟ್ಟ ಸೇನೆಗಳೂ ಇದ್ದುದುಂಟು. ಇಲ್ಲದಾಗ ಕದ್ದು ಸೇನೆ ಕೂಡಿಸಿದ್ದುಂಟು. ಇಂಥ ಮುಖಂಡರು ಮನಸ್ಸು ಮಾಡಿದರೆ ಒಂದೊಂದು ಊರಿನ

ವಿರೋಧವನ್ನು ಸಾಕಷ್ಟು ಬಲವಾಗಿ ಏರ್ಪಡಿಸಲು ಒರುತ್ತದೆ. ಅಂಥ ಹತ್ತು ಜನ ಪ್ರಮುಖರು ಕೂಡಿಕೊಂಡು ಅರಸನನ್ನು ವಿರೋಧಿಸಿದ್ದುಂಟು. ಅವರ — ಇವರ ಸೇನೆಗಳಲ್ಲಿ ಕಾದಾಟವಾಗುತ್ತದೆ. ಅಥವಾ ಜನ ಪ್ರಮುಖರ ಗುಂಪಿಗೆ ಬೆದರಿ ಅರಸನು ಬಗ್ಗಲೂ ಬಹುದು. ಇಂಗ್ಲೆಂಡ್ ದೇಶದಲ್ಲಿ ಕ್ರಮೇಣ ಅರಸನ ನಿರಂಕುಶ ಅಧಿಕಾರ ಮುಗಿದು ದೊಡ್ಡ ದೊಡ್ಡ ಜಮೀನುದಾರರುಗಳ ಮಾರುಗಳು ನಡೆಯ ತೊಡಗಿದ್ದು ಈ ಬಗೆಯ ವಿರೋಧದಿಂದ. ಇಂಗ್ಲೆಂಡಿನಲ್ಲಿ ದೇಶವೆಲ್ಲ ತಾಲೂಕುಗಳಾಗಿ ವಿಭಾಗಿಸಲ್ಪಟ್ಟಿತ್ತು. ಒಂದೊಂದು ತಾಲೂಕು ತಾಲೂಕಿನಂತಿರುವ ಪ್ರಾಂತ ಒಬ್ಬೊಬ್ಬ ಜಮೀನುದಾರನ ಸಂಪೂರ್ಣ ತಾಬೆಯಲ್ಲಿರುತ್ತಿತ್ತು. ಇಂಥವರನ್ನು ಅಲ್ಲಿ 'ಲಾರ್ಡ್' ಎಂದು ಕರೆಯುತ್ತಿದ್ದರು. ಲಾರ್ಡ್ ಎಂದರೆ ಪ್ರಭು. ಅರಸನು 'ಮಹಾಪ್ರಭು' ವಾದರೆ ಇವರು ಚಿಕ್ಕ ಪ್ರಭುಗಳು- ಇಂಗ್ಲೆಂಡಿನ ಚರಿತ್ರೆಯಲ್ಲಿ ಕೆಲವು ಶತಮಾನಗಳ ಕಾದಾಟದಲ್ಲಿ ದೇಶದ ಸರಕಾರವನ್ನು ಅರಸನ ಕೈಯಿಂದ ಈ ಪ್ರಮುಖರು ಕೂಡಿದ ಸಭೆಯು ಕಿತ್ತುಕೊಳ್ಳುವುದು ಸಾಧನವಾಯಿತು. ಒಮ್ಮೆ ಇಂಗ್ಲೆಂಡಿನ ದೊರೆಯೇ ಈ ಪ್ರಭುಕೂಟದ ಶಾಸನಕ್ಕೆ ತಲೆಬಾಗಿ ತನ್ನ ಮರಣದಂಡನೆಗೆ ತಾನೇ ಸಹಿ ಮಾಡಬೇಕಾದ ಪ್ರಸಂಗವು ಒದಗಿತು.

ಪ್ರಭುಗಳು

ಹಿಂದಿನ ಇಂಗ್ಲೆಂಡಿನ 'ಪ್ರಭುಕೂಟ' ಪ್ರಜಾಕೂಟವಲ್ಲ. ಪ್ರಜೆಗಳ ಅಭಿಪ್ರಾಯವೆಂಬುದು ಪ್ರಭು ಕೂಟದ ಅಭಿಪ್ರಾಯವಾಗಿದ್ದಿರಬೇಕಾಗಿದ್ದಿಲ್ಲ. ಜನ ಸ್ವಂತ ಮನೆ ಮಠವಿಲ್ಲದ ತೊತ್ತುಗಳಂತಿದ್ದರು. ಒಬ್ಬೊಬ್ಬ ಪ್ರಭುವಿನ ಆಶ್ರಯದಲ್ಲಿ ಪರಂಪರೆಯಿಂದ ಒಂದೊಂದು ತುಂಡು ಜಾಗ ಹಿಡಿದು ಸಾಗುಮಾಡಿ, ಪ್ರಭುವಿಗೆ ಕಂದಾಯ ಸಲಿಸಿ ಬದುಕುತ್ತಿದ್ದರು. ರಾಜ್ಯದ ಆಡಳಿತೆಯಲ್ಲಿ ಕೈಹಾಕುವ ಅಧಿಕಾರ ಇಂಥ ಸಾಮಾನ್ಯ ಪ್ರಜೆಗೆ ಎಂದೂ ಇದ್ದಿರಲಿಲ್ಲ.

ಅಮೆರಿಕದ ಕ್ರಾಂತಿ

ಅಮೆರಿಕದ ಕೆನಡಾ ಮತ್ತು ಸಂಯುಕ್ತ ಅಮೆರಿಕದ ಭಾಗಗಳು ಬೇರೊಂದು ಬಗೆಯಿಂದ ಪ್ರಜಾ ವಿರೋಧವನ್ನು ಸಂಘಟಿಸಿ ತಮ್ಮ ಅರಸನ ಹಕ್ಕನ್ನು ನಿರಾಕರಿಸಿದರು. ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮೊದಲಾದ ದೇಶಗಳಿಂದ ಆ ದೇಶಕ್ಕೆ ತುಂಬಾ ವಲಸೆ ಹೋಗಿದ್ದರು. ಅಲ್ಲಿನ ಹೊಸಭೂಮಿಯಲ್ಲಿ ನೆಲೆಸಿ ಕೃಷಿ ಉದ್ಯಮ ನಡೆಯಿಸಿಕೊಂಡಿದ್ದರು. ಇಂಗ್ಲೆಂಡಿನ ಪಾರ್ಲಿಮೆಂಟಿಗೆ ಅವರು ಅಧೀನರಾಗಿದ್ದರು. ಅಲ್ಲಿ ಮಾಡಿದ ನಿಯಮ ಶಾಸನಗಳಿಗೆ ಇವರು ಒಳಗಾಗಬೇಕಿತ್ತು. ಈ ಅಮೆರಿಕದ ಜನ ಕಂದಾಯ ತೆರುವ ಜನರಾಗಿದ್ದರೇ ಹೊರತು, ಇಂಗ್ಲೆಂಡ್, ಯಾವ ಮಾದರಿಯಿಂದ ತಮ್ಮ ದೇಶವನ್ನು ನಡೆಯಿಸಬೇಕು—ಎಂಬ ವಿಚಾರದಲ್ಲಿ ಹೇಳುವ ಹಕ್ಕು ಇಲ್ಲದವರಾಗಿದ್ದರು. ಅಲ್ಲಿನ ಸರಕಾರವು ತಮ್ಮ ಅಧಿಕಾರಿಗಳ ಮೂಲಕ ತಮಗೆ ಇಷ್ಟ ಬಂದಂತೆ ಅಮೆರಿಕದ ರಾಜ್ಯಭಾರ ನಡೆಯಿಸುತ್ತಿತ್ತು. ಒಮ್ಮೆ ಇಂಗ್ಲಿಷ್ ಸರಕಾರ ಅಮೆರಿಕೆಗೆ ಹೋಗುತ್ತಿದ್ದ ಚಾ ಸೊಪ್ಪಿನ ಮೇಲೆ ಹೆಚ್ಚಿನ ಸುಂಕವನ್ನು ಹೊರಿಸಿತು. ಈ ಸುಂಕದ ಹಣ ಅಮೆರಿಕೆಯಲ್ಲಿ ವಿನಿಯೋಗವಾಗುವ ಬದಲು ಬ್ರಿ. ರಾಜ್ಯಕ್ಕೆ ಆದಾಯವಾಗಿತ್ತು. ಈ ಬಗೆಯ ಸುಂಕಗಳು ಅಮೆರಿಕದ ಪ್ರಜೆಗಳಿಗೆ ಸಹಿಸಲಿಲ್ಲ. ಇಂಗ್ಲೆಂಡನ್ನು ಅವರು ಮಾತೃದೇಶವೆಂದು ತಿಳಿದುಕೊಂಡು ಗೌರವಿಸಿದರೂ ಎಲ್ಲರಲ್ಲಿ ಈ ಬಗೆಯ ಅಭಿಮಾನವಿರಲಿಲ್ಲ. ಫ್ರೆಂಚರು, ಇಟಲಿಯವರು, ಅಲ್ಲಿ ವಾಸವಾಗಿದ್ದರು. ಯುರೋಪಿನ ಇತರ ದೇಶದ ಜನರು ಅಲ್ಲಿಗೆ ವಲಸೆ ಹೋಗಿದ್ದರು. ಇಂಗ್ಲೆಂಡ್ ಫ್ರಾನ್ಸ್‌ಗಳೊಳಗೆ ಕದನವಾಗುತ್ತಿದ್ದಾಗಲೆಲ್ಲ ಈ ದೇಶದಲ್ಲಿ ಒಂದಾಗಿ ಜೀವಿಸುತ್ತಿದ್ದ ಜನರ ಮನಸ್ಸಿದಲ್ಲಿ ತಳಮಳವಾಗುತ್ತಿತ್ತು. ಈ ಅಸಮಾಧಾನದ ಜತೆಗೆ, ಸುಂಕ ಏರಿಸಿದ ಬಗ್ಗೆ ಸಿಟ್ಟೂ ಉಂಟಾಯಿತು, ತಾವೇಕೆ ಇಂಗ್ಲೆಂಡಿಗೆ ಆಧೀನವಾಗಿರಬೇಕು? ಎಂಬ ವಿಚಾರ ಅಂಬ್ರಹಾಮ ಲಿಂಕನ, ಜಫರಸನ್ ಮೊದಲಾದ ಅಮೆರಿಕದ ಕೆಲವು ಪ್ರಮುಖ ವ್ಯಕ್ತಿಗಳಲ್ಲಿ ಉಂಟಾಯಿತು. ಅವರ ಈ

ಅಭಿಪ್ರಾಯಕ್ಕೆ ಜನಗಳ ಬೆಂಬಲ ದೊರೆಯಿತು. ಇಂಗ್ಲೆಂಡ್ ಇರುವುದು ಬಹುದೂರ. ತಮ್ಮ ಅಧಿಕಾರಿಗಳಿಂದ ಅವರು ಜನರ ಮೇಲೆ ತಮ್ಮ ಅಧಿಕಾರ ತೋರಿಸಬೇಕಾಗಿತ್ತು. ಇಲ್ಲಿನ ಜನ ಅವರನ್ನು ವಿರೋಧಿಸಿ ಕಾಳಗ ಹೂಡಿದರು. ಇಂಗ್ಲೆಂಡಿನಲ್ಲೇ ಜನರೊಳಗೆ ಬಲವಾದ ಬಣಗಳುಂಟಾದುವು. ಅಂತು ದೀರ್ಘವಾದ, ಘೋರವಾದ ಕಾದಾಟದಿಂದ ಅಮೆರಿಕೆಯ ಜನ ಸ್ವಾತಂತ್ರ್ಯವನ್ನು ಗಳಿಸಿದರು; ಇಂಗ್ಲೆಂಡಿನ ಅಧಿಕಾರವನ್ನು ನೀಗಿಸಿಕೊಂಡರು. ಹೀಗಾಗಿ ಜನರೇ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ಅವರು ತಮ್ಮದೇ ಆದ ಸರಕಾರವನ್ನು ರಚಿಸಿದರು. ಹೊಸ ಯಾವ ಅರಸನನ್ನು ಮುಖಂಡನನ್ನಾಗಿ ಆರಿಸದೆ ಜನ ಮನ್ನಣೆಯನ್ನು ಪಡೆದ ಒಬ್ಬ ಅಧ್ಯಕ್ಷನನ್ನು ಆರಿಸಿದರು. ಒಂದೊಂದು ಪ್ರಾಂತ್ಯದ ಜನ ತಂತಮ್ಮ ಪ್ರತಿನಿಧಿಗಳನ್ನಾರಿಸಿ, ಒಂದು ಕಾಂಗ್ರೆಸ್ ಎಂಬ ಪ್ರಜಾಪ್ರತಿನಿಧಿ ಮಂಡಲವನ್ನು ಏರ್ಪಡಿಸಿಕೊಂಡು ಅದಕ್ಕೆ ತಾವೇ ಆರಿಸಿದ ಅಧ್ಯಕ್ಷನನ್ನು ಮುಖಂಡನಾಗಿ ಮಾಡಿದರು. ಜನತೆಯ ಹಿತ ಅಹಿತವನ್ನು ನೋಡಿ ಆ ವಿಶಾಲವಾದ ದೇಶದ ಆಡಳಿತೆ ನೋಡಿಕೊಳ್ಳುವ ಪ್ರಜಾಪ್ರಭುತ್ವ ಅಲ್ಲಿ ಏರ್ಪಾಟಾಯಿತು. ಈ ಏರ್ಪಾಟು ಜನರ ಅಭಿಪ್ರಾಯ ತಿಳಿಯುವುದಕ್ಕೆ, ಆವಶ್ಯಕತೆ ತಿಳಿಯುವುದಕ್ಕೆ, ಶಾಸನ ಮಾಡುವುದಕ್ಕೆ, ಸರಕಾರದ ಧೋರಣೆ ರೂಪಿಸುವುದಕ್ಕೆ. ಜನಗಳ ಅಪ್ಪಣೆಯನ್ನು ಕೆಲಸಕ್ಕೆ ತರಲು ಸರಕಾರವೆಂಬ ಒಂದು ಏರ್ಪಾಟು ಇರಬೇಕಷ್ಟೆ.

ಪ್ರಜಾಪ್ರಭುತ್ವ—ಸಣ್ಣದು ದೊಡ್ಡದು

ಗ್ರೀಸಿನ ನಗರ ಪ್ರಭುತ್ವಗಳಿಗೂ, ನಮ್ಮ ಗ್ರಾಮ ಪಂಚಾಯಿತುಗಳಿಗೂ ಒಂದು ದೇಶದ ಪ್ರಜಾಪ್ರಭುತ್ವಕ್ಕೂ ತುಂಬಾ ಅಂತರ ಉಂಟಾಗುತ್ತದೆ. ಮೊದಲಿನವುಗಳ ಕೆಲಸ ಕಣ್ಣೆದುರಿನಲ್ಲಿ ಕಂಡು ತಿಳಿಯುವಷ್ಟು ಸುಲಭ. ಹೇಳಿ ಮಾಡುವಷ್ಟು ಸುಲಭ. ಒಟ್ಟು ದೇಶದ ಪ್ರಜಾ ಪ್ರಭುತ್ವ ಕೆಲಸದಲ್ಲಿಯೂ ಬಹುಮುಖವಾದದ್ದು. ಆ ಕೆಲಸ ನಡೆಯಿಸಲು ಬೇಕಾದ ತಿಳುವಳಿಕೆ

ಯಲ್ಲಿಯೂ ಬಹುಮುಖವಾದದ್ದು. ಅದನ್ನು ನಿರ್ವಹಿಸಲು ಬೇಕಾದ ಸರಕಾರವೂ ವಿಶೇಷವಾದದ್ದು ಮತ್ತು ವಿವಿಧ ಜ್ಞಾನಗಳಲ್ಲಿ ತಿದ್ದಿದ ಜನರಿಂದ ಕೂಡಿರ ಬೇಕಾದದ್ದು.

ಸಣ್ಣ ಪಂಚಾಯತದಂಥ ಆ ಗ್ರಾಮ ಸರಕಾರವು ನಾವು ನಾವೇ ಚರ್ಚಿಸಿ ನಡೆಯಿಸ ಬಹುದಾದ ಸಂಸ್ಥೆಯಾಗಲು ಸಾಧ್ಯ. ಪ್ರಜೆ ನೇರಾಗಿ ಹೇಳಿ ಮಾಡಿಸುವಂಥ ಸಂಸ್ಥೆಯಾಗಬಹುದು. ಆದರೆ ದೇಶದ ಸರಕಾರದ ಕೆಲಸ–ಸಾವಿರಾರು, ಅದಕ್ಕೆ ಬೇಕಾದ ತಿಳಿವು ಏರ್ಪಾಟು ತುಂಬ ಅಧಿಕ. ಆದುದರಿಂದ ಇದು ನೇರಾಗಿ ಪ್ರಜೆಯನ್ನೇ ಕೇಳಿ ನಡೆಯದು. ಅವನು ಆರಿಸಿ ಕಳುಹಿಸುವ ಪ್ರತಿನಿಧಿಗಳಿಂದ ನಡೆಯಿಸಲ್ಪಡುವ ಸಂಸ್ಥೆಯಾಗಬೇಕಾಗುತ್ತದೆ.

---

೩ ಪ್ರಜೆಗಳದ್ದು ದೇಶ

ಪ್ರಜೆಯಾರು?

ಒಂದು ದೇಶದ ರಾಜ್ಯಸೂತ್ರ ಅಂದರೆ ಸರಕಾರವನ್ನು ನಡೆಯಿಸುವ ಅಧಿಕಾರ ಹೇಗೆ ಕ್ರಮಶಃ ಪ್ರಜೆಗಳ ಕೈಗೆ ಬಂದಿತು ಎಂಬುದನ್ನು ಪರಿಶೀಲಿಸಿದೆವು. 'ಪ್ರಜೆ' ಎಂದೊಡನೆಯೇ ಒಂದು ದೇಶದ ಪ್ರತಿಯೊಬ್ಬನೂ ಆ ದೇಶದ ಪಾಲಿನ ಪ್ರಜೆಯಾಗುತ್ತಾನೆ ಎಂಬುದು ನಿಜವಾದರೂ ಕಾರ್ಯದಲ್ಲಿ ದೇಶದ ಎಲ್ಲರೂ ಪ್ರಜೆಗಳಾಗಿಲ್ಲ, ಪ್ರಜೆಗಳಾಗುತ್ತಲಿಲ್ಲ. ಹಿಂದೆ ಗ್ರೀಸ್ ನಗರದ ಪ್ರಭುತ್ವಗಳ ವಿಚಾರ ಹೇಳಿದೆ. ಗ್ರೀಸಿನ ಯಾವುದಾದರೊಂದು ಪಟ್ಟಣದ ಪ್ರಜಾ ಪ್ರಭುತ್ವದಲ್ಲಿ ಅಲ್ಲಿನ ಜನ ಅಥವಾ ಪ್ರಜೆ, ತಮ್ಮ ಮುಖಂಡರ ಪ್ರತಿನಿಧಿಗಳ ಮೂಲಕ ಸರಕಾರ ನಡೆಯಿಸುವುದಕ್ಕೆ ಕಾರಣನಾಗುತ್ತಿದ್ದ ಎಂದದ್ದಾಯಿತು. 'ಪ್ರಜೆ' ಯಾರು? ಅಂದರೆ ಪ್ರಜೆಯಾಗಿ ತನ್ನ ಪ್ರತಿನಿಧಿಗಳನ್ನು ಆಯ್ದು ಕಳುಹಿಸುವ ಅಧಿಕಾರ ಯಾರಿಗಿದೆ–ಎಂಬುದೇ ಮುಖ್ಯವಾದ ವಿಷಯ ದೇಶದಲ್ಲಿ ಒಂದು ಲಕ್ಷ ಜನ ಇದ್ದರೆ ಆ ಲಕ್ಷಜನರೂ ಅಧಿಕಾರ ನಡೆಯಿಸುವಂತಿಲ್ಲ. ಸಣ್ಣ ಮಕ್ಕಳು, ಸರಕಾರ ಏನೆಂದೇ ತಿಳಿಯಲಾರದವರು ಈ ಅಧಿಕಾರ

ನಡೆಯಿಸುವಂತೆ ಇಲ್ಲವಷ್ಟೆ. ಸುಮಾರು ಹದಿನೆಂಟು ವಯಸ್ಸಾದ ಮೇಲೆ, ಬುದ್ಧಿಬಂದ ಮೇಲೆ, ಈ ಕೆಲಸಕ್ಕೆ ಅವರು ತಕ್ಕವರಾಗ ಬಹುದು. ಹೀಗೆ ಪ್ರಾಯ ಬಂದವರೆಲ್ಲರೂ ಪ್ರಜೆಗಳೇ? ಪ್ರಜೆಗಳೆನಿಸಿದ್ದರೇ—ಎಂದರೆ ಇಲ್ಲಿಯೂ ಚರಿತ್ರೆ ಅನೇಕ ಬೆಳವಣಿಗೆಯ ಮಟ್ಟಗಳನ್ನೇ ಹೇಳುತ್ತದೆ. ಸ್ತ್ರೀಯು ಪುರುಷನಷ್ಟೇ ಸಮಾಜ ಜೀವನದಲ್ಲಿ ಮನ್ನಣೆ ಪಡೆಯದಿದ್ದ ಗುಂಪುಗಳಿವೆ; ದೇಶಗಳಿವೆ. ಅಂಥ ಗುಂಪುಗಳಲ್ಲೆಲ್ಲ ಹೆಂಗುಸರನ್ನು ಪ್ರಜೆಗಳೆಂದು ಪ್ರಾಯ ಬಂದ ಮೇಲೆಯೂ ಎಣಿಸಿದವರಿಲ್ಲ. ಯುರೋಪಿನಲ್ಲಿ ಸ್ತ್ರೀಯರು ಈ ಹಕ್ಕನ್ನು ಸಂಪಾದಿಸಲು ದೀರ್ಘ ಕಾಲ ಬಡಿದಾಡಬೇಕಾಯಿತು. ನಮ್ಮ ದೇಶದ ಹಿಂದಿನ ಗ್ರಾಮ ಪಂಚಾಯತಗಳಲ್ಲೂ ಗಂಡಸರು ಮಾತ್ರ ಬಹುಮಟ್ಟಿಗೆ ಈ ಅಧಿಕಾರ ತಾಳಿದ್ದರೆಂದು ಕಾಣುತ್ತದೆ. ಗ್ರೀಸ್ ಪ್ರಜಾಪ್ರಭುತ್ವದಲ್ಲಿ, ರೋಮನ್ ಪ್ರಜಾಪ್ರಭುತ್ವಗಳಲ್ಲಿ, ಇನ್ನೊಂದು ವಿಚಿತ್ರವನ್ನು ಕಾಣುತ್ತೇವೆ. ಅವರು ಪರರ ಮೇಲೆ ಯುದ್ಧ ಮಾಡಿ, ಗೆದ್ದು ಅಲ್ಲಿನ ಜನಗಳನ್ನು ತಮ್ಮ ಗುಲಾಮರಾಗಿ ತರುತ್ತಿದ್ದುದುಂಟು. ಆ ಗುಲಾಮರು ಗಂಡುಸೇ ಇರಲಿ, ಹೆಂಗಸೇ ಇರಲಿ ಪ್ರಜೆಯ ಯಾವ ಹಕ್ಕೂ ಇಲ್ಲದವರು. ದನಗಳನ್ನು ಮಾರುವಂತೆ ಅವರನ್ನು ಮಾರಬಹುದು. ಕೊಳ್ಳಬಹುದು. ಕೊಂಡಾತ ಅವರನ್ನು ಯಾವ ಬಗೆಯಿಂದಲೂ ಹಿಂಸಿಸ ಬಹುದು, ದುಡಿಸಿಕೊಳ್ಳ ಬಹುದು. ಅವರಿಗಾಗುತ್ತಿದ್ದ ಅನ್ಯಾಯಗಳಿಗೆ ಆ ದೇಶದ ಸರಕಾರ ಯಾವ ರಕ್ಷಣೆಯನ್ನೂ ಕೊಡುತ್ತಿದ್ದಿಲ್ಲ. ಇಂಥ ಜನ ಗ್ರೀಕ್ ನಗರಗಳಲ್ಲಿ ಸಾವಿರಾರು ಇದ್ದರು. ಅವರೆಂದೂ ಪ್ರಜೆಗಳೆಣಿಸಲ್ಪಟ್ಟವರಲ್ಲ. ಅವರಿಗೆ ಯಾವ ಮನ್ನಣೆಯೂ ಇದ್ದಿಲ್ಲ. ಗ್ರೀಸಿನಲ್ಲೇ ತಲೆಮಾರುಗಳಿಂದ ಹುಟ್ಟಿಬೆಳೆದ ಪ್ರಾಪ್ತವಯಸ್ಕ ಮಾತ್ರ ಪ್ರಜೆ ಎನಿಸುವನು. ಆತನ ಆಯ್ಕೆಯಿಂದ ಸರಕಾರಕ್ಕೆ ಪ್ರತಿನಿಧಿಗಳು ಮಾತ್ರ ಈ ಅಧಿಕಾರ ಗಳಿಸಿಕೊಂಡಂತೆ ಕಾಣುತ್ತದೆ. ಇದರಿಂದ ಮುಂದಿನ ಹೆಜ್ಜೆ —ಎಂದರೆ ಸರಕಾರಕ್ಕೆ ಒಂದಲ್ಲ ಒಂದು ಬಗೆಯಿಂದ ಪ್ರತ್ಯಕ್ಷವಾದ ತೆರಕಂದಾಯಗಳನ್ನು ಕೊಡುವಾತ ಈ ಹಕ್ಕನ್ನು ಗಳಿಸಿಕೊಂಡ. ಆ ಹಕ್ಕು ಬರುವುದಕ್ಕೆ ಇಂತಿಷ್ಟು ಹಣವನ್ನಾದರೂ

ಕಂದಾಯವಾಗಿ ಕೊಡಬೇಕು ಎಂಬ ಮಿತಿ ಇತ್ತು. ಮೊನ್ನೆ ಮೊನ್ನೆಯ ತನಕ, ನಮ್ಮ ದೇಶದಲ್ಲಿ ಈ ಬಗೆಯ ಏರ್ಪಾಟಿತ್ತು ಹತ್ತು ರೂಪಾಯಿಗಳ ಮೇಲೆ ಭೂಮಿ ಕಾಣಿಕೆ ಕೊಡುವವ ಅಥವಾ ಇಂತಿಷ್ಟು ರೂಪಾಯಿಗಳ ಆದಾಯ ತೆರಿಗೆ ಕೊಡುವವ ಮಾತ್ರ ಚುನಾವಣೆಯ ಕಾಲದಲ್ಲಿ ಮತ ಕೊಡಬಹುದು ಎಂಬ ನಿಯಮ ಬಳಕೆಯಲ್ಲಿತ್ತು. ಹೀಗಾಗಿ ತೀರ ಸಣ್ಣಪುಟ್ಟ ರೈತರು, ಶ್ರಮಗಾರರು, ಪ್ರಜೆಯ ಅಧಿಕಾರ ಉಳ್ಳವರಾಗಿರಲಿಲ್ಲ.

ನಗರಗಳ ಬೆಳವಣಿಗೆ

ಯುರೋಪಿನಲ್ಲಿ ಪ್ರಾಯಸ್ಥರೆಲ್ಲರೂ ಪ್ರಜೆ ಎನಿಸಿಕೊಳ್ಳುವುದಕ್ಕೆ, ಪ್ರಪಂಚದಲ್ಲಿ ನಡೆದ ಒಂದು ವಿಶೇಷ ಕ್ರಾಂತಿ ಸಹಾಯ ಮಾಡಿತೆನ್ನಬಹುದು. ಇವನ್ನು ಔದ್ಯೋಗಿಕ ಕ್ರಾಂತಿ ಎನ್ನುತ್ತಾರೆ. ಮೊದಲು ಜನ ತಮ್ಮ ಸಂಪತ್ತನ್ನು ಹೆಚ್ಚಿಸಲು ಸಣ್ಣ ಪುಟ್ಟ ಯಂತ್ರಗಳನ್ನು ದೇಹ ಶ್ರಮವನ್ನು ಸಾಧನವಾಗಿರಿಸಿಕೊಂಡಿದ್ದರು. ಆ ಮೇಲೆ ಉಗಿ ಯಂತ್ರ, ವಿದ್ಯುತ್ತು — ಅಗ್ಗವಾದ ಶಕ್ತಿಯನ್ನು ಒದಗಿಸಿಕೊಟ್ಟಿತು. ಆದರಿಂದಾಗಿ ಮೊದಲು ಕೃಷಿಯಿಂದ ಜೀವಿಸುತ್ತಿದ್ದ ಜನ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ದುಡಿಯತೊಡಗಿದರು. ಮೊದಮೊದಲಿನ ಕಾರ್ಖಾನೆಗಳು ಕೈಕಸುಬಿನ ಕಾರ್ಖಾನೆಗಳಾಗಿದ್ದುವು. ಇದರಿಂದಾಗಿ ಹಳ್ಳಿಯ ಜನ, ನಗರಗಳಲ್ಲಿ ಹೆಚ್ಚಾಗಿ ಕಲೆಯತೊಡಗಿದರು. ಯಂತ್ರ ಸಲಕರಣೆಗಳೂ, ಶಕ್ತಿ ಸಲಕರಣೆಗಳೂ, ಅಭಿವೃದ್ಧಿಗೊಂಡು ಬಂದಂತೆ, ಹತ್ತು ನೂರು ಜನರ ಕೈಗಾರಿಕೆಗಳು ಸಾವಿರಾರು ಜನರು ಕೂಡುವ ಉದ್ಯಮಗಳಾದುವು. ಕಳದೊಂದು ಶತಮಾನದಲ್ಲಿ ಈ ಉದ್ಯೋಗಗಳು ನಮ್ಮ ಜೀವನಕ್ಕೆ ಅವಶ್ಯವಾದ ಸಾವಿರಾರು ಮುಖ್ಯ ವಸ್ತುಗಳನ್ನು ತಯಾರಿಸತೊಡಗಿದುವು. ಹಳ್ಳಿಯಿಂದ ಜನ ಬರಿದಾಗುತ್ತಾ ಬಂದು, ಈ ಉದ್ಯೋಗಗಳುಳ್ಳ ನಗರಗಳು ದೊಡ್ಡದಾಗುತ್ತ ಬಂದುವು. ಕೆಲವು ಕಡೆಗಳಲ್ಲಿ ಉದಾ:— ಲಂಡನಿನಲ್ಲಿ, ಮೆಂಚೆಸ್ಟರ್, ಲಿವರ್‌ಪೂಲ್, ನಗರಗಳು ವಿರಾಟರೂಪ ತಾಳಿದುವು. ಫ್ರಾನ್ಸಿನಲ್ಲಿ ಪೆರಿಸ್ ಇಂಥ

ನಗರವಾಯಿತು. ಜನ ತೀರ ಹತ್ತಿರವಾಗಿ ವಾಸವಾಗಿದ್ದರೆ, ಅವರನ್ನು ಕೂಡಿಸುವುದು ಅವರಲ್ಲಿ ಯಾವುದಾದರೊಂದು ವಿಚಾರವನ್ನು ಬಿತ್ತಿ ಪ್ರಸಾರ ಮಾಡುವುದು ಬಹು ಸುಲಭವಾಗುತ್ತದೆ. ಈ ರೀತಿಯಿಂದ ನಗರಗಳು ಸಾರ್ವಜನಿಕ ಕ್ರಾಂತಿಗಳಿಗೆ, ಚಳವಳಗಳಿಗೆ ತವರೂರು ಆಗತೊಡಗಿದುವು.

ಸಂಪತ್ತಿನ ವಿತರಣೆಯಲ್ಲಿ ವೈಪರೀತ್ಯ

ಉಗಿಯಂತ್ರ ಇತರ ಯಂತ್ರೋಪಕರಣಗಳು ನಿರ್ಮಾಣವಾಗ ತೊಡಗಿದ ಮೇಲೆ ಬೇರೊಂದು ವಿದ್ಯಮಾನ ತಲೆದೋರಿತು. ದೂರ ದೂರ ದೇಶಗಳೊಳಗೆ ವಾಹನ ಸಂಚಾರ ಏರ್ಪಟ್ಟಿತು ವ್ಯಾಪಾರ ಬೆಳೆಯಿತು, ಉದ್ಯೋಗ ನಡೆಯಿಸಬಲ್ಲವರು, ಸುಲಭ ಶಕ್ತಿಯಿಂದ ಹೆಚ್ಚು ಹೆಚ್ಚು ಲಾಭವನ್ನು ಗಳಿಸುವುದಕ್ಕೆ ಸಾಧ್ಯವಾಯಿತು. ಹಣ ಕೆಲವರಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಕೂಡುವುದಕ್ಕೆ ಅವಕಾಶವಾಯಿತು. ಇಂಗ್ಲೆಂಡಿನಂತಹ ದೇಶದಲ್ಲಿ, ನಾಡಿನ ಭೂಪ್ರಾಂತ್ಯಗಳಿಗೆ ಒಡೆಯರಾದ ಪ್ರಭುಗಳಿಗಿದ್ದಷ್ಟೇ ವರ್ಚಸ್ಸನ್ನು, ಉದ್ಯೋಗ ವಾಣಿಜ್ಯಗಳಲ್ಲಿ ನಿರತರಾದವರು, ತಮ್ಮ ಹಣದ ಬಲದಿಂದ ಸಂಪಾದಿಸಿದರು. ಸರಕಾರದಲ್ಲಿ ಪ್ರಭುಗಳ ಮಾತು ನಡೆಯುವಷ್ಟೇ ಬಲವಾಗಿ, ಉದ್ಯೋಗದಿಂದ ಶ್ರೀಮಂತರಾದವರ ಮಾತು ನಡೆಯುವ ಕಾಲ ಬಂದಿತು. ಅವರೂ ರಾಜ್ಯದ ಆಡಳಿತೆಯಲ್ಲಿ ಹಕ್ಕನ್ನು ಕೇಳಿದರು, ಗಳಿಸಿದರು.

ಶ್ರಮಗಾರರಲ್ಲಿ ಅಸಮಾಧಾನ

ಈ ಜನ ತಮ್ಮ ವರ್ಚಸ್ಸನ್ನೂ, ಹಕ್ಕನ್ನೂ ಬೆಳೆಯಿಸಿಕೊಂಡಂತೆ ತಮ್ಮ ಕೆಳಗೆ ದುಡಿಯುವ ಶ್ರಮಗಾರರ ಕಡೆಗೆ ಗಮನಕೊಡಲಿಲ್ಲ. ಹಳ್ಳಿಯಲ್ಲಿ ಒಂದು ಜೋಪಡಿಯಲ್ಲಿ ಸ್ವತಂತ್ರವಾಗಿ ವಾಸಿಸುತ್ತಿದ್ದ ಜನ ಪೇಟೆ ಪಟ್ಟಣಗಳಿಗೆ ಬಂದು, ಬಾಡಿಗೆಯ ಮನೆಯ ಇಕ್ಕಟ್ಟಿನಲ್ಲಿ ವಾಸಿಸಬೇಕಾಯಿತು. ಹಳ್ಳಿಯವಾಸ ತಪ್ಪಿತು, ಪೇಟೆಯ ಕೊಳೆ ಪ್ರಾಪ್ತಿಸಿತು. ಅವರ ಬಡತನ, ವಿದ್ಯಾಹೀನತೆಗಳೆಲ್ಲ ಅಧಿಕವಾಗಿ, ಆ ಜನಗಳಲ್ಲಿ ತಮ್ಮ ಒಡೆಯರ ಮೇಲೆ ಅಸೂಯೆ, ಅಸಮಾಧಾನಗಳು ಉಂಟಾದುವು. ಜನರು ಬಹು ಒಟ್ಟೊಟ್ಟಿಗೆ ಇರುವಲ್ಲಿ ಈ ಅಸಮಾಧಾನ

ಉಗ್ರರೂಪತಾಳತೊಡಗಿತು. ಅವರೂ ತಮ್ಮ ಕಲ್ಯಾಣ ಸಾಧಿಸುವುದಕ್ಕಾಗಿ ಚುನಾವಣೆಯ ಹಕ್ಕನ್ನು ಬೇಡಿದರು. ಈ ರೀತಿ ಹಲವು ದೇಶಗಳಲ್ಲಾಯಿತು. ಏನೂ ಸಂಪತ್ತು ಇಲ್ಲದ ಪ್ರಜೆಯೂ ಸಹ ತನಗೂ ಒಂದು ಹಕ್ಕು ಇದೆ, ಸರಕಾರ ತನ್ನ ಪ್ರತಿನಿಧಿಯಿಂದ ಕೂಡಿದ್ದಾಗಿರಬೇಕು' ಎಂದು ಚಳವಳ ಹೂಡಿದನು. ಆಳುವವರ ಮೂರ್ಖತನ, ಜಮೀನುದಾರರ, ಶ್ರೀಮಂತರ ಸ್ವಾರ್ಥ, ಜನ ಸಾಮಾನ್ಯರ ಅತೃಪ್ತಿಗೆ ಬೆಂಕಿಗೆ ಎಣ್ಣೆಸುರಿದಂತೆ ಮಾಡಿತು. ಕಾಲಕ್ರಮೇಣ ಶ್ರಮಗಾರರನ್ನು ಪ್ರಜೆಯೆಂದು ಒಪ್ಪಿಕೊಳ್ಳುವ ಪಾಡು ಎಲ್ಲ ದೇಶಗಳಲ್ಲಿಯೂ ಬಂದಿತು. ಮೊದಲು ಓದುಬರಹಬಲ್ಲ ಪ್ರಾಯಸ್ಥರೆಲ್ಲರೂ ಪ್ರಜೆ ಎಂದು ಎಣಿಸಲ್ಪಟ್ಟರು. ಈಗ ನಮ್ಮ ದೇಶದಲ್ಲಿಯೂ, ಇತರ ಹಲವು ದೇಶಗಳಲ್ಲಿಯೂ ಬುದ್ಧಿ ಸ್ವಾಸ್ಥ್ಯವಿರುವ ಪ್ರತಿ ಪ್ರಾಯಸ್ಥರೂ — ಹೆಂಗಸಿರಲಿ, ಗಂಡಸಿರಲಿ, ಧನಿಕನಿರಲಿ, ಬಡವನಿರಲಿ ವಿದ್ಯಾವಂತನಿರಲಿ, ಬರಹ ಬಾರದವನಿರಲಿ— ಪ್ರಜೆಯಾಗಿ ಮತದಾನದ ಹಕ್ಕನ್ನು ಗಳಿಸಿಕೊಂಡಿದ್ದಾನೆ.

ವಿಶೇಷ ಪ್ರತಿನಿಧಿಗಳು

ಇಂಥ ಪ್ರಜೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಮಂಡಲಗಳು ಒಂದು ಪ್ರಾಂತದ ಸರಕಾರವನ್ನು, ದೇಶದ ಸರಕಾರವನ್ನು, ನಗರ ಇಲ್ಲವೆ ಜಿಲ್ಲಾ ಸಂಸ್ಥೆಗಳನ್ನು ನಡೆಸುವ ಏರ್ಪಾಟನ್ನು ಕಾಣುತ್ತೇವೆ. ಎಷ್ಟೋ ಬಾರಿ ಜನಸಾಮಾನ್ಯರ ಈ ಅಧಿಕಾರವನ್ನು ನಾವು ಒಪ್ಪಿಕೊಂಡರೂ, ಅವರಿಗೆ ತಿಳಿಯದಿರುವ ಅನೇಕ ವಿಷಯಗಳು ಸರಕಾರಕ್ಕೆ ಸಂಬಂಧಿಸಿರುತ್ತವೆ. ಆಗೇನು ಮಾಡಬೇಕು? ವ್ಯಾಪಾರ ದೃಷ್ಟಿಯಿಂದ, ಉದ್ಯಮ ದೃಷ್ಟಿಯಿಂದ, ಸೈನ್ಯದ ದೃಷ್ಟಿಯಿಂದ ಅಥವಾ ಏನೂ ತಿಳುವಳಿಕೆಯಿಲ್ಲದ ಹಿಂದುಳಿದ ಜನರ ಗುಂಪಿನ ದೃಷ್ಟಿಯಿಂದ— ಬರಿಯ ಜನಸಾಮಾನ್ಯರಿಂದ ಚುನಾಯಿತರಾದ ಪ್ರತಿನಿಧಿಗಳೇ ಕೆಲಸ ಮಾಡಲಾರರು. ಹೀಗೆಂದು ಕೆಲವು ದೇಶಗಳಲ್ಲಿ, ಕೆಲವೊಂದು ಪರಿಸ್ಥಿತಿಗಳಲ್ಲಿ—ಮೇಲೆ ಹೇಳಿದ ಸಂಗಡ ಇಲ್ಲವೆ ಅವಶ್ಯಕತೆಯ ಸಲುವಾಗಿ, ಬೇರೆಯೇ ಜನರನ್ನು—ಸರಕಾರಕ್ಕೆ ಜನ ಆರಿಸಿಕೊಳ್ಳಬೇಕಾಗುತ್ತದೆ. ಮಃಖಂಡರಾದವರು 'ಇಂಥ ಉದ್ಯೋಗದ ಪ್ರತಿನಿಧಿಯಾಗಿ ಇಷ್ಟು

ಮಂದಿ ಪ್ರತಿನಿಧಿಗಳಿರಬೇಕೆಂದು ಗೊತ್ತುಪಡಿಸಿ ಪ್ರಜಾಮಂಡಲಕ್ಕೆ ಸೇರಿಸಿಕೊಳ್ಳುವ ರೂಢಿಬಂತು. ಅಥವಾ ವ್ಯಾಪಾರದ ಜನ, ಉದ್ಯೋಗದ ಜನ, ಕೂಲಿಕಾರರ ಜನ, ನಿಮ್ನ ವರ್ಗದ ಜನ, ತಂತಮ್ಮ ಬಗ್ಗೆ ವಿಶೇಷ ಪ್ರತಿನಿಧಿಗಳನ್ನು ಆರಿಸಿ ಪ್ರಜಾಮಂಡಲಗಳಿಗೆ ಕಳುಹಿಸುವ ವಾಡಿಕೆಯೂ ಉಂಟು.

ಪ್ರಜೆಗಳಿಂದ ಪ್ರತಿನಿಧಿಗಳು

ಹೇಗೂ ಇರಲಿ, ಸರಕಾರದ ಅಥವಾ ರಾಜತಂತ್ರದ ರಚನೆಯ ಬೆಳವಣಿಗೆಯಲ್ಲಿ-ನಾವು ಇಂದು ಕಾಣತಕ್ಕ ಅಂಶವೆಂದರೆ 'ದೇಶ' ಎಂಬುದು ಎಲ್ಲರ ಹಕ್ಕಿನದು. ಎಲ್ಲ ಪ್ರಜೆಗಳ ಹಿತ ಸಾಧಿಸುವ ಸಲುವಾಗಿ ಅದು ಇರಬೇಕಾದದ್ದು. ಆ ಕೆಲಸವಮಾಡುವ ಸರಕಾರವನ್ನು ನಡೆಯಿಸುವವರು ಜನರಿಂದಲೇ ಚುನಾಯಿತರಾದವರಿರಬೇಕು, ಪ್ರತಿಯೊಬ್ಬನೂ ಆ ಕೆಲಸ ತಾನೇ ಮಾಡಲಾರ. ದೇಶ ದೊಡ್ಡದಾದಂತೆ ಆ ಕೆಲಸ ಅಸಾಧ್ಯ. ಆದುದರಿಂದ ಆತ ತನ್ನ ಪರವಾಗಿ, ಆ ಹೊಣೆಯನ್ನು ಹೊರಬಲ್ಲ ವ್ಯಕ್ತಿಯನ್ನು ಆರಿಸಿ ಪ್ರಜಾ ಮಂಡಲಕ್ಕೆ ಕಳುಹಿಸುತ್ತಾನೆ. ಮುಂದಿನ ಕೆಲಸ ಪ್ರಜಾಮಂಡಲದ್ದು. ಅಂತೂ ಒಬ್ಬ ಅರಸು ದೇಶದ ಯಾವತ್ತು ಜನಗಳ ಮೇಲೆ ತನ್ನ ಅಧಿಕಾರ ಹೊರಿಸುವ ಪರಿಸ್ಥಿತಿ ಹೋಗಿಯೇ ಬಿಟ್ಟಿತು. "ರಾಜ ದೇವರ ಪ್ರತಿನಿಧಿ" ಎಂದು ಜನರಿಂದ ಅನಿಸಿಕೊಳ್ಳುತ್ತಿದ್ದ ದಿನಗಳೂ ಹೋದುವು. ರಾಜನಿರುವ ಊರುಗಳಲ್ಲೂ, ಆತ ಅಧಿಕಾರದ ಸಂಕೇತವಾಗಿ ಉಳಿದು, ಪ್ರಜೆಗಳು ಒಲಿದರೆ ಮಾತ್ರ ಆತ ಅರಸನಾಗಿ ಉಳಿಯುವಂತಾಯಿತು.ದೇಶದ ಒಡೆತನ ರಾಜನದೊಬ್ಬನದೇ ಅಲ್ಲ. ದೇಶದ ಪ್ರತಿಯೊಬ್ಬ ಪ್ರಜೆಯದು ಎಂದು ಒಪ್ಪಬೇಕಾದ ದಿನಗಳು ಬಂದುವು.

ಪ್ರಜಾಪ್ರಭುತ್ವ ಎಂಬ ಮಾತು ಇದಕ್ಕೆ ಒಪ್ಪುತ್ತದೆ. ವಾಸ್ತವಿಕವಾಗಿ ಇದು ಅನ್ವರ್ಥವಾಗುವುದಕ್ಕೆ ಏನೇನು ಬೇಕು? ಈ ಪ್ರಭುತ್ವ ನಡೆಯಬೇಕಾದ ರೀತಿ ಯಾವುದು? ನಡೆಯುತ್ತಿರುವ ರೀತಿ ಯಾವುದು? ಇದರಲ್ಲಿರುವ ಲೋಪದೋಷಗಳಾವುವು? ಎಂದು ಮುಂದಿನ ಅಧ್ಯಾಯಗಳಲ್ಲಿ ವಿಚಾರಿಸುವ.

೪ ಪ್ರಜೆಯ ಆಕಾಂಕ್ಷೆಗಳು

ಪ್ರಜೆಯ ಮನಸ್ಸು

ಒಂದು ದೇಶದ ಪ್ರತಿಯೊಬ್ಬನು ಆ ದೇಶದ ಸರ್ವಸ್ವಕ್ಕೆ ಸಮಾನ ಅಧಿಕಾರಿ ಎಂಬುದು ನಾವು ಒಪ್ಪಿಕೊಳ್ಳುವ ಮಾತು. ಇದು ಒಂದು ತತ್ವದೃಷ್ಟಿ—'ಎಲ್ಲ ಜನಗಳೂ ದೇವರ ಮುಂದೆ ಸಮಾನರಿದ್ದಾರೆ' ಎಂದು ತಿಳಿದುಕೊಂಡ ಹಾಗೆ, ಕಾರ್ಯಕ್ಕೆ ಬರುವಾಗ, ಒಬ್ಬೊಬ್ಬ ಪ್ರಜೆಯ ಮನಸ್ಸನ್ನು ನಾವು ತಿಳಿದು ಒಂದು ದೇಶದ ಸರಕಾರ ನಡೆಯಿಸಲು ಬರುತ್ತದೆಯೋ ಎಂದರೆ ಅದು ತೀರ ಅಸಾಧ್ಯವೆನಿಸೀತು. ಮೊದಲಿಗೆ 'ಎಲ್ಲರೂ ಸಮಾನರೇ' ಎಂಬ ಪ್ರಶ್ನೆಯೇ ತೊಡಕಿಗೆ ಕಾರಣವಾಗುತ್ತದೆ. ನಮ್ಮ ಮನೆಯಲ್ಲೇ ಎಂದು ತಿಳಿಯುವ. ಅಲ್ಲಿ ಎಲ್ಲರೂ ಸಮಾನರೆಂಬುದು ನಿಜವೇ? ಎಲ್ಲರೂ ಸಮಾನ ತಿಳುವಳಿಕೆಯುಳ್ಳವರೇ; ಸಮಾನಗಣ್ಯರೇ? ಮನೆಗೆ ಹಣ ಎಲ್ಲಿಂದ ಬರುತ್ತದೆ? ಹೇಗೆ ವೆಚ್ಚವಾಗುತ್ತದೆ? ಅಡಿಗೆ ಊಟ ಹೇಗಿರಬೇಕು—ಎಂಬ ತಿಳುವಳಿಕೆಯಲ್ಲಿ ಮನೆಯ ಎಲ್ಲರಲ್ಲೂ ಭಿನ್ನತೆ ಕಂಡೀತು. 'ಅವರಿಗೆ ಜ್ಞಾನಸಾಲದು' ಎಂಬ ದೃಷ್ಟಿಯಿಂದ ಮನೆಕೆಲಸಗಳನ್ನು ನಾವು ಮನೆಯಲ್ಲಿರುವ ಚಿಕ್ಕ ಮಕ್ಕಳನ್ನು ಕೇಳಿ ನಡೆಯಿಸುವುದೇ ಇಲ್ಲ. ದೊಡ್ಡವರಷ್ಟೆ ಮನೆ ನಡೆಯಿಸುತ್ತಾರೆ, ಹೀಗಿರಲು ಒಂದು ದೇಶದ ವಿಚಾರದಲ್ಲಿ ಅಭಿಪ್ರಾಯ ಪ್ರಕಟಿಸುವ ಯೋಗ್ಯತೆ ಎಲ್ಲ ಪ್ರಜೆಗಳಲ್ಲೂ ಉಂಟು ಎಂದು ತಿಳಿಯಬಂದೀತೇ? ಆದುದರಿಂದಲೇ ಹದಿನೆಂಟು ವರ್ಷದ ಕೆಳಗಿನ ಜನಗಳನ್ನು ಮರತೇ ಬಿಡುತ್ತಾರೆ. ಹಾಗೆ ನಾವು ಮತದಾರರ ಗಣನೆಯಿಂದ ಬಿಡಬೇಕಾಗುತ್ತದೆ. ಉಳಿದವರಿಗೆ ಮಾತ್ರ ಸರಕಾರದ ವಿಚಾರದಲ್ಲಿ 'ಓಟು' ಕೊಡುವ ಅಧಿಕಾರ ಕೊಡುವುದನ್ನು ಕಾಣುತ್ತೇವೆ!

'ಓಟ್' ಎಂಬುದೇನು?

ಪ್ರಜೆಗೆ ತನ್ನ ಮನಸ್ಸು ಇಂಥದು ಎಂದು ಹೇಳುವ ಅವಕಾಶ ಬೇಕು. ಒಂದು ದೇಶಕ್ಕೆ ಬೇಕಾಗುವ ಸಾವಿರಾರು ಕೆಲಸಗಳಲ್ಲಿ ಪ್ರತಿ

ಯೊಬ್ಬ ಪ್ರಜೆಯನ್ನೂ, ಪ್ರತಿಬಾರಿಯೂ, ಕೇಳುವುದು ಶಕ್ಯವೇ? ಸಾಧ್ಯವೆ? ಹಿಂದೂದೇಶದಲ್ಲಿ ಇಂದು ಓಟ್‌ಕೊಡಲು ಅರ್ಹರಾದವರ ಸಂಖ್ಯೆ ಹದಿನೆಂಟು ಇಪ್ಪತ್ತು ಕೋಟಿಯಷ್ಟಿದೆ. (ಜನಸಂಖ್ಯೆಯ ಅರೆವಾಸಿಯಷ್ಟೆ) ಇಂಥವರನ್ನು ದಿನನಿತ್ಯ ಪ್ರತಿಯೊಂದು ವಿಚಾರದಲ್ಲಿ ಕೇಳಲು ಅಸಾಧ್ಯವೆಂಬುದರಿಂದ ಈ ಓಟಿನ ಅಧಿಕಾರ ನಿತ್ಯ ಕೆಲಸವಾಡದ ಅಧಿಕಾರವೆನಿಸಿದೆ. ಮೂರು ವರ್ಷಗಳಿಗೋ ಐದುವರ್ಷಗಳಿಗೋ ಒಮ್ಮೆ. ಸರಕಾರವನ್ನು ನಡೆಯಿಸಬಲ್ಲ ಜನಗಳ ಚುನಾವಣೆಯಾಗಬೇಕಾಗುತ್ತದೆ. ಆ ಜನಗಳನ್ನು ಆರಿಸುವ ವಿಷಯದಲ್ಲಿ ಮಾತ್ರ ಪ್ರಜೆಯ ಮನಸ್ಸನ್ನು ತಿಳಿಯಲೆತ್ನಿಸುತ್ತಾರೆ. ಈ ಐದು ಅಥವಾ ಮೂರು ವರ್ಷಗಳ ಅವಧಿಯಲ್ಲಿ, ಸರಕಾರವು ಮಾಡುವ ಸಾವಿರಾರು ಕೆಲಸಗಳ ಯಾವುವೆಲ್ಲ ಎಂಬುದನ್ನು, ಪ್ರಜೆಯು ಮುಂದೆ ಇರಿಸಿ, ಪ್ರತಿಯೊಂದರಲ್ಲಿಯೂ ಅವನ ಅಭಿಪ್ರಾಯ ಕೇಳುತ್ತಾರೆಯೇ? ಅದೂ ಇಲ್ಲ ಕೇಳಬೇಡವೇ? ಕೇಳಬೇಕು, ನಿಜ. ಆದರೆ ಕಾರ್ಯತಃ ಅದು ಅಸಾಧ್ಯ. ಜನರೂ ಹೆಚ್ಚು ಕೆಲಸಗಳೂ ಹೆಚ್ಚು ಎಂಬುದರಿಂದ, ಹಾಗಾದರೆ ಇನ್ನೇನು ಮಾಡಬಹುದು ?

ಸರಕಾರದ ಅರ್ಥಾತ್ ದೇಶದ ಕೆಲಸಗಳು ಹೆಚ್ಚು; ಅವು ಸಂಖ್ಯೆಯಲ್ಲಿಯೂ ಹೆಚ್ಚು; ಸೂಕ್ಷ್ಮತೆಯಲ್ಲಿಯೂ ಹೆಚ್ಚು, ಎಂಬುದನ್ನು ಹಿಂದಿನ ಅಧ್ಯಾಯದಿಂದ ನೀವು ಪರಿಶೀಲಿಸಿರಬಹುದು. ಪ್ರತಿಯೊಂದನ್ನು ತಿಳಿಯುವುದಕ್ಕೂ, ಆಯಾಯ ಶಾಸ್ತ್ರ ಸಂಬಂಧದ ಜ್ಞಾನ ಬೇಕು ಎಂಬುದನ್ನು ತಿಳಿಯಬೇಕು. ಒಬ್ಬನಿಗೆ ಇವೆಲ್ಲವೂ ತಿಳಿದಿರುವ ಪ್ರಸಂಗವಂತೂ ಇಲ್ಲ. ಹೀಗಿರುತ್ತ ಒಬ್ಬ ಸಾಮಾನ್ಯ ಪ್ರಜೆಯು ತನಗೆ ತಿಳಿಯದ, ಅಂಥ ವಿಚಾರಗಳಲ್ಲಿ ಏನು ಅಭಿಪ್ರಾಯ ಕೊಟ್ಟಾನು? 'ಪ್ರಜೆಯ ಮನಸ್ಸು ಓಟಿನ ಮೂಲಕ ವ್ಯಕ್ತವಾಗುತ್ತದೆ' — ಎಂಬ ಮಾತು ತೀರ ಸ್ಥೂಲವಾದ ಅರ್ಥವನ್ನಷ್ಟೇ ಹೇಳಬಲ್ಲುದು 'ಸರಕಾರವನ್ನು ನಡೆಯಿಸುವ ವಿಚಾರದಲ್ಲಿ, ಒಟ್ಟಾರೆ ಯಾವ ದೃಷ್ಟಿ ಇರಬೇಕು' ಎಂದು ಸ್ಥೂಲವಾಗಿ ಅವನನ್ನು ಕೇಳುತ್ತಾರೆಯೇ ಹೊರತು, ಉಳಿದ

ಯಾವ ಸೂಕ್ಷ್ಮ ವಿಚಾರದಲ್ಲೂ ಅವನನ್ನು ಕೇಳುವುದಿಲ್ಲ; ಅದು ಸಾಧ್ಯವೂ ಇಲ್ಲ. ಅವನು ಹೇಳುವುದಕ್ಕೆ ತಕ್ಕವನಾಗುವುದೂ ಕಷ್ಟ.

ಪ್ರಜೆಯಲ್ಲದ ಪ್ರಜೆ

ದೇಶದ ಬಹುಪಟ್ಟಿನ ಪ್ರಜೆಗಳಿಗೆ ದೇಶದ ಸಾರ್ವಜನಿಕ ವಿಚಾರಗಳಲ್ಲಿ ತಿಳುವಳಿಕೆ ತೀರ ಕಡಿಮೆ. ಬಹುಜನ ತಮ್ಮ ಹೊಟ್ಟೆಯ ಪಾಡಿನ ಕೆಲಸದಲ್ಲೇ ನಿರತರಾಗಿ, ಆ ಗೊಂದಲದಿಂದಾಗಿ ಬೇರಾವುದನ್ನೂ ಯೋಚನೆ ಮಾಡಲಾರದವರಾಗಿರುತ್ತಾರೆ. ಇವನ್ನು ಯೋಚನೆ ಮಾಡಬಲ್ಲವರ ಸಂಖ್ಯೆಯೂ ಕಡಿಮೆಯೇ. ಜನ ಈ ವಿಷಯದಲ್ಲಿ ತಿಳಿದುಕೊಳ್ಳಬೇಕಾದಂತಹ ಸಂಗತಿಗಳು ಅಪಾರವಾಗಿವೆ. ಆ ಸಂಬಂಧದ ಶಿಕ್ಷಣವೇ ಇಲ್ಲದವರು ಹೆಚ್ಚು ಮಂದಿ. ನಮ್ಮಲ್ಲಿ ಬರೆಯ ಓದು ಬಲ್ಲವರ, ಸಂಖ್ಯೆ ಸೇಕಡಾ ಹದಿನೈದರಷ್ಟೂ ಇಲ್ಲ. ಹಾಗೆ ಓದು ಬಂದವರೂ ಕೂಡ ಸಾರ್ವಜನಿಕ ವಿಚಾರಗಳಲ್ಲಿ ತಿಳುವಳಿಕೆ ಸಾಲದವರು. ಅಂಥವರ ಅಭಿಪ್ರಾಯಕ್ಕೆ ಕೊಡುವ ಬೆಲೆ ನಿಜಕ್ಕೂ ಪ್ರಯೋಜನದ್ದಲ್ಲ. ವಯಸ್ಸು ತುಂಬಿದ ಮಾತ್ರಕ್ಕೆ, ನಾಲ್ಕಕ್ಷರ ಓದಲು ಬರುತ್ತದೆ ಎಂದ ಮಾತ್ರಕ್ಕೆ, ಅವನು ಪ್ರಜೆಗೆ ತಕ್ಕವನೂ ಎಂದು ಮನ್ನಣೆ ಕೊಟ್ಟಂತಾಯಿತೇ ವಿನಾ ಆ ಕೆಲಸ ಅವನಿಂದಾಗುತ್ತದೆ. ಎಂದು ತಿಳಿಯುವುದು ತಪ್ಪು. ತಿಳುವಳಿಕೆ ಇಲ್ಲದ ಜನ, ಯಾವ ಒಂದು ವಿಷಯವನ್ನು ಒಪ್ಪಿದರೂ, ಬಿಟ್ಟರೂ ಅದಕ್ಕೆ ಹೆಚ್ಚಿನ ಬೆಲೆ ಕೊಡಬಹುದೇ? ಇಂಥ ಜನರನ್ನು ಅವರವರಿಗೆ ಸಂಬಂಧಿಸಿದ, ಸ್ವಾರ್ಥಗಳ ವಿಷಯದಲ್ಲಿ ಕೆರಳಿಸಿ, ಆಸೆ ಹುಟ್ಟಿಸಿ, ಸುಳ್ಳು ಭರವಸೆಗಳನ್ನು ಕೊಟ್ಟು ತಂತಮ್ಮ ಪಂಗಡಗಳ ಆದರ್ಶಗಳ ಕಡೆಗೆ ಸೆಳೆದು ಓಟು ಹಾಕಿಸಿಕೊಳ್ಳುವುದು ಸುಲಭದ ಕೆಲಸ. ರಾಜಕೀಯದಲ್ಲಿ ಎಲ್ಲ ದೇಶಗಳಲ್ಲೂ ನಿತ್ಯ ನಡೆಯುತ್ತಿರುವ ಕೆಲಸ ಇದುವೆ, ಇಂಥ ಜನರ ಬೆಂಬಲ ಪಡೆದು, ತಮ್ಮ ಶಕ್ತಿ ಬೆಳೆಯಿಸಿಕೊಂಡು, ಸರಕಾರ ನಡೆಯಿಸುವ ನಾಯಕರಾಗುವುದಕ್ಕೆ ಹವಣಿಸುವವರು ಹಲವರು.

ಮಿತ ಅರ್ಥ

ಎಲ್ಲಿಯ ತನಕ ಜನರು ಸರಕಾರದ ಕೆಲಸಗಳ ವಿಷಯದಲ್ಲಿ ತಿಳುವಳಿಕೆ ಇಲ್ಲದವರಾಗುತ್ತಾರೋ ತಮಗಿರುವ ತಿಳುವಳಿಕೆಯನ್ನು ಬುದ್ಧಿ

ಪೂರ್ವಕವಾಗಿ ಉಪಯೋಗಿಸಲು ಅಶಕ್ತರಾಗಿರುತ್ತಾರೋ ಅಲ್ಲಿಯ ತನಕ ಪ್ರಜಾಪ್ರಭುತ್ವವೆಂಬುದು ಬರಿಯ ಮಿತವಾದ ಅರ್ಥವುಳ್ಳ ಸಂಗತಿಯಾಗುತ್ತದೆ.

ಪ್ರಜೆಯ ಮನಸ್ಸನ್ನು ಸೆಳೆಯುವ ಸಲುವಾಗಿ ಅವನ ಮುಂದೆ ದೇಶದ ಹಲವೊಂದು ಬಲ್ಲವರೆನಿಸುವವರು, ಅಥವಾ ತಾವು ಸರಕಾರದ ನಾಯಕರಾಗಬೇಕು ಎಂದು ಹಂಬಲಿಸುವವರು. ಬೇರೆ ಬೇರೆ ಆದರ್ಶಗಳನ್ನು ಜನರ ಮುಂದಿರಿಸಿ ಅವರ ಮತ ಪಡೆಯಲೆತ್ನಿಸುತ್ತಾರೆ. ಹೀಗೆ ಮಾಡುವ ಕೆಲಸ ಜನರ ಅಭಿಪ್ರಾಯಕ್ಕೆ ಸಮನಾದ ಸಂಗಡ ನಿರ್ಮಿಸುವ ಕೆಲಸವಲ್ಲ. ಬದಲು ಕೆಲವೊಂದು ಮಂದಿ ಬುದ್ಧಿವಂತರ, ಇಲ್ಲವೆ ಅಧಿಕಾರ ಪ್ರಿಯರ, ಗುಂಪಿನಿಂದ ಹೊರಡುವ ಬೇರೆ ಬೇರೆ ಆದರ್ಶಗಳಿಗೆ ಜನರ ಒಪ್ಪಿಗೆಯನ್ನು ಪಡೆಯುವ ಕೆಲಸವಾಗುತ್ತದೆ.

ಗುಂಪುಗಳು ಆದರ್ಶ.

ಕೋಟ್ಯಾವಧಿ ಪ್ರಜೆಗಳಿರುವಲ್ಲಿ ಹಲವಾರು ಭಿನ್ನ ಆದರ್ಶಗಳು ಜನರ ಮುಂದೆ ಬರಬಹುದು. ಜನರೇ ಸ್ವಂತವಿಚಾರ ಮಾಡಿರುವುದರಿಂದ, ತಮ್ಮ ಮುಂದೆ ಬುದ್ಧಿವಂತರು ಇರಿಸಿದ ಆದರ್ಶಗಳನ್ನು ಆರಿಸಬೇಕಾಗುತ್ತದೆ. ಒಂದು ದೇಶದಲ್ಲಿ ಈ ಬುದ್ಧಿವಂತರ ಸಂಗಡಗಳು ಹಲವಾರು ಇರಬಹುದು. ಸಂಗಡಗಳು ಎಷ್ಟು ಹೆಚ್ಚಾಗುತ್ತವೋ, ಅವಕ್ಕೆ ಸಿಕ್ಕುವ ಬಲ ಅಷ್ಟು ಹಂಚಿಹೋಗುತ್ತವೆ. ಒಂದು ದೇಶದ ಪ್ರಜಾಪ್ರತಿನಿಧಿಗಳಿರಬಹುದಾದರೆ, ಆ ಮುನ್ನೂರು ಮಂದಿ ಮೂರು ಸಂಗಡ ಮಾಡಿಕೊಂಡರೆ, ಯಾವ ಸಂಗಡಕ್ಕೂ ಹೆಚ್ಚಿನ ಬಲಸಿಗಲಾರದು. ಅವರು ಒಟ್ಟುಗೂಡಿ ಸರಕಾರ ನಡೆಯಿಸುವ ಕೆಲಸ ಕಷ್ಟವಾದೀತು. ಹಾಗಾಗಿ—ತಾವು ತಾವು ಮುಖಂಡರಾಗಬೇಕು ಎಂಬ ದುರಾಸೆಯಿಂದ ಸಂಗಡಗಳ ಸಂಖ್ಯೆ ಅರ್ಥಾತ್ ಅವರು ಇರಿಸುವ ಆದರ್ಶಗಳ ಸಂಖ್ಯೆ ಹೆಚ್ಚಾಗಿದ್ದರೂ ಅದರಿಂದ ಸಂಗಡದ ಶಕ್ತಿ ಕುಂದುವ ಭೀತಿಇದೆ. ಆದುದರಿಂದ ಜನ ಒಪ್ಪಬಹುದಾದ ಕೆಲವೇ ಆದರ್ಶಗಳನ್ನು ಜನರ ಮುಂದಿರಿಸಿ ಕೆಲವೇ ಸಂಗಡಗಳು ಉಳಿಯುವುದು ಸಾಧ್ಯವಾಗುತ್ತದೆ.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಂದು (Conservatives ಅಂದರೆ 'ಮಂದಗಾಮಿಗಳು' ಲೇಬರ್ ಅಂದರೆ ಶ್ರಮಗಾರರು; ಲಿಬರಲ್ (ಉದಾರವಾದಿಗಳು) ಮತ್ತು ಕಮ್ಯೂನಿಸ್ಟ್ ಎಂದು ಬರಿಯ ನಾಲ್ಕೈದು ಪಂಗಡಗಳನ್ನು ಕಾಣುತ್ತೇವೆ. ಕೆಲವೊಂದು ಮಂದಿ ಪ್ರತಿನಿಧಿಗಳು ಯಾವ ಪಂಗಡಕ್ಕೂ ಸೇರದೆ, ಸ್ವತಂತ್ರರಾಗಿ "ನಿಮ್ಮ ಪರವಾಗಿ ನಾವು ಪ್ರತಿನಿಧಿಯಾಗುತ್ತೇವೆ" ಎಂದು ಕೇಳುವವರೂ ಉಂಟು. ಇವರೆಲ್ಲ ಪ್ರಜೆಗಳ ಬೆಂಬಲ ಪಡೆಯಲು ಏನುಮಾಡಬೇಕಾಗುತ್ತದೆ ಎಂಬುದನ್ನು ನೋಡೋಣ.

ಪ್ರಜೆಗಳ ಒಪ್ಪಿಗೆ

ಸರಕಾರವಿರುವುದು ಜನರ ಹಿತಕ್ಕಾಗಿ. ಅಂದಮೇಲೆ ಜನಕ್ಕೆ ಏನು ಬೇಕು? ಶರೀರ ಸುಖ, ಮಾನಸಿಕ ಸುಖ, ಶಾಂತಿ ಇವು ಬೇಕು. ಇವನ್ನು ಸಾಧ್ಯವಾಗಿ ಮಾಡುವುದು ಯಾವುದರಿಂದ? ಶರೀರ ಸುಖಕ್ಕೆ ಅನ್ನ, ಬಟ್ಟೆ, ಬೇಕು. ವೈದ್ಯಬೇಕು. ವಿಲಾಸಬೇಕು. ಈ ಅನುಕೂಲತೆ ಒದಗಿಸುವುದಕ್ಕೆ ಹಣಬೇಕು. ಈ ಹಣ ಯಾರಿಂದ ಪಡೆಯಬೇಕು? ಹೇಗೆ ಪಡೆಯಬೇಕು? ಎಂಬೆಲ್ಲ ವಿಚಾರ ಬರುತ್ತದೆ. ಆಗ ಜನರ ಸಂಪತ್ತನ್ನು ಹೆಚ್ಚಿಸುವ ವಿಚಾರ ಬರುತ್ತದೆ. ಬುದ್ಧಿ ಸುಖಕ್ಕೆ ಜನರಿಗೆ ಬೇಕಾದ ಶಿಕ್ಷಣವನ್ನೋ, ಜ್ಞಾನವನ್ನೋ, ವಿಲಾಸವನ್ನೋ ಒದಗಿಸಿ ಶಾಂತಿ ದೊರೆಯಲು — ಆಂತರಿಕ ಕ್ಷೋಭೆ, ಕ್ಷಾಮಕಾಟವು, ಸುಲಿಗೆ, ಕೊಲೆ ಇರಬಾರದು ಹೊರಗಿನಿಂದ ಯಾವ ಭೀತಿ ಇರಬಾರದು. ಈ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ಹಾಗೆ ತಾವೇನೇನು ಮಾಡುತ್ತೇವೆ ಎಂದು ಈ ಪಂಗಡಗಳು ಹೇಳಬೇಕಾಗುತ್ತದೆ. ಅದಕ್ಕಾಗಿ ಒಂದೊಂದು ಪಂಗಡದವರು ತಂತಮ್ಮ ದಾರಿ ಹೇಳಬಹುದು.

1 ಬಡ ಜನರ ಮೇಲಿನ ತೆರಿಗೆ ತಗ್ಗಿಸುತ್ತೇವೆ. ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸುತ್ತೇವೆ ಇಂಥಿಂಥ ತೆರಿಗೆಗಳನ್ನು ಹೀಗೆಯೇ ಹೇರುತ್ತೇವೆ.

2 ದೇಶದ ಸಂಪತ್ತನ್ನು ಸಮಾನವಾಗಿ ಜನರಲ್ಲಿ ಹಂಚಿ ಹಾಕುತ್ತೇವೆ ಪ್ರತಿಯೊಬ್ಬನಿಗೂ ಸ್ವಂತ ಜಮೀನನ್ನು ಕೊಡುತ್ತೇವೆ. ಕೆಲಸ

ಗಾರರ ಸಂಬಳ ಹೆಚ್ಚಿಸುತ್ತೇವೆ. ಕೆಲಸಗಾರರಿಗೆ ಕಡಿಮೆ ದರದಲ್ಲಿ ಅನ್ನ, ವಸ್ತ್ರ ಕಲ್ಪಿಸುತ್ತೇವೆ; ಜನಕ್ಕೆ ಧರ್ಮಾರ್ಥ ಶಿಕ್ಷಣ ಕೊಡಿಸುತ್ತೇವೆ. ವೈದ್ಯಕೀಯ ಸಹಾಯ ಕೊಡುತ್ತೇವೆ.

3 ನಮ್ಮ ರಾಜ್ಯ ವಿಸ್ತರಿಸುವಂತೆ ಅಥವಾ ನಮ್ಮ ದೇಶಕ್ಕೆ ಹಿತ ವಾಗುವಂತೆ ಪರರಾಷ್ಟ್ರಗಳೊಡನೆ ಇಂಥಿಂಥ ಸಂಬಂಧ ಬೆಳೆಸುತ್ತೇವೆ ನಮ್ಮ ಸೇನಾಶಕ್ತಿ ಬೆಳೆಸುತ್ತೇವೆ. ಜನರಿಗೆ ಕಡ್ಡಾಯ ಯುದ್ಧ ಶಿಕ್ಷಣ ಕೊಡುತ್ತೇವೆ.

4 ಹೆಚ್ಚಿನ ಹಣ ಸೇನೆಗೆ ವ್ಯಯವಾಗುವುದರಿಂದ ಆ ವೆಚ್ಚ ಕಡಿಮೆ ಮಾಡಿ ಜನ ಜೀವನಕ್ಕೆ ಸೌಕರ್ಯ ಕಲ್ಪಿಸುತ್ತೇವೆ. ಇಂಥ ಹಲವಾರು ಬಗೆಯ ಭರವಸೆಯನ್ನು ಇದರ ಮುಂದಕ್ಕೆ ಇರಿಸಬಹುದು.

ಆದರ್ಶಗಳ ಕ್ಲಿಷ್ಟತೆ

ಮೇಲಿನ ಬಗೆಯಲ್ಲಿ ಜನರ ಮುಂದೆ ಇರಿಸುವ ಆದರ್ಶಗಳಿಂದ ಒಂದೊಂದು ಪಂಗಡ ಸಿಟ್ಟುಗೊಳ್ಳಬಹುದು; ಒಂದೊಂದು ಬಗೆಯ ಜನ ಸಂತೋಷಗೊಳ್ಳಬಹುದು. ಈ ಎಲ್ಲ ಕೆಲಸ ಮಾಡುವಾಗ ಕೆಲವರಿಗೆ ಹಾನಿ ತಟ್ಟಬಹುದು, ಕೆಲವರ ಸ್ಥಿತಿ ಇದ್ದುದಕ್ಕಿಂತ ಒಳಿತಾಗಬಹುದು, ಕೆಲವರದು ಕೆಟ್ಟದಾಗಲೂಬಹುದು. ಇವುಗಳಲ್ಲಿ ಎಷ್ಟೋ ಆದರ್ಶಗಳು ಕೆಲಸಕ್ಕೆ ಬರಬೇಕಾದರೆ ರಕ್ತಪಾತವಾಗಬಹುದು. ಅನ್ಯಾಯವಾಗಬೇಕಾಗಬಹುದು. ಎಷ್ಟೋ ಕೆಲಸಗಳು ಬಹು ದೀರ್ಘ ಕಾಲದ ಕ್ರಮದಿಂದ ಆಗಬೇಕಾದವುಗಳಿರಬಹುದು ಅದಕ್ಕೆ ದೇಶದ ಒಳಗಿನ ಮತ್ತು ಹೊರಗಿನ ಪರಿಸ್ಥಿತಿಗಳು, ಅನುಕೂಲವಾಗಿರಬಹುದು.; ಪ್ರತಿಕೂಲವಾಗಿರಬಹುದು. ಅಂತು ಒಂದೊಂದು ಪಂಗಡ-ತಂತನ್ನ ಆದರ್ಶವನ್ನು ಸ್ಥೂಲರೂಪದಲ್ಲಿ ಜನರ ಮುಂದಿಡಬೇಕಾಗುತ್ತದೆ. ಜನ ಅದನ್ನು ಸುಲಭವಾಗಿ ಒಪ್ಪುವಂತೆ ಆಕರ್ಷಕ ಮಾತುಗಳಲ್ಲಿ ಅವನ್ನೇ ತಿಳಿಸಿ ಹೇಳಬೇಕಾಗುತ್ತದೆ. ತಮ್ಮ ಕೆಲಸದ ಕಷ್ಟವನ್ನೂ, ಅಸಾಧ್ಯತೆಯನ್ನೂ ಅಡಗಿಸಿಡಬೇಕಾಗುತ್ತದೆ. ತಮಗೆ ಒಲಿಯಬಹುದಾದ ಜನಗಳ ಆಶೆಯನ್ನು ಹೆಚ್ಚಿಸಬೇಕಾಗುತ್ತದೆ. ಅವರ ಆಸೆಗೆ ವಿರೋಧವಾಗಿ

ಬರಬಹುದಾದ ಜನಗಳ ಗುಂಪಿನ ಮೇಲೆ ದ್ವೇಷವನ್ನು ಬೆಳೆಯಿಸುದುಂಟು. ಅಂತು ಪ್ರಜೆಗಳ ಪಾಲಿಗೆ ಇರುವ ಕೆಲಸವೆಂದರೆ, ತಮಗೆ ಹಿತವಾಗಿ ಕಾಣುವ ಯಾವುದಾದರೊಂದು ಪಂಗಡದ ಆದರ್ಶವನ್ನೊಪ್ಪಿ ಆ ಪಂಗಡದ ಪ್ರತಿನಿಧಿಗಳು, ಸಾರ್ವಜನಿಕ ಚುನಾವಣೆಗಳಲ್ಲಿ ಬಹು ಸಂಖ್ಯೆಯಿಂದ ಗೆದ್ದು ಬರುವಂತೆ ಮಾಡುವುದು.

ನಮ್ಮ ದೇಶದಲ್ಲಿ

ನಮ್ಮ ಹಿಂದುಸ್ಥಾನದ ಇಂದಿನ ಸ್ಥಿತಿಯನ್ನು ಪರಿಶೀಲಿಸುವ. ನಮ್ಮ ಮುಖ್ಯ ರಾಜಕೀಯ ಪಂಗಡಗಳಲ್ಲಿ ಕಾಂಗ್ರೆಸ್ ಪಂಗಡ, ಸೋಶಲಿಸ್ಟ ಪಂಗಡ, ಕಮ್ಯುನಿಸ್ಟ ಪಂಗಡ, ಹಿಂದೂ ಮಹಾ ಸಭೆ, ಮತ್ತು ಮುಸ್ಲಿಮ್ ಲೀಗ್ ಈ ಐದನ್ನು ಗಣ್ಯ ರಾಜಕೀಯ ಪಕ್ಷಗಳನ್ನಾಗಿ ಎಣಿಸಬಹುದು. ಇವುಗಳಲ್ಲಿ ಕಾಂಗ್ರೆಸ್ ಎಂಬುದು ಬಹು ವರ್ಷಗಳಿಂದ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಂಗಡ. ನಾಳೆ ನಮ ದೇಶದ ಚುನಾವಣೆಯಲ್ಲಿ ಸ್ಪರ್ಧಿಸುವ ತೀರ ಹಿರಿಯ ಪಂಗಡ ಅದೇನೆ. ಜನರಲ್ಲಿ ಆರ್ಥಿಕ ಸಮತೆ ಉನ್ನತಿಗಳನ್ನುಂಟು ಮಾಡಬೇಕೆನ್ನುವುದು ಇದರ ಮುಖ್ಯ ಧ್ಯೇಯಗಳಲ್ಲೊಂದು ಇದು ನಮ್ಮ ದೇಶದ ಎಲ್ಲ ಜಾತಿ ಮತದವರಿಗೂ ಪ್ರವೇಶವಿರುವ ಸಂಸ್ಥೆ. ಆರ್ಥಿಕ ವಿಚಾರಗಳಲ್ಲಿ ಅದು ತನ್ನ ಮುಖ್ಯಧ್ಯೇಯವನ್ನು ಹೇಳಿದರೂ ಆ ಧ್ಯೇಯವನ್ನು ಯಾವೆಲ್ಲ ಶಾಸನಗಳಿಂದ, ಬಗೆಗಳಿಂದ ಸಾಧಿಸುತ್ತದೆ ಎಂದು ಹೇಳಿಲ್ಲ. ದೊಡ್ಡ ದೊಡ್ಡ ಉದ್ದಿಮೆಗಳನ್ನು ಸರಕಾರವೇ ನಡೆಯಿಸಿಕೊಂಡು ಹೋಗುತ್ತದೆಯೋ, ಹೋಗುತ್ತದೆಯಾದರೆ ಯಾವುವು? ಖಾಸಗಿ ಉದ್ಯೋಗಕ್ಕೆ ಬಿಟ್ಟವುಗಳಾವುವು ಎಂಬುದನ್ನು ಇನ್ನೂ ಸ್ಪಷ್ಟ ಪಡಿಸಲಿಲ್ಲ. ವಿವಿಧ ತೆರಿಗೆಗಳ ವಿಚಾರದಲ್ಲಿ ತೆರಿಗೆಯ ಭಾರ ಯಾರ ಮೇಲೆ ಹೆಚ್ಚು ಬಿದ್ದೀತು ಎಂಬುದನ್ನು ಅದು ನಿರ್ದಿಷ್ಟವಾಗಿ ಗೊತ್ತುಪಡಿಸಿಲ್ಲ.

ಸಮತಾವಾದಿಗಳ ಆದರ್ಶ

ಸೋಶಲಿಸ್ಟರು ಅಥವಾ ಸಮಾಜವಾದಿಗಳು ನಮ್ಮ ದೇಶದಲ್ಲಿ ಅಲ್ಪಸಂಖ್ಯಾಕರು. ಅವರ ಉದ್ದೇಶ ಸಮಾಜ ಸಮತಾವಾದ. ದೊಡ್ಡ

ಉದ್ದಿಮೆಗಳನ್ನೆಲ್ಲ ಸರಕಾರವೇ ನಡೆಯಿಸಬೇಕು. ಖಾಸಗಿ ಪ್ರಯತ್ನಗಳಿಗೆ ಹೆಚ್ಚಿನ ಪ್ರೋತ್ಸಾಹವಿರಬಾರದು ಎಂಬುದು ಅವರ ಧೋರಣೆ.

ಕಮ್ಯೂನಿಸ್ಟರು

ಕಮ್ಯುನಿಸ್ಟ ಪಂಗಡ ರಸ್ಯಾ ದೇಶದ ರಾಜಕೀಯ ನೀತಿಯನ್ನು ಅನುಸರಿಸುವ ಪಂಗಡ. ದೇಶದ ಯಾವತ್ತು ಉದ್ದಿಮೆ ಸಂಪತ್ತು ದೇಶದ ಯಾವತ್ತು ಜನಗಳದ್ದೆಂದು — ಖಾಸಗಿ ಸಂಪತ್ತಿಗೆ ಅವಕಾಶ ಇರಕೂಡದೆಂದು ಶ್ರಮಗಾರರಾದವರೇ ಸರಕಾರ ನಡೆಯಿಸತಕ್ಕದ್ದೆಂದು ಹೇಳುವ ಪಂಗಡ ಇದು. ಶ್ರಮಗಾರರೆಂದರೆ ಯಾರು? ಬರಿಯ ಕೂಲಿಯವರೇ? ಕಾರ್ಖಾನೆಯ ಕೆಲಸಗಾರರೇ? ಕೃಷಿಕರೇ? ಅಂದರೆ ಶರೀರ ಶ್ರಮ ಮಾಡುವವರು ಬುದ್ಧಿ ಶ್ರಮ ಮಾಡುವವರು ಅಧಿಕಾರಕ್ಕೆ ಬರುವುದಿಲ್ಲವೇ? ಎಂಬುದೆಲ್ಲ ಜನತೆಯೇ ಯೋಚಿಸಬೇಕಾದ ವಿಷಯ. ಅವರ ಧೋರಣೆಯಂತೆ ನಡೆದರೆ ಅವರ ಧೋರಣೆಗೆ ವಿರುದ್ಧವಾದ ಬೇರೆ ಯಾವುದೇ ರಾಜಕೀಯ ಪಂಥಕ್ಕೂ ಎಡೆಯಿಲ್ಲ. ಅ ಒಂದೇ ಪಂಗಡ ಇರತಕ್ಕದ್ದು. ಆ ಪಂಗಡದಲ್ಲಿ ನಿಯೋಜಿತರಾದ ಜನಗಳನ್ನೇ ಪ್ರತಿನಿಧಿಗಳಾಗಿಆರಿಸಲಿಕ್ಕಲ್ಲಿ ಎಡೆಯಿರಲಾರದೆಂಬುದು ಕಮ್ಯುನಿಸ್ಟರಾಜಕೀಯದ ದಾರಿ. ದೇಶದಲ್ಲಿ ಬಹು ಸಂಖ್ಯಾತರಾದ ಶ್ರಮ ಜೀವಿಗಳ ಹಿತ ಅವರ ಗುರಿ ಎಂಬುದು ನಿಜ. ಅವರಿಗೆ ಅನ್ನ, ಅನುಕೂಲತೆ ಕೊಡುತ್ತೇವೆ. ಶ್ರೀಮಂತರ ಸಂಪತ್ತನ್ನು ಹಂಚಿಕೊಡುತ್ತೇವೆಂದು ಅವರ ಆಸೆಯನ್ನು ಹೆಚ್ಚಿಸಿ, ಶ್ರೀಮಂತರ ಮೇಲೆ ದ್ವೇಶ ಬೆಳೆಯಿಸಿ ಪಂಗಡ ಕಟ್ಟುವ ವಿಧಾನ ಅವರದ್ದು. ಈ ಕೆಲಸ ಮಾಡುವಾಗ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಂದರೆ ತನ್ನಿಷ್ಟ ಕಂಡ ಉದ್ಯೋಗ ನಡೆಯಿಸುವುದಕ್ಕೆ ಪ್ರಜೆಗೆ ಹಕ್ಕಿಲ್ಲ. ತನ್ನ ಸ್ವಂತ ಅಭಿಪ್ರಾಯ ಸರಕಾರದ ಧೋರಣೆಗೆ ವಿರುದ್ಧವಾದಲ್ಲಿ ಹೇಳುವಂತಿಲ್ಲ. 'ಸರಕಾರವೇ ದೇವರು' ಎಂಬ ತತ್ವ ಅವರದ್ದು. ಈ ಬಗೆಯ ತತ್ವ ಮನ್ನಿಸಿದರೆ ಸರಕಾರ ತಪ್ಪಿ ನಡೆದಾಗ ಜನ ಬಹಿರಂಗವಾಗಿ ಅದನ್ನು ತಿದ್ದುವುದಕ್ಕೆ ಅವಕಾಶವೂ ಇಲ್ಲ. ಆದರೆ ಧ್ಯೇಯವೇನೋ ಬಹುಜನರ ಕಲ್ಯಾಣ ಸಾಧನೆ. ಅದನ್ನೆ ಒತ್ತಿ ಹೇಳಿ, ಉಳಿದ ವಿಚಾರದಲ್ಲಿ ಮೌನವಾಗಿರುವುದು ಅವರ ಧೋರಣೆ.

ಜಾತೀಯ ಪಂಗಡಗಳು

ಉಳಿದ ಎರಡು ಪಂಗಡಗಳು ಹಿಂದೂ ಮಹಾ ಸಭೆ ಮತ್ತು ಮುಸ್ಲಿಮ್ ಲೀಗ್. ಇವರ ಆದರ್ಶ ತಂತವನ್ನು ಮತ ಧರ್ಮಕ್ಕೆ ಸೇರಿದವರ ಕಡೆಗೆ ಹೆಚ್ಚಿನ ಗಮನ ಕೊಡುವುದಾಗಿರುತ್ತದೆ. ಹಾಗೆ ಗಮನ ಕೊಡದೆ ಇರುವಲ್ಲಿ, ಜಾತಿ ಮತವನ್ನು ಅನುಸರಿಸಿದ ಪಂಗಡಕ್ಕೆ ಅರ್ಥವೇ ಇಲ್ಲ. ಆಗ ಅವರು ತಮ್ಮ ರಾಜಕೀಯ ಮತ್ತು ಆರ್ಥಿಕ ನೀತಿಯನ್ನ ಜನತೆಯ ಮುಂದೆ ಇಡಬೇಕು. ಜನ, ಜಾತಿ ಅಭಿಮಾನ ಮರೆತು ಈ ರಾಜಕೀಯ ಆರ್ಥಿಕ ಆದರ್ಶಗಳನ್ನು ಪರಿಶೀಲಿಸಿ ಇಂಥ ಪಂಗಡಗಳಿಗೆ ಬೆಂಬಲ ಕೊಡಬೇಕು.

ಜನಸಂಖ್ಯೆಯ ಮೂಲದಿಂದ ಪಂಗಡದ ಬೆಂಬಲ

ಈ ಎಲ್ಲ ರಾಜಕೀಯ ಪಂಗಡಗಳು ತಮ್ಮದೇ ಆದ ಸಂಸ್ಥೆ, ಸಂಘಟನೆ ಸದಸ್ಯತನ ಮಾಡಿಕೊಂಡು ಪ್ರಚಾರ ನಡೆಯಿಸುತ್ತವೆ. ಈ ಪಂಗಡಗಳಲ್ಲಿ ಅತಿ ದೊಡ್ಡದಾದ ರಾಷ್ಟ್ರೀಯ ಕಾಂಗ್ರೆಸ್ ಸಹ ಜನಸಂಖ್ಯೆಯ ದೃಷ್ಟಿಯಿಂದ ತನ್ನ ರಾಜಕೀಯ ಪಂಗಡವನ್ನುಳಿಸುವುದು ಕಷ್ಟ. ಕಾರಣ ದೇಶದಲ್ಲಿ ಸುಮಾರು ಹದಿನೆಂಟು ಕೋಟಿ ಮತದಾರರು ಇರುವಾಗ, ಬರಿಯ ಒಂದು ಕೋಟಿಯಷ್ಟು ಜನ ಸದಸ್ಯರು ಈ ಪಂಗಡಕ್ಕಿರಬಹುದು. ಉಳಿದ ಪಂಗಡಗಳಿಗೆ ಈ ಸಂಖ್ಯೆಯ ಕಾಲಂಶದಷ್ಟು ಸದಸ್ಯರೂ ಇಲ್ಲ. ನಮ್ಮ ರಾಜಕೀಯ ಪಂಗಡಗಳೇ ಸದಸ್ಯತನದ ದೃಷ್ಟಿಯಿಂದ ದುರ್ಬಲವಾಗಿರುವಾಗ, ಅವು ಆರಿಸುವ ಜನರ ಪ್ರತಿನಿಧಿಗಳು ಎಷ್ಟರ ಮಟ್ಟಿನ ಪ್ರಾತಿನಿಧ್ಯ ತಾಳುತ್ತಾರೆ, ಎಂಬುದು ವಿಚಾರಾಸ್ಪದ ವಿಷಯವಾಗುತ್ತದೆ. ಜನತೆಯಲ್ಲಿ ರಾಜಕೀಯದ ತಿಳಿವು ಬೆಳೆಯದೆ ಹೋದರೆ, ಪಂಗಡಗಳು ಬೆಳೆಯಲಾರವು. ಪಂಗಡ ಬೆಳೆಯದೆ ಪಂಗಡ ಆದರಿಸುವ ಪ್ರಜಾ ಸಂಸ್ಥೆಗಳೂ ಬೆಳೆಯಲಾರವು.

ಚುನಾವಣೆಯಾದ ಬಳಿಕ.

ಈಗ ನಮ್ಮದೇಶದ ಪ್ರಾಂತೀಯ ಸರಕಾರಕ್ಕೋ, ಕೇಂದ್ರಸರಕಾರಕ್ಕೋ ಚುನಾವಣೆ ನಡೆಯುತ್ತದೆ ಎಂದು ತಿಳಿಯೋಣ. ಮಿಲಿಯ

ಕ್ಕೊಟ್ಟ ಪ್ರತಿನಿಧಿಯಂತೆ, ನಾನ್ನೂರು ಜನರು ಕೇಂದ್ರ ಸರಕಾರದ ಪ್ರಜಾ ಪ್ರತಿನಿಧಿ ಸಭೆಯಲ್ಲಿರಲು ಅವಕಾಶವಿದೆ ಎಂದು ತಿಳಿಯೋಣ. ಇವುಗಳಲ್ಲಿ ಕನಿಷ್ಟ ಅರೆವಾಸಿಗಿಂತ ಹೆಚ್ಚಿಗೆ ಜನರು ಬಂದು ಸಂಗಡ ಸೇರಿದವರಾಗಿ, ಚುನಾಯಿತರಾಗಿ ಬಂದಲ್ಲಿ ಆ ಸಂಗಡ ಸರಕಾರವನ್ನು ನಡೆಯಿಸುವ ಹಕ್ಕನ್ನು ಗಳಿಸುತ್ತದೆ. ಆ ಸಂಗಡದ ಮುಖಂಡನನ್ನು ಪ್ರಜಾ ಅಧ್ಯಕ್ಷನೆಂಬವನು "ನೀವು ಸರಕಾರ ನಡೆಯಿಸಿ" ಎಂದು ಕರೆದು ಹೇಳುತ್ತಾನೆ. ಅವರು ಹತ್ತು ಹದಿನೈದು ಮಂತ್ರಿಗಳಿಂದ ಕೂಡಿದ ಮಂತ್ರಿ ಮಂಡಲಕ್ಕೆ ತಿಳಿಸುತ್ತಾನೆ. ಈ ಸಂಗಡದವರು ಮುಂದೆ ನಾಲ್ಕೋ, ಐದೋ ವರ್ಷಗಳ ತನಕ, ಗೊತ್ತುಪಡಿಸಿದಷ್ಟು ಕಾಲ, ಸರಕಾರದ ಕೆಲಸಗಳನ್ನು ನಡೆಯಿಸಿಕೊಂಡು ಹೋಗುತ್ತಾರೆ.

ವಿರೋಧ

ಉಳಿದ ಎಲ್ಲಾ ಸಂಗಡಗಳಿಂದ ಆರಿಸಿ ಬಂದ ಪ್ರತಿನಿಧಿಗಳು ಸುಮ್ಮನಿರಲಾರರು. ಅವರು ಸರಕಾರವಾಗಿ ನಿಂತ ಸಂಗಡದ, ವಿರೋಧ ತಳೆಯಬಹುದು. ಪ್ರಜಾ ಪ್ರತಿನಿಧಿ ಮಂಡಲದಲ್ಲಿ, ತಳೆಯುವ ಧೋರಣೆ ಸರಕಾರಕ್ಕೆ ವಿರೋಧವಾಗಬಹುದು. ಸರಕಾರ ರಚಿಸಿದ ಸಂಗಡಕ್ಕೆ ಜನರಿಂದ, ಉಳಿದೆಲ್ಲ ಸಂಗಡಗಳಿಗಿಂತಲೂ ಮಿಕ್ಕ ಬಲಸಿಗದೆ ಹೋದರೆ,ಅಂಥ ಸಂಗಡ ಸರಕಾರವಾಗಿ ಉಳಿಯಲಾರದು. ಆಗ ಬೇರೆಯೇ ಸರಕಾರವಾಗಬೇಕು. ಹೀಗಾಗಿ ಯಾವುದೇ ಒಂದು ಸಂಗಡ, ಬಲವಾದ, ಧರ್ಮ ಕಾಲದ ಸರಕಾರ ನಡೆಯಿಸಬೇಕಾದರೆ ಅದು ಉಳಿದೆಲ್ಲ ಸಂಗಡಗಳಿಗಿಂತ ಹೆಚ್ಚಿನ ಪ್ರಾತಿನಿಧ್ಯ ಉಳ್ಳದಾಗಿ ಬೇಕಾಗುತ್ತದೆ.

ವಿರೋಧ ಸಂಗಡಗಳು ತೀರ ದುರ್ಬಲವಾಗಿದ್ದರೆ, ಆಗ ಬಲಶಾಲಿಯಾದ ಸಂಗಡ, ಅವರ ಅಭಿಪ್ರಾಯವನ್ನು ಅಲಕ್ಷಿಸಿ ಕೆಲಸ ಮಾಡುತ್ತದೆ. ಉಳಿದ ಸಂಗಡದವರೂ, ತಮ್ಮಂತೆಯೇ ಜನರಿಂದ ಚುನಾಯಿತರಾದವರು ಎಂಬ ಉದಾರ ದೃಷ್ಟಿ ಗೆದ್ದ ಸಂಗಡಕ್ಕೆ ಇರಬೇಕಾಗುತ್ತದೆ. ವಿರೋಧವನ್ನು ತೀರ ಅಲಕ್ಷಿಸಿ ಅವರು ನಡೆಯಬಾರದು. ಮುಖ್ಯ ನೀತಿ ನಿರ್ಣಯಗಳಲ್ಲಿ-ತಮ್ಮ ಸಂಗಡದ ಆದರ್ಶ ಸಾಧಿಸಿದರೂ

ವಿರೋಧ ಪಂಗಡಗಳಿಗೆ ಉಳಿದ ವಿಷಯಗಳಲ್ಲಿ ಸಾಕಷ್ಟು ತೃಪ್ತಿಯು ನ್ನುಂಟು ಮಾಡಬೇಕಾಗುತ್ತದೆ. ಕೆಲವೊಮ್ಮೆ ಯಾವುದೇ ಒಂದು ಪಂಗಡ ಹೆಚ್ಚಿನ ಪ್ರತಿನಿಧಿ ಸಂಖ್ಯೆ ಪಡೆಯದೆ ಹೋಗುವುದುಂಟು.. ನಾನ್ನೂರು ಜನ ಚುನಾಯಿತರಲ್ಲಿ ನೂರೈವತ್ತು, ಐವತ್ತು, ನೂರು ನೂರು ಈ ಮಾದರಿಯಲ್ಲಿ ನಾಲ್ಕು ಪಂಗಡಗಳಾಗಿ ಬಲಹಿಗುತ್ತದೆ ಎಂದು ತಿಳಿಯಿರಿ. ನೂರೈವತ್ತು ಸಂಖ್ಯೆಯುಳ್ಳ ಪಂಗಡ, ಅತಿ ಹೆಚ್ಚಿನ ಪಂಗಡವಾಗುತ್ತದೆ. ಆ ಪಂಗಡದವರೇ ಸರಕಾರ ಮಾಡಬಹುದು. ಆದರೆ ಅವರು ಮುಂದೆ ನಿರ್ಣಯಗಳನ್ನು ಉಳಿದವರೆಲ್ಲ ಕೂಡಿ ಇನ್ನೂರೈವತ್ತು ಓಟುಗಳಿಂದ ಸೋಲಿಸಿದರೆ ಆ ಪಂಗಡ ತನ್ನ ಪದವಿಯನ್ನು ಬಿಟ್ಟು ಕೊಡಬೇಕಾಗು ತ್ತದೆ. ಮೂರು ದಿನವೂ ಬಾಳಲಾರದ ಸರಕಾರಗಳುಂಟು. ಇದು ಯಾವ ದೇಶಕ್ಕೂ ಒಳ್ಳೆಯ ಸ್ಥಿತಿಯನ್ನು ತರಲಾರದು. ಇಂಥ ಪ್ರಸಂಗಗಳಲ್ಲಿ-ಎರಡೋ, ಮೂರೋ ಪಂಗಡಗಳು ಅಧಿಕಾರ ನಡೆಯಿ ಸುವ ಮಟ್ಟಿಗೆ ಕೂಡಿದರೆ ಸಾಕೇ? ಅವರವರ ಪಂಗಡದ ಧ್ಯೇಯಗಳು ಹೊಂದಬೇಡವೇ? ಹೊಂದಿಕೊಂಡು ಹೋಗಲು ಆದರ್ಶ. ಅಭಿಪ್ರಾಯ ಭೇದಗಳು ಬರುತ್ತದೆ. ಅಂಥ ವೇಳೆಗಳಲ್ಲಿ ವಿವಾದಕ್ಕೆ ಅವಕಾಶವಿರುವ ತಮಗೆ ಸೋಲನ್ನುಂಟು ಮಾಡುವ, ಯಾವ ಧೋರಣೆಯನ್ನವರು ಅನು ಸರಿಸುವ ಹಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಯಾವ ಪಂಗಡದ ಧ್ಯೇಯ ವೂ ಪೂರ್ಣವಾಗಿ ನಡೆಯುವಂತಿಲ್ಲ.

ಆಪತ್ತಿನ ಕಾಲದಲ್ಲಿ

ದೇಶದಲ್ಲಿ ಎಷ್ಟೇ ಪಂಗಡಗಳಿದ್ದರೂ ಅವರ ಧ್ಯೇಯಗಳಲ್ಲಿ ಪರ ಸ್ಪರ ವಿರುದ್ಧವಿದ್ದರೂ, ಕೆಲವೊಂದು ಸಮಯ ದೇಶದ ಜನವೆಲ್ಲ ತಮ್ಮೆದುರಿಗೆ ಬಂದ ಆಪತ್ತನ್ನು ಎದುರಿಸಬೇಕಾಗುತ್ತದೆ. ಕಳೆದ ಮಹಾಯುದ್ಧದ ವೇಳೆ ಇಂಗ್ಲೆಂಡಿಗೆ ಈ ಪರಿಸ್ಥಿತಿ ಬಂತು. ಜರ್ಮನಿ ಯಿಂದ ಯುದ್ಧ ಪ್ರಾಪ್ತಿಸಿತು. ಯುದ್ಧದಲ್ಲಿ ಗೆಲ್ಲಬೇಕಾದ ಉದ್ದೇಶ ಆ ದೇಶಕ್ಕೆ ಮುಖ್ಯವಾಗಿತ್ತು. ಅಲ್ಲಿನ ಕನ್‌ಸರ್ವೇಟಿವ್ ಮತ್ತು ಶ್ರಮ ಗಾರ ಪಕ್ಷದ ಆರ್ಥಿಕ ಧೋರಣೆಗಳು ತೀರ ಭಿನ್ನವಾಗಿದ್ದರೂ,

ಆ ಜನಗಳಿಂದಾಗಿ ದೇಶದ ಒಟ್ಟು ಹಾನಿಯಾಗಬಾರದಲ್ಲ? ಅದಕ್ಕಾಗಿ ಅಲ್ಲಿನ ಜನ, ಅಂದರೆ ಬಲಶಾಲಿಯಾದ ಪಂಗಡದವರು ಬಲಹೀನರಾದವರು ಒಟ್ಟಿಗೆ ಕೂಡಿಕೊಂಡು ಸರಕಾರ ರಚನೆ ಮಾಡಬೇಕಾಯಿತು. ಯುದ್ಧಗೆಲುವುದೊಂದೇ ಅವರ ಮುಖ್ಯಕೆಲಸ. ಭಿನ್ನಾಭಿಪ್ರಾಯ ಬರುವ ಇತರ ಆರ್ಥಿಕ ಧೋರಣೆಗಳನ್ನು ಅವರು ಮರೆತುಬಿಟ್ಟು, ಯುದ್ಧದಲ್ಲಿ ಜಯವನ್ನು ಗಳಿಸಿದರು, ಜಯಗಳಿಸಿದ ಮೇಲೆ, ದೇಶಕ್ಕೆ ಹೊರಗಿನಿಂದ ಬರುವ ಹಾನಿ ತಪ್ಪಿದ ಮೇಲೆ ಆ ಪಂಗಡಗಳು ತಿರುಗಿ ಒಡೆದುವು. ಮೊದಲಿನಂತೆ ಪಂಗಡಗಳು ತಮ್ಮ ಸ್ವಶಕ್ತಿಯ ಮೇಲೆ ಚುನಾವಣೆ ನಡೆಯಿಸಿದುವು. ಬಹುಕಾಲ ಬಹುಮತಗಳಿಸಿಕೊಂಡಿದ್ದ ಕನ್ಸರ್ವೇಟಿವ್ ಪಕ್ಷ ಸೋತುಹೋಯಿತು. ಲೇಬರ್ ಪಂಗಡದವರು ಹೆಚ್ಚಿನ ಪ್ರಾತಿನಿಧ್ಯಗಳಿಸಿ ಸರಕಾರ ನಡೆಯಿಸುವ ಹಕ್ಕನ್ನು ಪಡೆದರು.

ಆದರೂ ವಿದೇಶಗಳೊಡನೆ ನಡೆಯಿಸುವ ಸಂಬಂಧಗಳಲ್ಲಿ ಬಹುಮತಗಳಿಸಿದ ಲೇಬರ್ ಪಂಗಡ ಸಹ ಉದ್ಧಟವಾಗಿ ವರ್ತಿಸುವಂತಿಲ್ಲ. ಹಾಗೆ ಮಾಡಿದಲ್ಲಿ ಅವರ ವಿರೋಧಿಗಳು ಕಟುವಾದ ಟೀಕೆಗೆ ಗುರಿಯಾಗಬೇಕಾಗುತ್ತದೆ ಇನ್ನೊಂದು ಚುನಾವಣೆಯಲ್ಲಿ ಜನಮತ ತಮಗೇನೇ ಬರುತ್ತದೆ; ತಾವೇ ಅಧಿಕ ಸಂಖ್ಯೆಯಿಂದ ಬಂದೇವು ಎಂಬ ಧೈರ್ಯ ಇರುವುದಿಲ್ಲ. ಆದುದರಿಂದ ಪ್ರಜಾಪ್ರಭುತ್ವದಲ್ಲಿ, ತೀರ ಬಲಶಾಲಿಯಾದ ಪಂಗಡ ಸಹ ತನ್ನ ವಿರೋಧಿಗಳನ್ನು ಅನಾವಶ್ಯಕವಾಗಿ ಕೆರಳಿಸದೆ ಸೌಜನ್ಯದಿಂದ ವರ್ತಿಸಬೇಕಾಗುತ್ತದೆ ಯಾವತ್ತು ಪ್ರಜೆಗಳಿಗೆ ತೃಪ್ತಿಬರುವಂತೆ, ವಿರೋಧಿಗಳಿಗೆ ಆದಷ್ಟು ಕಡಿಮೆ ಕೋಪಬರುವಂತೆ, ತಮ್ಮ ನೀತಿಗಳನ್ನು ಇರಿಸಿಕೊಳ್ಳಬೇಕಾಗುತ್ತದೆ.

ವಿರೋಧ ವಿಮರ್ಶೆಯಿಲ್ಲದೆ ಪ್ರಜಾಪ್ರಭುತ್ವವಿಲ್ಲ, ಮುಖ್ಯಲಕ್ಷಣ

ಈ ಬಗೆಯ ವಿರೋಧ, ವಿಮರ್ಶೆ, ಪ್ರಜಾಪ್ರಭುತ್ವ. ಅದೇನೆ ನಿರಂಕುಶ ರೀತಿಯನ್ನೂ ತಡೆಯುವ ಒಂದೇ ಒಂದು ದಾರಿ. ಎನಿಸುವ

ಕಮ್ಯುನಿಸ್ಟ್ ಸರಕಾರದಲ್ಲಿ ನಾವು ಕಾಣಿಸುವುದಿಲ್ಲ. ಅಲ್ಲಿನ ಒಂದೇ ಒಂದು ರಾಜಕೀಯ ಪಂಗಡ—ಹೇಗೆ ಮಾಡಿದರೂ ನಡೆಯುತ್ತದೆ. ಆಗ ಅವರು ಪ್ರತಿಯೊಂದನ್ನೂ ಜನಹಿತದ ಸಲುವಾಗಿಯೇ ಮಾಡುತ್ತಾರೆ ಎಂಬ ವಿಶ್ವಾಸವೆಲ್ಲಿ?

ಮನುಷ್ಯ ಎಷ್ಟೆಂದೂ ಸ್ವಾರ್ಥಜೀವಿ. ತನ್ನ ಲಾಭಕ್ಕಾಗಿ ದುಡಿಯುವುದು ತನ್ನ ಅಧಿಕಾರಕ್ಕಾಗಿ ಪ್ರಯತ್ನಿಸುವುದು ತನ್ನ ಆದರ್ಶಗಳು ಮಾತ್ರ ಸತ್ಯವೆಂದು ತಿಳಿದು, ಅದೇ ಸರಿಯೆಂದು ವಾದಿಸುವುದು. ಆಶಯಗಳಿಗೆ ವಿರುದ್ಧವಾದುದನ್ನೆಲ್ಲ ಖಂಡಿಸುವುದು, ದಂಡಿಸುವುದು—ಅವರ ಸ್ವಭಾವಗಳಲ್ಲೊಂದು. ಯಾವ ದೇಶದ ಜನರೂ, ಯಾವ ಕಾಲದ ಜನರೂ ಈ ಬಗೆಯ ಸ್ವಾರ್ಥದಿಂದ ದೂರವಾಗಿಡಬಲ್ಲರು ಎಂದು ನಾವು ತಿಳಿಯಬೇಕಾಗಿಲ್ಲ. ನಾಳೆ ಜನ ತಮ್ಮನ್ನು ಪದವಿಯಿಂದ ಉರುಳಿಸಿಯಾರು—ಎಂಬ ಹೆದರಿಕೆ ಇದ್ದರೇನೇ ಅವರು ತಮ್ಮ ಸ್ವಾರ್ಥವನ್ನು ತಳೆದು ಹಿಡಿದಾರು. ಎಚ್ಚರದಿಂದ ವರ್ತಿಸಿಯಾರು. ಎಲ್ಲಿ ಪ್ರಜೆಗೆ ತನಗೇ ಕಂಡದ್ದನ್ನು ಪ್ರಾಮಾಣಿಕವಾಗಿ ಬರೆಯುವ, ಹೇಳುವ ಸ್ವಾತಂತ್ರ್ಯವಿಲ್ಲವೋ ಅಲ್ಲಿ ಪ್ರಜೆಯ ಅಧಿಕಾರ ಹಕ್ಕುಗಳು ಭದ್ರವಾಗಿ ಉಳಿದುವು ಎಂಬ ಭರವಸೆ ಇಲ್ಲ. ಮತದಾರರಾದವರು ಚುನಾವಣೆಯ ಕಾಲದಲ್ಲಿ ಈ ಮುಖ್ಯ ವಿಷಯವನ್ನು ಗಮನಿಸದೆ ಹೋದರೆ, ಯಾವ ಪಂಗಡಕ್ಕೆ ಬೆಂಬಲಕೊಟ್ಟರೂ ಆ ಪಂಗಡವರು ಅಧಿಕಾರಕ್ಕೆ ಬಂದ ಮೇಲೆ, ಅವರನ್ನು ವಿರೋಧ ವಿಮರ್ಶೆಗಳ ಹುಟ್ಟನ್ನಡಗಿಸಿ, ತಾವೇ ಭದ್ರವಾಗಿ ಸರಕಾರವನ್ನು ನಡೆಯಿಸುವ ಶಕ್ತಿ ಗಳಿಸಬಹುದು. ತಮಗಿರುವ ಸೇನೆ, ಪೋಲಿಸ್ ಬಲಗಳಿಂದ ತಮಗೆ ವಿರುದ್ಧವಾದ ಜನ ಅಭಿಪ್ರಾಯ ಮೇಲಕ್ಕೆ ಬಾರದಂತೆ ಮಾಡುವುದು ಸಾಧ್ಯವಿದೆ.

ಕಠಿಣ ದಾರಿ

ಪ್ರಜಾಪ್ರಭುತ್ವವಾಗಲೀ ಅದನ್ನು ಸಾಧಿಸುವ ದಾರಿಯಾಗಲೀ ಸುಲಭವಾದ ದಾರಿಯಲ್ಲ. ಎರಡು ತೊಡರು ಮುಳ್ಳುಗಳಿಂದ ತುಂಬಿದ ದಾರಿ. ಪ್ರಜೆಗೆ ಒಂದಿಷ್ಟಾದರೂ ಸಾರ್ವಜನಿಕ ವಿಚಾರಗಳಲ್ಲಿ, ತಿಳಿದಿರ

ಬೇಕು. ಸ್ವಂತ ಯೋಚನೆ ಮಾಡುವ ಶಕ್ತಿ ಇರಬೇಕು. ತಾತ್ಕಾಲಿಕ ಆವೇಶಗಳಿಗೆ ಬಲಿಯಾಗುವ ಇಲ್ಲವೆ ತಂತಮ್ಮ ಜನರ ಹಿತವನ್ನಷ್ಟೆ ನೋಡುವ ಸ್ವಾರ್ಥ ಇರಕೂಡದು ಪ್ರಜೆಯಾಗಿದ್ದಾತ ತೊಡುವ ಹಕ್ಕನ್ನು ಗಳಿಸಿದ ಮಾತ್ರದಿಂದ ಪ್ರಜಾಪ್ರಭುತ್ವ ಬರುತ್ತದೆ ಎಂದು ತಿಳಿಯಲಾರದು. ಒಂದು ದೇಶದಲ್ಲಿ ಸ್ವಂತ ವಿಚಾರ ಮಾಡಬಲ್ಲ ಜನ ಎಷ್ಟು ಎಷ್ಟು ಹೆಚ್ಚಾಗಿ ಇರುತ್ತಾರೋ ಅಷ್ಟಷ್ಟು ಎಚ್ಚರದಿಂದ ಅವರ ಸರಕಾರ ಕೆಲಸ ನಡೆಯಿಸುತ್ತದೆ. ನಮ್ಮ ದೇಶದ ಸುಮಾರು ಹದಿನೆಂಟು ಕೋಟಿ ಮತದಾರರಲ್ಲಿ ಎಷ್ಟು ಮಂದಿ ಇಂಥವರು ಸಿಗಬಹುದು? ನಮ್ಮ ನಮ್ಮ ಊರುಗಳಲ್ಲೇ ಇರುವ ಸಾವಿರಾರು ಮತದಾರರುಗಳಲ್ಲಿ ಎಷ್ಟು ಮಂದಿ ಈ ಯೋಗ್ಯತೆ ಪಡೆದಿದ್ದಾರೆ ಎಂದು ನಾವು ವಿಚಾರಿಸಬೇಡವೇ?

ನಮ್ಮ ನಾಡಿಗೆ ರಾಜಕೀಯ ಜೀವನ ಹೊಸತು. ಪ್ರಜಾಪ್ರಭುತ್ವವೂ ಹೊಸತು, ಅದನ್ನು ನಡೆಯಿಸಿಕೊಂಡು ಹೋಗುವ ಹೊಣೆ ಎಲ್ಲರನ್ನೂ ಸೇರಿದೆ. ಜನ ಈ ಹೊಣೆ ಅರಿಯಬೇಕು. ಅರಿವಿಲ್ಲದ ಜನರನ್ನು ವಂಚಿಸುವ ಕೆಲಸ ಸುಲಭ. ಅವರಿಂದ ದೊರೆತ ಅಧಿಕಾರವನ್ನು ದುರುಪಯೋಗ ಪಡಿಸುವುದರಲ್ಲಿ, ನಿರಂಕುಶ ಅಧಿಕಾರಕ್ಕಾಗಿ ಬಳಸುವುದಾಗಲಿ ಸಾಧ್ಯವಿರುವುದರಿಂದ—ದೇಶಕ್ಕೆ ಒಳಿತು ಆಗುವುದಕ್ಕೂ ಕೆಟ್ಟದು ಆಗದಿರುವುದಕ್ಕೂ ರಾಜಕೀಯದ ತಿಳಿವು, ವಿಚಾರ ಸ್ವಾತಂತ್ರ್ಯಗಳು ನಮ್ಮಲ್ಲಿ ಬೆಳೆಯಬೇಕು.

೫ ಪ್ರಜಾಪ್ರತಿನಿಧಿಗಳು, ಕ್ಯಾಬಿನೆಟ್ ಪದ್ಧತಿ

ಪ್ರತಿನಿಧಿಯ ಯೋಗ್ಯತೆ

ಪ್ರಜೆ ತನ್ನ ಅಧಿಕಾರವನ್ನು ತಾನಾಗಿ ನಡೆಯಿಸಲಾರನೆಂಬುದಕ್ಕಾಗಿ ತನ್ನಂತಹ ಇತರ ಪ್ರಜೆಗಳೊಂದಿಗೆ ಸೇರಿಕೊಂಡು, ಯೋಗ್ಯಕಂಡ ಒಬ್ಬನನ್ನು ತಮ್ಮ ಪ್ರತಿನಿಧಿಯಾಗಿ ಆರಿಸುತ್ತಾನೆ, ಮುಂದಿನ

ಸಾರ್ವಜನಿಕ ಚುನಾವಣೆ ಆಗುವ ತನಕ ಪ್ರಜೆಗೆ ಹೆಚ್ಚಿನ ಕೆಲಸವೇನೂ ಇಲ್ಲ. ಅವನು ತನ್ನ ಆಯ್ಕೆಯಲ್ಲಿ ತಪ್ಪು ಮಾಡಿದರೆ, ಆ ಅವಧಿಯ ತನಕ–ಸಹಿಸಿಕೊಂಡಿರಬೇಕು. ಮುಂದಿನ ಚುನಾವಣೆಯಲ್ಲಿ ಬೇರೊಬ್ಬನನ್ನು ಆಯ್ದು ಕಳುಹಿಸಬಹುದು. ಅಂದರೆ ಅಲ್ಲಿಯ ತನಕ ನಾಲ್ಕಾರು ವರ್ಷಗಳು ಸಲಬಹುದು. ಆದರೇನೂ ಮಾಡುವಂತಿಲ್ಲ. ಕಳುಹಿಸಿದ ಪ್ರತಿನಿಧಿಯನ್ನು ಮರಳಿಸುವಂತಿಲ್ಲ. ಈ ಪ್ರತಿನಿಧಿಗಳು ಯಾರಾಗಬಹುದೆಂದು ಅವರ ಪಟ್ಟಿ ತಯಾರಿಸುವುದರಲ್ಲೂ ಪ್ರಜೆಗೆ ಸ್ವಾತಂತ್ರ್ಯವಿಲ್ಲ. ಚುನಾವಣೆಗೆ ನಿಲ್ಲುವ ಪ್ರತಿನಿಧಿಗಳು ತಾವೇ ಸ್ವತಂತ್ರರಾಗಿ ನಿಲ್ಲಬಹುದು. ಅಥವಾ ಯಾವುದಾದರೊಂದು ರಾಜಕೀಯ ಪಂಗಡಕ್ಕೆ ಸೇರಿ ಅದರಿಂದ ನೇಮಕ ಹೊಂದಬಹುದು. ಹೀಗೆ ಹೆಸರು ಬಂದ ಉಮೇದುವಾರರಲ್ಲಿ ತನಗೆ ಯೋಗ್ಯ ಕಂಡವನನ್ನು ಆರಿಸುವುದಷ್ಟೆ ಪ್ರಜೆಯ ಕೆಲಸ. ಸರಕಾರದ ಧೋರಣೆಗೆ ಸಂಬಂಧಿಸಿದಂತೆ ನೂರಾರು ಶಾಸನಗಳನ್ನು ಮಾಡುವುದರಲ್ಲಿ ಭಾಗಿಯಾಗಬೇಕಾದ ಆ ಪ್ರತಿನಿಧಿಗೆ ಎಷ್ಟೆಲ್ಲ ಯೋಗ್ಯತೆಗಳಿರಬೇಡ? ಹಾಗೆ ಯೋಗ್ಯತೆ ಇದ್ದವನೇ ನಿಲ್ಲುತ್ತಾನೆಂಬ ನಿಶ್ಚಯವೇನು? ಪ್ರತಿನಿಧಿಯಾಗ ತಕ್ಕವನು–ಇಂತಿಷ್ಟು ವಯಸ್ಸು ಮೀರಿದವನಾದರಾಯಿತು ಅಥವಾ ಇಂತಿಷ್ಟು ತೆರಿಗೆ ಕೊಡುವವನಾದರಾಯಿತು ಎಂಬುದು ಮಾತ್ರ ರೂಢಿ, ನಿಯಮಗಳಲ್ಲಿ ಕಾಣಿಸುತ್ತದೆ. ಅವನ ಅನುಭವ ಏನು? ಸಾರ್ವಜನಿಕ ಜೀವನದಲ್ಲಿ ಆತ ಹಿಂದೆ ಏನು ಕೆಲಸ ಮಾಡಿದ್ದಾನೆ? ಎಂಬ ಯಾವ ಬಗೆಯ ಅಂಕೆ ಅಂಕುಶವೂ ಇಲ್ಲ. ಹಾಗೆ ಅಂಕೆ ಅಂಕುಶ ಹಾಕುವುದಕ್ಕೆ ವ್ಯವಹಾರದಲ್ಲಿ ಕಷ್ಟವಾಗುತ್ತದೆ ಎಂಬ ಒಂದು ಕಾರಣದಿಂದ, ಎಂಥವನೂ ಆ ಕೆಲಸಕ್ಕೆ ತಕ್ಕವನು ಎಂದು ಊಹಿಸುವುದು ತಪ್ಪು. ನಿಂತವನ ಯೋಗ್ಯತೆ ತಿಳಿದು ಆರಿಸುವ ಯಾವತ್ತು ಭಾರವನ್ನು ಮತದಾರನೇ ಮಾಡಬೇಕು— ಎಂದು ತರ್ಕಿಸುವುದು ಸಮನಲ್ಲ. ಆ ಶಕ್ತಿ ಅವನಿಗಿದೆಯೇ? ಅನೇಕರು ಕೇವಲ ಸ್ವಾರ್ಥಿಗಳಿದ್ದು ಅಧಿಕಾರಕ್ಕಾಗಿಯೂ, ಲಾಭಕ್ಕಾಗಿಯೂ ಬಾಯಿಬಿಡುವ ಜನಗಳಿರುತ್ತಾರೆ. ನಾಳೆ ಪದವಿಗೆ ಬಂದಾಗ ಇವರು ಅದರ ಲಾಭ ಪಡೆದು ತಮ್ಮ ಪ್ರತಿಷ್ಠೆ, ಬೊಕ್ಕಸ ಹೆಚ್ಚಿಸಿ

ಕೊಂಡಾರು. ರಾಜಕೀಯ ಪಂಗಡಗಳು ಪ್ರತಿನಿಧಿಗಳನ್ನು ನೇಮಿಸು ವಾಗ ಅವರ ಯೋಗ್ಯತೆಯನ್ನೆಲ್ಲ ತೂಕಮಾಡಿ ನೇಮಿಸುತ್ತಾರೆ ಎಂ ಬುದು ಬರಿಯ ಊಹೆ. ಈ ಊಹೆಗೆ ಕಾರಣಗಳು ಸಾಲದು. ಸಾಮಾನ್ಯವಾಗಿ ನಮ್ಮ ದೇಶದ ಬೋರ್ಡುಗಳಲ್ಲಿ, ಪ್ರಜಾ ಪ್ರತಿನಿಧಿ ಸಭೆಗಳಲ್ಲಿ—ಆರಿಸಿ ಬರುತ್ತಿರುವ ಜನಗಳನ್ನು ನೋಡಿದರೆ, ಇದು ತೀರ ವ್ಯಕ್ತವಾಗುತ್ತದೆ. ಎಷ್ಟು ದೊಡ್ಡ ರಾಜಕೀಯ ಪಂಗಡವೇ ಇರಲಿ, ಅದರ ಆದರ್ಶ ಎಷ್ಟೇ ಉಚ್ಚ ತರದ್ದಿ ರಲಿ, ಅವರ ಬಳಗಕ್ಕೆ ಹೊಕ್ಕು-ದುಡ್ಡಿನ ಬಲದಿಂದಲೋ, ಸ್ನೇಹದ ಬಲದಿಂದಲೋ, ಇನ್ನಾವುದಾದರೂ ಅಡ್ಡ ದಾರಿಯಿಂದಲೋ, ಪ್ರತಿನಿಧಿ ಯಾಗಿ ನೇಮಕಗೊಳ್ಳಲು ಕಷ್ಟದ ಕೆಲಸವಲ್ಲ. ಪ್ರಜೆಗಳಿಗೆ ಉಮೇದು ದಾರರ ನಿಕಟ ಪರಿಚಯವಿರುವುದು ಕಡಿಮೆ. ಅವರು ಪಂಗಡದ ಹೆಸರು ಕೇಳಿಯೇ ಕೊಡುವುದು ಹೆಚ್ಚು. ಈಗ ಇಂಥ ಚುನಾವಣೆ ಕಣ್ಣು ಮುಚ್ಚಿ ಆಡುವ ಜುಗಾರಿಯಂತಾಗದೇ?

ಪ್ರಜೆಗೂ, ಪ್ರತಿನಿಧಿಗೂ ಇರುವ ಸಂಬಂಧವೇನು?

ಹಿಂದೆ ಹೇಳಿದಂತೆ ಕೇವಲ ಚುನಾವಣೆಯ ಕಾಲದಲ್ಲಿ ಮಾತ್ರ ಇದು ವ್ಯಕ್ತವಾಗುತ್ತದೆ. ಒಂದೂರಿನ ಪ್ರಜೆಗಳಿಂದ ಆರಿಸಿ ಬಂದವ, ತಿರುಗಿ ಇನ್ನೊಂದು ಚುನಾವಣೆಯ ತನಕ ಅವರ ಬಳಿಗೇ ಸುಳಿಯು ವುದಿಲ್ಲ. ಅವರ ಪ್ರಾಂತ್ಯಕ್ಕೆ ಬೇಕಾದ ಆವಶ್ಯಕತೆಗಳೇನು—ಎಂದು ತಿಳಿದು, ಪ್ರಯತ್ನಿಸುವುದೂ ಕಾಣುವುದಿಲ್ಲ. ಅಥವಾ ಜನರ ಜೀವನಕ್ಕೆ ಸಂಬಂಧಿಸುವ ಶಾಸನಗಳು ಆಗಬೇಕಾಗಿ ಬಂದಾಗ, ಅವರನ್ನು ಕೂಡಿ, ಆತ ತರ್ಕಿಸುವುದೂ ಇಲ್ಲ. ಅವರ ಇಷ್ಟಕ್ಕೆ ವಿರೋಧವಾಗಿ ಅಥವಾ ಕಲ್ಯಾ ಣಕ್ಕೆ ವಿರೋಧವಾಗಿ ಆತ ವರ್ತಿಸಿದಲ್ಲಿ, ಪ್ರಜೆಗಳು ಅವನನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ಅಧಿಕಾರವೂ ಇರುವುದಿಲ್ಲ. ಹೀಗಿರುತ್ತ ಚುನಾವಣೆ ಮಾಡಿದ ಮಾತ್ರದಿಂದ, ಆತ ಪ್ರಜೆಯ ಮನಸ್ಸನ್ನು ತಿಳಿದು ಮುಂದೆ ಶಾಸನ ಮಾಡುತ್ತಾನೆ; ವರ್ತಿಸುತ್ತಾನೆ ಎಂಬ ಮಾತು ಬಹುಮಟ್ಟಿಗೆ ಹುರುಳಿಲ್ಲದ ಮಾತು. ಆ ಬಗೆಯ ಸ್ನೇಹಸಂಬಂಧ ಪ್ರಜೆಗೂ ಚುನಾ ಯಿತನಿಗೂ ಬರುವ ತನಕ ಈ ಪ್ರಾತಿನಿಧ್ಯ ಪ್ರಾತಿನಿಧ್ಯವೆನಿಸುವುದು.

ಪ್ರಜಾಮಂಡಲ

ಜನರಿಂದ ಪ್ರತಿನಿಧಿಗಳನ್ನು ಆರಿಸುವಾಗ—ಪ್ರಾಂತ, ಜನಸಂಖ್ಯೆ, ಗುಂಪುಗಳ ದೃಷ್ಟಿಯಿಂದ ಇಂತಿಷ್ಟೇ ಜನ ಆ ದೇಶದ ಶಾಸನಸಭೆಗಳಲ್ಲಿ ಪ್ರಜಾಮಂಡಲಗಳಲ್ಲಿ ಇರಬೇಕೆಂದು ನಿರ್ಣಯಿಸುತ್ತಾರೆ ಸುಮಾರು ೪-೫ ಲಕ್ಷ ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಇರಬಹುದೆಂದು ತಿಳಿಯುವ. ಅದರಂತೆ ಒಂದು ಪ್ರಾಂತದ ಒಟ್ಟು ಜನಸಂಖ್ಯೆ ಮೂರು ಕೋಟಿಯಾಗುವುದಾದರೆ-೬೦ ಮಂದಿ ಪ್ರತಿನಿಧಿಗಳು— ಕೂಡಿರುವ ಮಂಡಲವಾಗುತ್ತದೆ. ಇನ್ನೂ ಕೂಲಿಕಾರರ, ಉದ್ಯೋಗಗಳ, ವಿಶ್ವವಿದ್ಯಾಲಯಗಳ, ಹಿಂದುಳಿದವರ—ಎಂದು ವಿಶೇಷ ಪಂಗಡಗಳಿಗೆ ೧೦-೧೫ ಪ್ರಾತಿನಿಧ್ಯ ಇರಬಹುದು. ಒಟ್ಟಿನಲ್ಲಿ ೬೦-೮೦ ಪ್ರತಿನಿಧಿಗಳು ಸೇರಿ ಪ್ರಜಾಮಂಡಲವಾಗುತ್ತದೆ. ಇವರೆಲ್ಲರೂ ಕೂಡಿ ಸರಕಾರ ನಡೆಯಿಸಲಾರರಷ್ಟೆ. ಕಾರಣ -ಅವರಲ್ಲಿ ನಾಲ್ಕಾರು ಪಂಗಡಗಳು ಆದರ್ಶಗಳು ಇರುತ್ತವೆ. ಆದುದರಿಂದ ಅತ್ಯಧಿಕ ಪ್ರಮಾಣದಿಂದ ಪ್ರಾತಿನಿಧ್ಯ ಗಳಿಸಿದ-ಪಂಗಡ ಮಾತ್ರ ಸರಕಾರ ಅರ್ಹತೆ ಪಡೆಯುತ್ತದೆ. ಅಂಥ ಒಂದೇ ಪಂಗಡ ಇಲ್ಲದಾಗ, ಎರಡು ಮೂರು ಪಂಗಡ ಸೇರಿದ ಸಂಯುಕ್ತ ಪಂಗಡ ಆ ಕೆಲಸಮಾಡಬೇಕು. ಅಂತು ಮಂಡಲದ ಮುಖ್ಯ ಪಂಗಡದಲ್ಲೂ—ಕೆಲವರೇ ಸೇರಿ ಈ ಹೊಣೆ ಹೊಳುತ್ತಾರೆ. ಈ ಗುಂಪೇ "ಕೆಬಿನೆಟ್" ಅಥವಾ ಮಂತ್ರಿ ಮಂಡಲ ಅನಿಸುತ್ತದೆ.

ಕೆಬಿನೆಟ್

ಚುನಾವಣೆಯಾದ ಬಳಿಕ ಯಾವ ಪಂಗಡಕ್ಕೆ ಬಹುಮತ ದೊರೆಯುತ್ತದೋ ಆ ಪಂಗಡದ ಜನಸೇರಿ, ಸರಕಾರ ಸಂಚಾಲನೆಗೆ ಬೇಕಾದ ಕೆಬಿನೆಟ್ ರಚಿಸುತ್ತಾರೆ. ಕೆಬಿನೆಟ್ ಎಂಬುದೇ ಮಂತ್ರಿ ಮಂಡಲ. ಗವರ್ನರನೋ ಒಂದು ಪ್ರಾಂತದ ಅಧ್ಯಕ್ಷನೋ, ಗೆದ್ದು ಬಂದ ರಾಜಕೀಯ ಪಂಗಡದ ಮುಖಂಡನನ್ನು ಕರೆದು "ನೀನು ಮಂತ್ರಿ ಮಂಡಲ ರಚಿಸು" ಅನ್ನುತ್ತಾರೆ. ಆತ ತನ್ನ ಪಂಗಡದಿಂದ ತನಗೆ ತೋರಿದಂತೆ ಸದುರ್ಥರಾದವರನ್ನು ಇಲ್ಲವೆ ತನಗೆ ಬೇಕಾದವರನ್ನು ಮಂತ್ರಿಗಳನ್ನಾಗಿ

ಆರಿಸಿಕೊಂಡು ತಾನು ಪ್ರತಿನಿಧಿಯಾಗಿದ್ದು, ಆ ದಿನದಿಂದ ಸರಕಾರ ಸಂಚಾಲಕತ್ವವನ್ನು ವಹಿಸಿಕೊಳ್ಳುತ್ತಾನೆ. ಸರಕಾರದಲ್ಲಿ ಎಷ್ಟೆಲ್ಲ ಇಲಾಖೆಗಳಿಲ್ಲ. ವಿದ್ಯೆಗೆ ಸಂಬಂಧಪಟ್ಟಂತೆ, ಎಂಜಿನಿಯರಿಂಗ ಸಂಬಂಧಪಟ್ಟಂತೆ, ಉದ್ಯೋಗಗಳಿಗೆ ಸಂಬಂಧಪಟ್ಟಂತೆ, ಕಂದಾಯ, ಕಾಯಿದೆ, ಪೋಷಣೆ ರಕ್ಷಣೆ, ಇವೆಲ್ಲಕ್ಕೂ ಸಂಬಂಧಿಸಿದಂತೆ ಕೆಲಸಗಳಾಗಬೇಕು. ಅವುಗಳಲ್ಲಿ ನುರಿತ ಅನುಭವ ಉಳ್ಳ ವಿಚಕ್ಷಣರಾದ ಸೇವಕರಿರುತ್ತಾರೆ. ಅವರನ್ನು ಹೀಗಲ್ಲ-ಹೀಗೆ ಮಾಡಿ ಎಂದು ಹೇಳುವ ಅಧಿಕಾರ ಈ ಮಂತ್ರಿಗಳಿಗಿದೆ. ಅಂಥ ಪ್ರಧಾನಿಗಳಿಗೆ, ಮಂತ್ರಿಗಳಿಗೆ ಎಷ್ಟು ಯೋಗ್ಯತೆ ಇರಬೇಡ! ಅನುಭವ ಇರಬೇಡ! ಆದರೂ ಘಟನಾತ್ಮಕವಾದ ಯಾವ ದೇಶದ ರಾಜಕೀಯದಲ್ಲೂ, ಮಂತ್ರಿಗಳಾಗತಕ್ಕವರಿಗೆ 'ಇಂಥ ಯೋಗ್ಯತೆ ಇರಬೇಕು' ಎಂಬ ವಿಚಾರದಲ್ಲಿ ಯಾವ ಕಟ್ಟನ್ನೂ ನಿಯಮಿಸಿಲ್ಲ. ಹಾಗಾಗಿ ಬರಿಯ ಅಧಿಕಾರ ಲಾಲಸೆ, ಕುಯುಕ್ತಿ ವರ್ಚಸ್ಸುಗಳ ಸಾಮಾನ್ಯ ವ್ಯಕ್ತಿ ಸಹ ಆ ಪದವಿಗೇರುತ್ತಿರುವುದನ್ನು ಕಾಣುತ್ತಿದ್ದೇವೆ. ಹಾಗೆ ಏರಿದರೆ ಸರಕಾರದ ಪಾಡೇನಾದೀತು? ಎಂಬುದನ್ನು ಊಹಿಸಬಹುದು.

ಪಂಗಡ ಸರಕಾರದಲ್ಲಿನ ಕೊರತೆ

ಒಂದು ಪಂಗಡದೊಳಗೇನೆ ಒಂದು ಸರಕಾರವನ್ನು ನಡೆಯಿಸಬೇಕಾದ ಯೋಗ್ಯತೆಯುಳ್ಳ ವಿವಿಧ ಇಲಾಖೆಗಳಿಗೆ ಮಂತ್ರಿಗಳಾಗಬೇಕಾದ ತಜ್ಞರು ಇರುತ್ತಾರೆಯೇ? ತಮ್ಮ ಪಂಗಡ ಪ್ರಬಲವಾಗಿ ಚುನಾಯಿತವಾದಲ್ಲಿ ಯೋಗ್ಯತೆ ಇರಲಿ, ಇಲ್ಲದೆ ಇರಲಿ, ಯಾವತ್ತು ಮಂತ್ರಿಗಳನ್ನು ತಮ್ಮ ಪಂಗಡದಿಂದಲೇ ಆರಿಸಿಕೊಳ್ಳುವುದು ಪ್ರಜಾಪ್ರಭುತ್ವದಲ್ಲಿ ಕಾಣುವ ಪದ್ಧತಿಯಾಗಿದೆ. ಆಯಾಯ ಕೆಲಸಕ್ಕೆ ಯೋಗ್ಯರು ತಮ್ಮ ಪಂಗಡದಲ್ಲಿ ಇಲ್ಲದೆ, ಅಲ್ಪಸಂಖ್ಯಾತರಾಗಿ ಕಾಣಿಸುವ ಇದಿರಾಳಿ ಪಂಗಡಗಳಲ್ಲಿ ಅಂಥವರಿದ್ದರೂ. ಅವರಿಗೆ ಆ ಪದವಿಯನ್ನು ಯಾರೂ ಸೃಷ್ಟಿಸುವುದಿಲ್ಲ. ಹೀಗಾಗಿ ಪಂಗಡಗಳ-ಸಂಖ್ಯಾಬಲದಿಂದ ಪ್ರಜಾಪ್ರಭುತ್ವ ನಡೆಯಬೇಕಾಗುತ್ತದೆ. ಪ್ರಬಲವಾದ ಪಂಗಡದಲ್ಲಿ ಮಂತ್ರಿತ್ವ ನಡೆಯಿಸಲು ಯೋಗ್ಯರಿದ್ದಾರೆ. ಜನರ ಪುಣ್ಯ

ಇಲ್ಲವಾದರೆ ಅವರ ದುರ್ದೈವದ ಅನ್ನಬೇಕು. ಎಲ್ಲಿಯ ತನಕ ಪ್ರಜಾ ಪ್ರಭುತ್ವದ ಘಟನೆಯಲ್ಲಿ-ಪ್ರತಿನಿಧಿಗೆ, ಅದರಂತೆಯೇ-ಮಂತ್ರಿಯಾಗ ತಕ್ಕವನಿಗೆ 'ಇಂಥದೇ ಯೋಗ್ಯತೆ' ಬೇಕು ಎಂಬ ಸ್ಪಷ್ಟ ನಿಯಮ ವಿಲ್ಲವೋ, ಅಲ್ಲಿಯ ತನಕ ಈ ಕೊರತೆ ನಿವಾರಣೆಯಾಗಲಾರದು ಶಾಸನಕ್ಕೆ ಬೇಕಾದ ತಿಳುವಳಿಕೆ, ಶಾಸನಗಳು ಸ್ಪಷ್ಟವಾಗುವಂತೆ ಬರೆ ಯುವ ಯೋಗ್ಯತೆ, ದೇಶದ ಆರ್ಥಿಕ ಪರಿಜ್ಞಾನ, ಇಂಥ ವಿಶಿಷ್ಟ ಜ್ಞಾನ ವಿಲ್ಲದ ಪ್ರತಿನಿಧಿಗಳಿಂದ ಬೀರಿದ ಒಂದು ಪಂಗಡ ಎಷ್ಟೇ ಉಚ್ಚ ಆದರ್ಶ ದಿಂದ ಕೂಡಿದ್ದಾದರೂ, ತನ್ನ ಹೊಣೆಯನ್ನು ನಿರ್ವಹಿಸಲಾರದು. ಯಾವುದೇ ಒಂದು ಶಾಸನದ ಬರವಣಿಗೆ ಶಿಥಿಲವೂ, ಅಸ್ಪಷ್ಟವೂ ಆಗಿದ್ದಲ್ಲಿ, ಅದರಿಂದ ಬಾಧಿತರಾಗುವ ಜನ, ನಷ್ಟಗೊಂಡು ವರ್ಷವರ್ಷ ಗಳ ತನಕ ಕೋರ್ಟು ಕಚೇರಿಗಳಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳ ಬೇಕಾಗುತ್ತದೆ. ಆವರು ಶಾಸನಗಳನ್ನು ಯೋಗ್ಯ ಕಟ್ಟುನಾಡಿನ ಮೂಲಕ ಇರಿಸುವ ಹೊಣೆಯನ್ನು ಹೊರಬೇಕಾಗುತ್ತದೆ.

ಸಾಮಾನ್ಯ ಮಂತ್ರಿಗಳು, ವಿಚಕ್ಷಣ ಸೇವಕರು:—

ಎಂತಹ ನಿಪುಣರಾದವರಿಂದ ಮಂತ್ರಿಮಂಡಲ ರಚನೆಯಾದರೂ ಸಹ, ಅವರ ಕೆಲಸಗಳು ನಡೆಯಬೇಕಾದದ್ದು ಸರಕಾರದ ಸೇವಕರ ಮುಖಾಂತರ. ಅವರಿಗೆ ತಮ್ಮ ಕೆಲಸಕ್ಕೆ ಅನ್ವಯಿಸಿದ ವಿಷಯಗಳ ಹಿಂದು ಮುಂದುಗಳೆಲ್ಲ ಗೊತ್ತು. ಹೊಸತಾಗಿ ಮಂತ್ರಿಮಂಡಲ ಮಾಡಿದ ಜನಕ್ಕೆ ಆ ಹಿಂದಿನ ಯಾನತ್ತು ಕೆಲಸಗಳ ಪರಿಚಯವಿಲ್ಲದೆ ಹೋಗಿ, ಅವರಾಗಿಯೇ ಮುಂದಿನ ಧೋರಣೆಯನ್ನು ರೂಪಿಸಲಾರರು. ಯಾವು ದೊಂದು ವಿಷಯಕ್ಕೆ ಸಂಬಂಧಪಟ್ಟಂತಿದ್ದರೂ, ಅದರ ಹಣಕಾಸಿನ ವಿಚಾರ, ಪೂರ್ವ ಇತಿಹಾಸಗಳಲ್ಲಿ ತಿಳಿಯದೆ, ಮುಂದುವರಿಯುವಂತಿಲ್ಲ. ಆದನ್ನು ತಿಳಿಸುವ ಕೆಲಸ ಪ್ರಮುಖ ಇಲಾಖೆಗಳ ಸೇವಕರದ್ದು. ಅವರ ಅಭಿಪ್ರಾಯ ಅನುಭವಗಳನ್ನು ಈ ಮಂತ್ರಿಗಳು ಮೂದಲಿಸುವಂತಿಲ್ಲ. ಅಧಿಕಾರ ದರ್ಪದಿಂದ ಈ ಜನಗಳನ್ನು ಅಲಕ್ಷಿಸುವುದು ಮಂತ್ರಿಗಳಿಗೆ ಸಾಧ್ಯವಾದರೂ, ಸೇವಕರ ವಿಶ್ವಾಸವನ್ನು ಗಳಿಸದೆ ಅವರು ಮುಂದು

ವರೆಯುವ ಹಾಗಿಲ್ಲ. ಮಂತ್ರಿಗಳು ತಾಳ್ಮೆಯುಳ್ಳವರಾಗಿದ್ದು ಹಿಂದಿನ
ಅನುಭವವನ್ನು ನೌಕರರಿಂದ ತಿಳಿದುಕೊಳ್ಳಬಲ್ಲ ಶಕ್ತರಾಗಿರಬೇಕು. ಆ
ಯೋಗ್ಯತೆ ಇಲ್ಲದೇ ಹೋದಲ್ಲಿ, ಅಥವಾ ತಮಗೆ ಯಾರು ಏನು ಹೇಳ
ಬಲ್ಲರು. ಎಂದು ಅಹಂಭಾವ ಪೀಡಿತರಾದಲ್ಲಿ ಸೇವಕರನ್ನು ಕಡೆಗಣಿ
ಸುವುದು ಸಾಧ್ಯ. ಆಗ ಸೇವಕರು ಉದಾಸೀನ ತಾಳಬಹುದು ಎಷ್ಟೋ
ರಹಸ್ಯಗಳನ್ನು ಮಂತ್ರಿಗಳಿಗೆ ಹೇಳದೆ ಹೋಗಬಹುದು. ಹೇಳಿದರೂ
ಕೇಳುವ ಯೋಗ್ಯತೆ ಮಂತ್ರಿ ಜನಕ್ಕಿಲ್ಲದೆ ಹೋದರೆ, ಅವರ ವಿಷಯ
ದಲ್ಲಿ ಸೇವಕರಾದವರಿಗೆ ಗೌರವ ಹುಟ್ಟದೆ ಹೋಗುವುದು. ಈ ಎಲ್ಲ
ಕಾರಣಗಳಿಂದ ಮಂತ್ರಿಗಳು ತಮಗಿರುವ ಅಲ್ಪಾವಧಿಯಲ್ಲಿ, ಸಂಬಂಧಿ
ಸುವ ವಿಷಯಗಳನ್ನು ಅಭ್ಯಾಸಿಸುವ ತಾಳ್ಮೆಯುಳ್ಳವರಾಗಿರಬೇಕಾಗು
ತ್ತದೆ; ಪ್ರಾಜ್ಞರೂ ಆಗಿರಬೇಕು. ಈ ಎರಡೂ ಗುಣಗಳಿಲ್ಲದೆ ಹೋದರೆ–
ಅವರ ಕೆಳಗೆ ಸರಕಾರದ ಯಂತ್ರ ಚೆನ್ನಾಗಿ ನಡೆಯಲಾರದು.

ಯಂತ್ರಕ್ಕೂ ಸ್ವಾರ್ಥವಿದೆ

ಎಷ್ಟೋ ಸಂಗತಿಗಳಲ್ಲಿ ಸರಕಾರದ ಯಂತ್ರಕ್ಕೆ ಸಂಬಂಧಿಸಿದ ವಿಷ
ಯಗಳೇ ಹೊರತು. ಸರಕಾರದ ನೌಕರರ ವೇತನ ವಿಚಾರ, ಬಡತಿಯ
ವಿಚಾರ, ಸರಕಾರದ ಇಲಾಖೆಗಳಲ್ಲಿ ಸಿಬ್ಬಂದಿ ಕಡಿಮೆ ಮಾಡುವ
ವಿಚಾರ ಇಂಥದೆಲ್ಲ ಬಂದಾಗ, ಆಯಾ ವಿಭಾಗಗಳ ಸೇವಕರ ಸ್ವಾರ್ಥ
ಅಡ್ಡ ಬರಬಹುದು. ಅದಕ್ಕೆ ಸಂಬಂಧಿಸಿದ ಸತ್ಯಾಂಶಗಳನ್ನು ಅವರು
ಮರೆಮಾಚಬಹುದು. ಅದನ್ನು ಹುಡುಕಿ ತಿಳಿಯುವ ಜಾಣ್ಮೆ ಮೇಲಿನ
ಮಂತ್ರಿಗಳಿಗಿರಬೇಕಾಗುತ್ತದೆ. ತಮಗೆ ತಿಳಿವು ಸಾಲದ್ದಕ್ಕೆ, ಅವರು
ಸೇವಕರನ್ನು ತೀರ ಹೆಚ್ಚು ನಂಬಿದರೂ ಕಷ್ಟಕ್ಕೆ ಬರುತ್ತದೆ. ಸರಕಾರದ
ವರಮಾನದಲ್ಲಿ ಈ ಯಂತ್ರ ಪೋಷಣೆಗೇನೆ ಹೆಚ್ಚು ಹೆಚ್ಚು ವ್ಯಯವಾಗಿ
ಸಾರ್ವಜನಿಕ ಹಿತಕ್ಕೆ ಉಳಿಯುವ ಹಣ ಕಡಿಮೆಯಾಗಿ ಜನರಿಗೆ ಅತೃಪ್ತಿ
ಉಂಟುಮಾಡಬಹುದು. ಮಂತ್ರಿಗಳು ತಮ್ಮ ಅಧಿಕಾರದಿಂದ, ಸ್ವಾರ್ಥ
ಸಾಧನೆ ಮಾಡತೊಡಗಿದರೆ, ಆಗಂತೂ ಅವರ ಗುಣ ದೋಷಗಳನ್ನು
ಮುಚ್ಚಿಡಲಿಕ್ಕೆ ಈ ನೌಕರರ ನೆರವು ಬೇಕೇಬೇಕು. ಈ ಜನಕ್ಕೆ ಆಗ

ಮೇಲಿನವರ ಭೀತಿ ಹೊರಟೇಹೋಗುತ್ತದೆ. ಇವರಿಬ್ಬರ ಸ್ವಾರ್ಥವೂ ಪರಸ್ಪರ ಹೊಂದಿ ಬೆಳೆದರೆ, ತೆರಿಗೆ ಕೊಡುವ ಸಾರ್ವಜನಿಕನಿಗೆ ಅನೇಕ ಬಗೆಯ ಹಾನಿ ಸಂಭವಿಸಬಹುದು.

ನಿಷ್ಕಲಂಕ ಶೀಲ ಬೇಕು

ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳಾಗುವವರ ಶೀಲ ನಿಷ್ಕಳಂಕವಾಗಿದ್ದರೇನೇ ಅದು ಚೆನ್ನಾಗಿ ನಡೆದೀತು. ಹಲವೊಂದು ಬಗೆಯ ಲಾಭಬಡಕರ ವರ್ಚಸ್ಸಿಗೆ ಅವರು ಬಲಿಬೀಳಬಾರದು. ನಾಳೆಯೂ ಅಧಿಕಾರ ಇರಿಸಿಕೊಳ್ಳಬೇಕೆಂಬ ಆಸೆಯಿಂದ ತಮಗೆ ಚುನಾವಣೆಯಲ್ಲಿ ಸಹಾಯ ಮಾಡಿದ ಜನಗಳಿಗೆ ಅಂದರೆ ಕೆಲವೊಬ್ಬರಿಗೆ, ಅನುಕೂಲ ಮಾಡಿ ಕೊಡುವ ಧೋರಣೆ ವಹಿಸಿದರೆ, ದೇಶಕ್ಕೆ ಕಷ್ಟ ಬಂದೀತು. ಬುದ್ಧಿ ಮಾನರಲ್ಲದವರಿಗೆ–ಈ ಪದವಿ ಎಂದೂ ಸಲ್ಲತಕ್ಕದ್ದಲ್ಲ. ಜನ ಹಿತಕ್ಕೆ ಯಾವುದು ಆಗಬೇಕು ಅದಕ್ಕೆ ಹಣ ಹೇಗೆ ಪೂರೈಸಬೇಕು, ಅದನ್ನು ಕಾರ್ಯದಲ್ಲಿ ಹೇಗೆ ತರಬೇಕು, ತಮ್ಮ ಪಂಗಡದ ಆದರ್ಶಗಳು ಹೇಗೆ ಕಾರ್ಯರೂಪದಲ್ಲಿ ಬರಬೇಕು–ಎಂಬುದನ್ನು ತಿಳಿಯುವ ಶಕ್ತಿ ಮಂತ್ರಿಗಳಿಗಿರಬೇಕು. ಎಷ್ಟೋ ಹೊಸ ಕೆಲಸಗಳಾಗ ಬೇಕಾಗುತ್ತದೆ. ಆಗ ತನಗಿರುವ ಅನುಭವ, ·ತಮ್ಮ ಸೇವಕರಿಗಿರುವ ಅನುಭವ, ಎರಡೂ ಸಾಕಾಗದೆ ಹೋಗಬಹುದು. ಇಂಥ ಸಂದರ್ಭ ಗಳಲ್ಲಿ ಅವರು ಬೇರೆ ಕಡೆಗಳಿಂದಾಗಲೀ, ಪಂಗಡದ ಹೊರಗಿನಿಂದಾಗಲೀ ಪ್ರಾಂತದ ಹೊರಗಿನಿಂದಾಗಲೀ ತಜ್ಞರನ್ನು ಕರೆಯಿಸಿಕೊಂಡು ಅವರ ಅಭಿಪ್ರಾಯಗಳಿಸಿ ಕೆಲಸಮಾಡಿಸಬೇಕು. ಇಂಥ ತಜ್ಞರನ್ನು ನೇಮಿಸುವಾಗ (ನೇಮಿಸುವರು ಅವರೇ) ಜಾತಿ ಸಂಬಂಧ ಇವುಗಳಿಂದ ಪೀಡಿತರಾಗದೆ, 'ಕೆಲಸಕ್ಕೆ ತಕ್ಕವರಾರು' ಎಂಬ ಒಂದೇ ದೃಷ್ಟಿ ಇರಬೇಕು.

ನೌಕರರ ನೇಮಕದಲ್ಲಿ

ಸರಕಾರದ ಸೇವಕರನ್ನು ನೇಮಿಸಿಕೊಳ್ಳುವಾಗಲೂ ಈ ದೃಷ್ಟಿಯಿಲ್ಲದೆ ಹೋದರೆ ಜನಹಿತ ಆಗಲಾರದು. ಇಂದು ನಮ್ಮ ದೇಶದಲ್ಲಿ ದೇಶ ಸೇವೆ ಮಾಡಿದೆವೆನ್ನುವ ಜನ, ಆ ಸೇವೆಗೆ ಬದಲಾಗಿ ನೌಕರಿ,

ಅಧಿಕಾರ ಪಡೆಯಬೇಕು ಎಂದು ಬಯಸುವುದನ್ನು ಕಾಣುತ್ತೇವೆ.
'ಅತಿ ಉತ್ತಮ ಯೋಗ್ಯತೆ ಉಳ್ಳವರನ್ನು ಉತ್ತಮ ಕೆಲಸಕ್ಕೆ ನೇಮಿಸ
ಬೇಕು' ಎಂಬುದನ್ನು ನಾವು ಮರೆತಂತೆ ಕಾಣುತ್ತದೆ. ಬದಲು-ಒಂ
ದೊಂದು ಪಂಗಡದವರಿಗೆ, ಗುಂಪಿಗೆ, ಜಾತಿಗೆ ಇಂಥಿಂಥ ದಾವಾಶಯ
ದಲ್ಲಿ ಕೆಲಸ ಹಂಚಬೇಕು-ಎನ್ನುವ ಧೋರಣೆ ಕಾಣುತ್ತದೆ. ಒಂದು
ದೃಷ್ಟಿಯಿಂದ ಇದು ಜನರನ್ನು ತೃಪ್ತಿ ಪಡಿಸಬಹುದು. ಅವರಿಗೆ ಕೊಡುವ
ಸಂಬಳ ಬೇರೆ ಬೇರೆ ಜಾತಿ, ಗುಂಪುಗಳಿಗೆ ಸಮಾನವಾಗಿ ಹಂಚಿ
ಹೋಗಬೇಕು. ಎನ್ನುವ ನ್ಯಾಯದಿಂದ ಈ ತತ್ವ ಸರಿ ಕಾಣಬಹುದು.
ಆದರೆ ಇದು ಸಾರ್ವಜನಿಕದ ಹಿತದ ದಾರಿಯಲ್ಲ. ಇಡೀ ದೇಶದ ಹಿತ
ಆಗಬೇಕಾದರೆ, ಆ ದೇಶದಲ್ಲಿನ ಅತ್ಯುತ್ತಮವಾದ ಜನವನ್ನೇ ಆರಿಸಿ
ನೇಮಿಸಿಕೊಂಡರೆ, ಆಗ ಅತಿ ಹೆಚ್ಚಿನ ಸೇವೆ ಸಮಾಜಕ್ಕೆ ದೊರೆಯು
ತ್ತದೆ. ಸಮಾಜದಲ್ಲಿರುವ ಯೋಗ್ಯ ಜನಗಳ ಒಟ್ಟು ಸೇವೆಯಿಂದ,
ಒಟ್ಟು ಜನರ ಹಿತವಾಗುತ್ತದೆ; ಎಷ್ಟೋ ಪಾಲು ಹೆಚ್ಚಾಗುತ್ತದೆ.
ಇಲ್ಲದೆ ಹೋದರೆ ಸರಕಾರವು ಸಂಬಳ ಬಹುಮಾನ ಹಂಚುವ ಒಂದು
ಸಂಸ್ಥೆಯಾಗುತ್ತದೆಯೇ ಹೊರತು, ಎತ್ತಿದ ತೆರಿಗೆಗೆ ತಕ್ಕಂತೆ ಸಾರ್ವ
ಜನಿಕ ಸೇವೆ ಸಲ್ಲಿಸುವ ಸಂಸ್ಥೆಯಾಗಲಾರದು. ನಿತ್ಯ ಜೀವನದಲ್ಲಿ
ನಾವು ಏನು ಮಾಡುತ್ತೇವೆ. ಮನೆಯಲ್ಲೊಬ್ಬನಿಗೆ ಬೇನೆ ಬಂದರೆ
ಅವನ ಕಾಯಿಲೆಯನ್ನು ಬೇಗನೆ ಗುಣಪಡಿಸಬಲ್ಲ ವೈದ್ಯನನ್ನು ಹುಡು
ಕುತ್ತೇವೆಯೋ ಅಥವಾ ನಮ್ಮವನೆಂಬ ಅಭಿಮಾನದಿಂದ ಯಾವನ ಬಳಿ
ಗಾದರೂ ಹೋಗಿ ಮದ್ದು ತರುತ್ತೇವೆಯೋ? ನಮ್ಮಲ್ಲೊಂದು ಕಕ್ಷಿ
ಬೆಳೆದಾಗ, ಅದನ್ನು ನಮಗಾಗಿ ಜಯಿಸಿ ಕೊಡಬಲ್ಲ ವಕೀಲನನ್ನು
ಹುಡುಕುತ್ತೇವೆಯೋ? ಜಾತಿಯವನೆಂದು ಎಂಥ ವಕೀಲನನ್ನಾದರೂ
ಹುಡುಕುತ್ತೇವೆಯೋ? ಶಾಲೆಯಲ್ಲಿ ಕಲಿಸುವ ಮಕ್ಕಳು ಬುದ್ಧಿವಂತರಾಗ
ಬೇಕು-ಎಂದು ಕಳುಹಿಸುತ್ತೇವೆಯೋ? ಅಥವಾ 'ನಮ್ಮ ಜಾತಿಗೆ ಸೇರಿದ
ಉಪಾಧ್ಯಾಯರಿಂದ ಪಾಠ ಹೇಳಿಸಿಕೊಂಡರೆ ಸಾಕು' ಎಂದು ತೃಪ್ತಿ ಪಡೆ
ಯುತ್ತೇವೆಯೋ? ಸಾರ್ವಜನಿಕ ನೌಕರನು ಆಯಾಯಾ ಕೆಲಸಕ್ಕೆ
ಬೇಕಾದ ತನ್ನ ಯೋಗ್ಯತೆಯಿಂದ ನೇಮಕಕ್ಕೂ ಯೋಗ್ಯನೆನಿಸಬೇಕೇ

ಹೊರತು, ಬೇರೆ ಕಾರಣಗಳಿಂದ ಅಲ್ಲಿ ಬರುವಂತಿದ್ದರೆ, ಅವರಿಂದ ಸರಕಾರದ ಯಂತ್ರ ಜಡವಾಗುತ್ತದೆ. ಶಿಥಿಲವಾಗುತ್ತದೆ. ಸಾರ್ವಜನಿಕ ಹಣ ದುರ್ವ್ಯಯವಾಗುತ್ತದೆ.

ಕುಂದುಗಳ ನಿವಾರಣೆಗೆ

ಕ್ಯಾಬಿನೆಟ್ ಸರಕಾರ ಪದ್ಧತಿಯ ಯೋಗ್ಯತೆಯ ಮಟ್ಟವನ್ನು ನಾವು ಹೆಚ್ಚಿಸಬೇಕಾದರೆ ಪ್ರತಿನಿಧಿಗಳಲ್ಲಿ ಇರಬೇಕಾದ ಕೆಲವೊಂದು ಗುಣಗಳನ್ನು ಒತ್ತಾಯವಾಗಿರಿಸಲೇ ಬೇಕು. ಅಲ್ಲದೆ ಜನರಿಂದ ಆರಿಸಿಕೊಂಡು ಬಂದ ಎಲ್ಲರೂ ಜನರ ಪ್ರತಿನಿಧಿಗಳು ಎಂಬ ಬಗೆಯಲ್ಲಿ ವರ್ತಿಸುವ ಸಾಂಪ್ರದಾಯ ಬೆಳೆಯಬೇಕು. ಬೇರೆ ಬೇರೆ ಪಂಗಡದ 'ವ್ಯಕ್ತಿಸಂಪತ್ತು' ಇರಬಾರದೆನ್ನುವದಿರಬಹುದು. ಇನ್ನೊಂದು ಇರಬೇಕು ಎನ್ನುವಂತಹದಿರಬಹುದು. ಇಂಥ ಕೆಲವೊಂದು ವಿಷಯಗಳಲ್ಲಿ ಅಭಿಪ್ರಾಯ ಭೇದವಿದ್ದರೂ - ವಿದ್ಯೆ, ವಾಚನ ಸೌಕರ್ಯ, ಆರೋಗ್ಯ ಮೊದಲಾದ ಹಲವಾರು ವಿಷಯದಲ್ಲಿ—ಒಂದೇ ಆದರ್ಶ ಇರಿಸಿಕೊಂಡಿರುವುದು ಸ್ವಾಭಾವಿಕ ಮತ್ತು ಸಾಧ್ಯ. ಅಂಥ ವೇಳೆಗಳಲ್ಲಿ ಪಂಗಡಗಳ ಭಿನ್ನ ಆದರ್ಶಗಳು ನಮ್ಮ ಮನಸ್ಸನ್ನು ಸಂಕೋಚಗೊಳಿಸಬಾರದು. ಪ್ರಜಾಮಂಡಲದೊಳಗೇನೆ ಆರಿಸಿಬಂದ ವ್ಯಕ್ತಿಗಳಲ್ಲಿ ಯಾವ್ಯಾವ ವಿಷಯಗಳಲ್ಲಿ ಸಿಷ್ಣಾತರಾದವರಿದ್ದಾರೆ ಯಾರು ಯಾವ ವಿಷಯದಲ್ಲಿ ಅಭಿಪ್ರಾಯ ಹೇಳಲು ಯೋಗ್ಯರು — ಎಂಬುದನ್ನರಿತು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ಮಂಡಲಗಳನ್ನು ರಚಿಸಿಕೊಂಡು ಕೆಲಸ ಮಾಡಬೇಕು. ಉದಾಹರಣೆಗಾಗಿ ವಿವಾಹಕ್ಕೆ ಸಂಬಂಧಿಸಿದಂತೆ ಕೆಲವು ಕಾಯಿದೆಗಳಾಗಬೇಕೆಂದು ಯೋಚಿಸೋಣ. ಈ ವಿಷಯದಲ್ಲಿ ಎಲ್ಲರೂ ಅಭಿಪ್ರಾಯ ಹೇಳಬಲ್ಲರೆಂಬುದಕ್ಕೆ ಅರ್ಥವಿಲ್ಲ. ಈ ವಿಷಯದ ಶಾಸನ, ಚರಿತ್ರೆ, ಪದ್ಧತಿ, ಅಭ್ಯಾಸ ಮಾಡಿದವರು ಬೇಕು. ವಿವಾಹವು ಸಮಾಜದಲ್ಲಿ ಯಾವ ಕೆಲಸ ಮಾಡಿದೆ -- ಮಾಡುತ್ತದೆ ಎಂದು ಅವರ ಸಾಮಾಜಿಕ ಪ್ರಗತಿಯನ್ನು ತಿಳಿದು ಬಲ್ಲವರು ಬೇಕು. ಅಂಥವರು ಕೊಡುವ ಅಭಿಪ್ರಾಯಕ್ಕೆ ಕೊಡ

ಬೇಕಾದ ಬೆಲೆ, ಚುನಾಯಿತನಾದ ಮಾತ್ರಕ್ಕೆ ಒಬ್ಬ ಪ್ರತಿನಿಧಿಗೆ ಕೊಡಬೇಕೇ? ತೆರಿಗೆಗೆ ಸಂಬಂಧಪಟ್ಟ ಪ್ರಶ್ನೆಗಳಿರುತ್ತವೆ. ಒಂದೊಂದು ತೆರಿಗೆಗೂ ಒಂದೊಂದು ಚರಿತ್ರೆ ಇರುತ್ತದೆ. ಯಾವ ತೆರಿಗೆ, ಸರಕಾರಕ್ಕೆ ವರಮಾನ ತರುತ್ತದೆ, ಯಾವುದು ತೆರಿಗೆ ಕೊಡುವ ಜನ, ಅವರ ಶಕ್ತಿ, ಮಿತಿಗಳೇನು- ಎಂದು ಒಂದೊಂದು ತೆರಿಗೆಯ ಪರಿಣಾಮವನ್ನು ತಿಳಿಯಬೇಕು. ಸಂಬಂಧಪಟ್ಟ ಉದ್ಯೋಗ ಕೈಗಾರಿಕೆಗಳ ಮೇಲೆ ತೆರಿಗೆ ಹೊರಿಸಿದ್ದರಿಂದ ಏನಾದೀತು— ಎಂದು ತಿಳಿದವರು, ಈ ತಿಳುವಳಿಕೆಯುಳ್ಳ ಪ್ರತಿನಿಧಿಗಳು ಮಾತ್ರ ಅಂಥ ಶಾಸನ ರಚನೆಗೆ ಅಭಿಪ್ರಾಯ ಕೊಡಲು ತಕ್ಕವರಾಗುತ್ತಾರೆ.

ಎರಡೆರಡು ಶಾಸನ ಮಂಡಲಗಳು

ಇವತ್ತಿನ ಪ್ರಜಾಪ್ರಭುತ್ವಗಳಲ್ಲಿ ಅನೇಕ ಕಡೆ, ಸಾಮಾನ್ಯ ಒಂದೇ ಕೆಲಸ ಮಾಡುವ, ಎರಡೆರಡು ಶಾಸನ ಮಂಡಲಗಳನ್ನು ಕಾಣುತ್ತೇವೆ. ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಶಾಸನ ಮಾಡತಕ್ಕವರು, House of Commonsನವರು. ಆ ಶಾಸನವನ್ನು ವಿಮರ್ಶಿಸುವ ಅಧಿಕಾರ House of Lordsಗಿದೆ. ಒಂದು ಶಾಸನ ಸರಿಯಾಗಿ ಕಾಣದಲ್ಲಿ ಪುನರಾಲೋಚನೆಗಾಗಿ, ತಿರುಗಿ ಅದನ್ನು Commons ಸಭೆಗೆ ಕಳುಹಿಸಬಹುದು. ಅವರು ಮೊದಲಿನದೇ ಶಾಸನ ಆಗಬೇಕೆಂದು ಹಟಹಿಡಿದರೆ ಮೇಲಿನ ಮಂಡಲದವರು ಏನೂ ಮಾಡುವಂತಿಲ್ಲ. ಸಾಮಾನ್ಯವಾಗಿ ಎರಡೆರಡು ಕಾಯಿದೆ ಮಂಡಲಗಳಲ್ಲಿ — ಇಬ್ಬರು ಮಾಡುವಂತಹ ಕೆಲಸ ಒಂದೇ ತೆರನಾಗಿರುತ್ತದೆ. ಇಬ್ಬರೂ ಜನರಿಂದ ಚುನಾಯಿತರಾದ ಪ್ರತಿನಿಧಿಗಳು. ಇಬ್ಬರ ಯೋಗ್ಯತೆಗೆ ಸಂಬಂಧಿಸಿದ ಭಿನ್ನ ಕಟ್ಟುಪಾಡುಗಳೂ ಇಲ್ಲ. ಹೀಗಿರುವುದಕ್ಕಿಂತ, ಎರಡು ಮಂಡಲಗಳನ್ನು, ಮಾಡುವಲ್ಲಿ ಒಂದನ್ನು 'ವಿಚಕ್ಷಣ ಮಂಡಲವನ್ನಾಗಿ ಮಾಡುವುದು ಒಳಿತು. ವೈದ್ಯಕೀಯ ಪ್ರಶ್ನೆಗಳನ್ನು ಆರ್ಥಿಕ ಪ್ರಶ್ನೆಗಳನ್ನು ಇತರ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ತಿಳಿದುಕೊಳ್ಳುವುದಕ್ಕೆ ಈ ಜನಕ್ಕೆ ಕಟ್ಟುಪಾಡಿರಬೇಕು ಅವರನ್ನೂ ಸಾರ್ವಜನಿಕರಿಂದಲೇ ಚುನಾಯಿಸಬಹುದು.

ಆದರೆ ಆ ಚುನಾಯಿತ ಪ್ರತಿನಿಧಿಗಳು- ಎಂಜಿನಿಯರರೋ ವೇದ ವಾದ ಶಾಸ್ತ್ರ ಪ್ರವೀಣರೋ, ಶಾಸನ ಶಾಸ್ತ್ರ ಪ್ರವೀಣರೋ, ಉದ್ಯೋಗ ಪ್ರವೀಣರೋ ಆಗಿರಬೇಕು, ಹೀಗೆ ಪ್ರವೀಣರನ್ನು ಆರಿಸಬೇಕಾದರೆ, ಸ್ವಾಭಾವಿಕವಾಗಿ ಅವರನ್ನು ತಿಳಿಯ ಬಲ್ಲ ಜನರು ಆಯಾಯ ವಿಷಯ ಗಳನ್ನು ಅರಿತವರಾಗಿರಬೇಕು. ಅಂದರೆ ಅವರನ್ನು ಆರಿಸುವ ಪ್ರಜೆ, ಸಾಮಾನ್ಯ ಪ್ರಜೆಯಾಗಿರದೆ ವೈದ್ಯರನ್ನು, ವೈದ್ಯ ಪ್ರಜೆಗಳು, ಎಂಜಿ ನಿಯರರನ್ನು, ಎಂಜಿನಿಯರರುಗಳು ಹೀಗೆ ಬೇಕಾದ ಶಿಕ್ಷಣ ಪದವಿ ಯುಳ್ಳ ಜನ ಮಾತ್ರ ಆರಿಸುವಂತಾಗಬೇಕು. ಹೀಗೆ ಕೂಡಿದ ಎರಡ ನೆಯ ಪ್ರತಿನಿಧಿ ಮಂಡಲವು ಕೆಳಗಿನ ಪ್ರತಿನಿಧಿ ಮಂಡಲ ಮಾಡಿದ ಶಾಸನಗಳನ್ನು ವಿಮರ್ಶಿಸಿ ತಡೆದು ಹಿಡಿಯುವ, ತಿದ್ದುವ ಅಧಿಕಾರ ಉಳ್ಳದಾಗಬಹುದು.

ಸರಕಾರದ ಯಂತ್ರ

ಯಂತ್ರದ ಬೆಳವಣಿಗೆ

ಹಿಂದಿನ ಕಾಲದಲ್ಲಿ ಸಾರ್ವಜನಿಕ ಕೆಲಸಗಳನ್ನು ಒಂದು ಸಣ್ಣ ಗುಂಪಿನ ಜನ ತಮಗೆ ತಿಳಿದಂತೆ ಮಾಡುತ್ತಿದ್ದುದಕ್ಕೂ, ಈಗಿನ ಕಾಲ ದಲ್ಲಿ ಒಂದು ದೇಶದ ಸಲುವಾಗಿ ಅದನ್ನು ಚೆನ್ನಾಗಿ ನಡೆಯಿಸಿಕೊಂಡು ಬರುವುದಕ್ಕೂ ವ್ಯತ್ಯಾಸವೆಷ್ಟೆಂಬುದನ್ನು ಪರಿಶೀಲಿಸುವ. ಒಂದು ಗುಂಪಿನ ಅವಶ್ಯಕತೆಗಳು ಕಡಿಮೆ ಮತ್ತು ಸಣ್ಣ ಪ್ರಮಾಣದವು. ಲಕ್ಷಾವಧಿ ಅಂಥಾ ಗುಂಪುಗಳಲ್ಲಿ ಸೇರಿರುವ ಒಂದು ದೇಶದ ಅವಶ್ಯ ಕತೆಗಳು ಹೆಚ್ಚಿನವು. ಮತ್ತು ವಿಶೇಷವಾದುವು. ಇದು ಗಾತ್ರ ಮತ್ತು ಪ್ರಮಾಣದ ದೃಷ್ಟಿಯಿಂದ ಮಾತ್ರ ಹೆಚ್ಚಲ್ಲ. ಸಾವಿರಾರು ವರ್ಷದ ಬೆಳವಣಿಗೆಯಲ್ಲಿ ಮನುಷ್ಯನ ಅವಶ್ಯಕತೆಗಳು, ಹೆಚ್ಚಿವೆ: ಅನಸಿಗೆ ಬೇಕಾಗುವ ಅನುಕೂಲತೆಗಳೂ ಹೆಚ್ಚಿವೆ. ಅವುಗಳನ್ನು

ಒದಗಿಸುವ ದಾರಿಗಳು ಅಷ್ಟೇ ಪ್ರಮಾಣದಲ್ಲಿ ಹೆಚ್ಚಿವೆ. ವಿಜ್ಞಾನ ದಿಂದಲೂ, ಇತರ ಶಾಸ್ತ್ರಗಳ ಜ್ಞಾನದಿಂದಲೂ ನಮ್ಮ ತಿಳುವಳಿಕೆ ಬಹುವಾಗಿ ಬೆಳೆದಿದೆ. ಮೊದಲು ಮಾಡುತ್ತಿದ್ದ ಕೆಲಸಗಳಿಗೆ ಜನ ಸಾಮಾನ್ಯರ ತಿಳಿವು ಸಾಕಾಗಿದ್ದರೂ, ಇಂದಿನ ಕೆಲಸಗಳು ನೆರವೇರ ಬೇಕಾದರೆ, ಪ್ರತಿಯೊಂದಕ್ಕೂ ವಿಶೇಷ ಜ್ಞಾನ ಉಳ್ಳವರು ಬೇಕಾಗಿದೆ.

ಹಾದಿಗೆ ಸಂಬಂಧ

ನಮ್ಮ ಹಾದಿ ಬೀದಿಗಳ ಅನುಕೂಲತೆಗಳನ್ನು ಕುರಿತು ವಿಚಾ ರಿಸುವ. ಹಿಂದೆ ನಮಗೆ ಬರಿಯ ಕಾಲುದಾರಿಗಳು ಸಾಕಾಗಿದ್ದುವು. ಚಿಕ್ಕ ದೋಣಿಗಳ ಮರದ ಸೇತುವೆಗಳೋ, ನದಿಗಳನ್ನು ದಾಟಲು ಸಾಕಾಗಿದ್ದುವು. ಒಬ್ಬನಿಂದ ಒಬ್ಬನಿಗೆ ಸುದ್ದಿ ಮುಟ್ಟಿಸಲು, ಸುದ್ದಿ ಒಯ್ಯುವ ಒಬ್ಬ ಆಳು ಸಾಕಾಗಿದ್ದ. ಈಗ ಹಾಗಿಲ್ಲ. ನಮ್ಮ ರಸ್ತೆಗಳು ಭಾರವಾದ ವಸ್ತುಗಳನ್ನು ಕೊಂಡೊಯ್ಯುವ ಹಲವಾರು ಮೋಟರುಗಳು ಸಂಚರಿಸಬಹುದಾದಷ್ಟು ಅಗಲವಾಗಿ, ನೇರವಾಗಿ ಗಟ್ಟಿ ಮುಟ್ಟಾಗಿರ ಬೇಕು. ಅಂಥ ವಾಹನಗಳನ್ನು ಸಾಗಿಸಬಲ್ಲ ಸೇತುವೆಗಳು ನದಿ ಗಳಿಗೂ ಬೇಕು. ಒಂದು ನದಿ ಒಂದು ಮೈಲು ಅಗಲವಾಗಿದ್ದರೂ ಅದನ್ನು ದಾಟಿಸಬಲ್ಲ ಕಬ್ಬಿಣದ ಸೇತುವೆಗಳು ಬೇಕು. ಈ ಸೇತುವೆ ನಿರ್ಮಿಸುವುದಕ್ಕೆ ಲಕ್ಷಗಟ್ಟಲೆ ಹಣ ಬೇಕು, ಜನ ಬೇಕು, ಮಾತ್ರವಲ್ಲ ಭಾರವಾದ ಉಕ್ಕಿನ ತುಂಡುಗಳನ್ನು ಜೋಡಿಸಿ ನದಿಯನ್ನು ದಾಟಿಸುವ ಉಪಾಯ ಬಲ್ಲವರು ಬೇಕು ಹಾಗೆಯೇ ಸಮುದ್ರ ಯಾನ ಮಾಡಲು ಸಾವಿರಾರು ಟನ್ ತೂಕದ ಹಡಗುಗಳು ಬೇಕು, ಅವುಗಳು ಬಂದು ತಂಗಲು ಅನುಕೂಲಿಸುವಂತಹ ರೇವುಗಳು ಬೇಕು. ಸುದ್ದಿಯ ವಿಚಾರವೂ ಹಾಗೆ. ಈಗಿನ ನಮ್ಮ ಟಪ್ಪಾಲು ಇಲಾಖೆ ಎಷ್ಟೆಲ್ಲ ಬೆಳೆದಿಲ್ಲ! ರೈಲುಗಳು, ವಿಮಾನಗಳು ಕಾಗದ ಪತ್ರಗಳನ್ನು ಸಾಗಿಸುತ್ತ ಲಿವೆ. ತಂತಿ, ಟೆಲಿಫೋನ್, ರೇಡಿಯೋ ಮುಖಾಂತರ ಸುದ್ದಿ ಸಾಗಿಸು ತ್ತಾರೆ ಇವು ಒಂದೊಂದಕ್ಕೂ ಸಂಬಂಧಿಸಿದ ವಿಜ್ಞಾನ ಅಪಾರ ವಾದದ್ದು. ಹಾಗೆಯೇ ನೆಲ ಮಾರ್ಗದಲ್ಲಿ ರೈಲುಗಳ ಸಂಚಾರ

ನಮಗೆ ಬೇಕಾಗಿದೆ. ಅದಕ್ಕೆ ಬೇಕಾಗುವ ಯಂತ್ರೋಪಕರಣಗಳಾಗಲೀ ಜನ ಏರ್ಪಾಡುಗಳಾಗಲೀ ಅಸಾಮಾನ್ಯವಾಗಿರುತ್ತವೆ

ಆರೋಗ್ಯ ವಿಚಾರ

ಮನುಷ್ಯ ಶುಚಿಯಾದ ಆಹಾರಗಳನ್ನುಂಡು ಒಳ್ಳೆಯ ನೀರನ್ನು ಸೇವಿಸಿ ಬೇನೆ ಬವಣೆಗಳಿಂದ ದೂರವಾಗಿರುವಂಥ ಕೆಲಸ ತುಂಬ ಕಷ್ಟವಾದದ್ದು. ಇಂದು ಮುಂಬಯಿ, ಕಲ್ಕತ್ತೆಯಂತಹ ಊರುಗಳಲ್ಲಿ ಮೂವತ್ತರಿಂದ ಐವತ್ತು ಲಕ್ಷದ ಜನರ ವರೆಗೆ ವಾಸಿಸುತಿದ್ದಾರೆ. ಅಷ್ಟು ಜನಕ್ಕೆ ಶುದ್ಧವಾದ ಕುಡಿಯುವ ನೀರಿನ ಪೂರೈಕೆ ಆಗಬೇಕಾದರೆ ಬಹಳ ದೊಡ್ಡ ಯೋಜನೆಯಾಗಬೇಕು. ನದಿಗಳಿಗೆ ಒಡ್ಡು ಕಟ್ಟಿ ಜಲಾಶಯ ನಿರ್ಮಿಸಿ, ನೂರಾರು ಮೈಲು ದೂರವಿರುವ ಪಟ್ಟಣಗಳಿಗೆ ಕೊಳವೆಗಳಲ್ಲಿ ನೀರನ್ನು ಸಾಗಿಸಬೇಕು. ಅದನ್ನು ಶುದ್ಧಗೊಳಿಸಬೇಕು. ಜನಕ್ಕೆ ಕೊಡಬೇಕು. ಬೇನೆಗಳ ಸಂಬಂಧದಲ್ಲಿ, ರೋಗ ಚಿಕಿತ್ಸೆಯ ವಿಚಾರದಲ್ಲಿ ನಮ್ಮ ತಿಳುವಳಿಕೆ ಬಹುವಾಗಿ ಹೆಚ್ಚಿದೆ. ಒಬ್ಬೊಬ್ಬ ಐದು ವರ್ಷ ವೈದ್ಯ ವಿದ್ಯೆಯನ್ನೇ ಕಲಿತು ಪಾರಂಗತನಾಗಲಾರದಷ್ಟು ರೋಗಗಳಿವೆ; ಅಷ್ಟು ಚಿಕಿತ್ಸೆಯ ಸಂಶೋಧನೆಗಳಿವೆ. ಇನ್ನೂ ಹೇಗೆ ಉಂಟಾಗುತ್ತಿದೆ ಎಂದು ತಿಳಿಯಲಾರದ ರೋಗಗಳಿವೆ. ಜನಕ್ಕೆ ಚಿಕಿತ್ಸೆ ದೊರೆಯಬೇಕಾದರೆ ಚಿಕಿತ್ಸಾ ಜ್ಞಾನ ಬೇಕು, ವೈದ್ಯರು ಬೇಕು, ಲಕ್ಷಾವಧಿ ಆಸ್ಪತ್ರೆಗಳು ಬೇಕು, ದಾದಿಯರು ಬೇಕು, ಮದ್ದುಗಳ ಸಂಶೋಧನೆ ಮಾಡುವವರು ಬೇಕು, ರೋಗಿಗಳನ್ನು ನೋಡಿಕೊಳ್ಳುವವರು ಬೇಕು.

ನ್ಯಾಯ ಶಾಸನ

ಒಂದು ಗುಂಪಿನವರು ತಮಗೆ ಬೇಕಾದ ನಿತ್ಯ ನಡತೆಯ ಕಟ್ಟುಪಾಡುಗಳನ್ನು ಹಾಡಿಕೊಂದಿರುವುದಕ್ಕೂ, ಇಡಿಯ ದೇಶಕ್ಕೆ, ಎಲ್ಲ ತರದ ಜನರಿಗೆ, ಇಂದಿನ ಜನಜೀವನಕ್ಕೆ ಅನುಕೂಲಿಸುವಂತೆ ಕಾಯಿದೆ ಕಟ್ಟಲೆಗಳನ್ನು ಮಾಡುವುದಕ್ಕೆ ಜನರ ವಾದ ವಿವಾದಗಳನ್ನು ತೀರ್ಮಾನ ಮಾಡುವುದಕ್ಕೆ ತುಂಬ ಶಕ್ತರು ಬೇಕು. ಈ ಶಾಸನಗಳು ಅಪಾರ

ವಾಗಿವೆ ಅದನ್ನು ನಿರ್ಮಿಸುವವರು, ಆಚರಣೆಗೆ ತರುವವರು, ಅದಕ್ಕೆ ವಿರುದ್ಧವಾಗಿ ಆಚರಿಸುವವರನ್ನು ದಂಡಿಸುವವರು, ಸಾವಿರಾರು ಜನರು ಬೇಕಾಗುತ್ತಾರೆ. ಮತ್ತು ತುಂಬ ತಿಳುವಳಿಕೆಯುಳ್ಳವರು ಬೇಕಾಗುತ್ತದೆ.

ವಿದ್ಯೆ

ಹಿಂದೆ ಒಂದಿಷ್ಟು ಬೇಸಾಯವನ್ನೋ, ಬೇಟೆಯನ್ನೋ ಕಲಿತರೆ ಜೀವನ ಸಾಗುತ್ತಿತ್ತು. ಇಂದು ಹಾಗಿಲ್ಲ. ಸಾವಿರಾರು ತೆರದ ಉದ್ಯೋಗ ಗಳಿವೆ. ಸುಲಭವೆಂದು ಕಾಣುವ ಕೃಷಿಯೂ ಕೂಡ, ಬಹು ವರ್ಷ ಅಭ್ಯಾಸ ಮತ್ತು ಪ್ರಯೋಗಗಳಿಂದ ಕಲಿಯುವ ವಿದ್ಯೆ ಎನಿಸಿದೆ. ನೆಲದ ಗುಣ, ಹವೆಯ ಗುಣ, ಬೀಜದ ಗುಣ, ಯಂತ್ರ ಸಲಕರಣೆಗಳಿಂದ ಸಾಗುವಳಿ ಕ್ರಮ, ಹೆಚ್ಚಿನ ಜನ ಸಂಖ್ಯೆಗೆ ಬೇಕಾಗುವ ಆಹಾರವನ್ನು ನೀರಾವರಿಯಿಂದ ಒದಗಿಸಿ ಕೊಡಬೇಕಾದ ಕೆಲಸ– ಎಲ್ಲವೂ ವಿಸ್ತಾರ ವಾಗಿವೆ. ಲಕ್ಷಗಟ್ಟಲೆ ಎಕ್ರೆ ಭೂಮಿ ಸಾಗುವಳಿ ಆಗಬೇಕಾದರೆ ನದಿ ಗಳಿಗೆ ಒಡ್ಡು ಕಟ್ಟಬೇಕು. ಸಾಮಾನ್ಯ ಒಡ್ಡುಗಳಲ್ಲ. ದೊಡ್ಡ ದೊಡ್ಡ ನದಿಗಳಿಗೆ ಮೈಲು ಎರಡು ಮೈಲು ಉದ್ದ ನೂರಡಿಯಿಂದ ಇನ್ನೂ ವಿಸ್ತೃತವಾದ ಜಲಾಶಯವಾಗಬೇಕು ಸಾವಿರಾರು ಮೈಲು ಉದ್ದದ ಕಾಲುವೆಗಳನ್ನು ಕಡಿಯಬೇಕು. ಯಂತ್ರ ಬಲ, ಬುದ್ಧಿ ಬಲ, ಜನಬಲ, ಸೇರಿ ಆಗಬೇಕಾದ ಕೆಲಸಗಳಿವು.

ಹೀಗೆ ಜೀವನದ ಯಾವುದೇ ಕ್ಷೇತ್ರವನ್ನು ನಾವು ನೋಡ ಹೋದರೂ ಅದು ಬಹಳ ದೊಡ್ಡದಾಗಿರುವುದನ್ನು ಕಾಣುತ್ತೇವೆ. ಅದನ್ನು ನಡೆಯಿಸುವವರು ತಂತಮ್ಮ ವಿಭಾಗಕ್ಕೆ ಬೇಕಾದ ಶಾಸ್ತ್ರ ಜ್ಞಾನ ಉಳ್ಳವರಾಗಿರಬೇಕು. ಅವರ ಕೆಳಗೆ ಸಾಕಷ್ಟು ಪ್ರವೀಣರಾದ ಸಾವಿರಾರು ಮಂದಿ ಕೆಲಸ ಮಾಡಬೇಕು. ಒಂದಿಷ್ಟು ತೊಡಕು ತೊಂದರೆ ಬಾರದಂತೆ, ವೇಳೆ ಹಾಳಾಗದಂತೆ ಆ ಇಲಾಖೆಯವರು ಕೆಲಸ ಮಾಡಬೇಕು. ತಮಗೆ ಸಂಬಂಧಿಸಿದ ಇತರ ಇಲಾಖೆಯವರೊಟ್ಟಿಗೆ ಸೇರಿ ಅವರು ಕೆಲಸ ಮಾಡಬೇಕು ಈ ಎಲ್ಲ ಕೆಲಸಗಳಿಗೆ ಹಣ ಎಷ್ಟು

ಬೇಕು, ಜನ ಎಷ್ಟು ಬೇಕು, ಎಂಬುದನ್ನು ಯೋಚಿಸಿದಿರಾ? ಈ ಎಲ್ಲ ಕೆಲಸಗಳಿಗಾಗಿ– ನಮ್ಮ ದೇಶದ ಕೇಂದ್ರ ಸರಕಾರ ವರ್ಷಕ್ಕೆ ಸುಮಾರು ಇನ್ನೂರೈವತ್ತು ಕೋಟಿ ರೂಪಾಯಿ ಖರ್ಚು ಮಾಡ ಬೇಕಾಗುತ್ತದೆ.

ಖರ್ಚು, ಕಂದಾಯ

ಈ ಹಣ ಎಲ್ಲಿಂದ ಬಂದೀತು? ತಾವು ಹಿಂದೆ ಕೊಡಿಟ್ಟ ಹಣದ ಬಡ್ಡಿಯಿಂದ ಬರಬಹುದು; ನಾವು ನಡೆಯಿಸುವ ಟಪ್ಪಾಲು, ರೈಲು, ಉದ್ಯೋಗಗಳ ಲಾಭದಿಂದ ಬರಬೇಕು, ಕಡಿಮೆಯಾಗುವ ಯಾವತ್ತು ಹಣ (ಇದೇ ಬಹು ಮಟ್ಟಿನದು) ವನ್ನು ಜನರಿಂದ ಕಂದಾಯ ತೆರಿಗೆಗಳ ಮೂಲಕವಾಗಿ ಎತ್ತಿ ಸಂಪಾದಿಸಬೇಕು. ತಮ್ಮ ವರ್ಷದ ಖರ್ಚು ವೆಚ್ಚಗಳನ್ನು ಸಾಕಷ್ಟು ಸೂಕ್ಷ್ಮವಾಗಿ ಗೊತ್ತುಪಡಿಸಲು ಇಡೀ ದೇಶದ ಆವಶ್ಯಕತೆಯನ್ನು ಗಮನಿಸಿ ಎಣಿಕೆ ಮಾಡಿ ಹೇಳಲು ಲೆಕ್ಕ ಪತ್ರ ಇಡುವ ಬಹು ದೊಡ್ಡ ಇಲಾಖೆಗಳು ಬೇಕು. ಹಣ ಕಾಸಿನ ವಿಚಾರ ತಿಳಿದವರು ಬೇಕು. ದೂರದರ್ಶಿಗಳಾದ ಅರ್ಥ ಶಾಸ್ತ್ರಜ್ಞರು ಬೇಕು. ಜನರನ್ನು ಕಂದಾಯದ ರೂಪದಲ್ಲಿಯೋ, ಸಾಲದ ರೂಪದಲ್ಲಿಯೋ, ಹಣ ಕೇಳಿದರೆ ಖುಶಿಯಿಂದ ಕೊಡುತ್ತಾರೆಯೋ? ಜನ ಸಾಲ ಕೊಡ ಬೇಕಾದರೆ, ನಾಳೆ ಈ ಹಣ ಹಿಂದೆ ಬಂತು ಎಂಬ ವಿಶ್ವಾಸ ಜನಕ್ಕೆ ಉಂಟಾಗಬೇಕು. ಸರಕಾರದ ಖರ್ಚು ವೆಚ್ಚದ ಲೆಕ್ಕ ಪತ್ರಗಳು ಜನಕ್ಕೆ ವಿಶ್ವಾಸ ಹುಟ್ಟಿಸುವಂತಿರಬೇಕು. ಇನ್ನು ತೆರಿಗೆ ಕಂದಾಯಗಳು ಬಹುವಾಗಿ ಜನಕ್ಕೆ ಹೊರೆಯಾದರೆ ನಾಳೆ ಅವರು ಕಂಗಾಲಾದಾರು ಅವರು ಕಂಗಾಲಾದರೆ ಸರಕಾರವೇ ನಿಲ್ಲಲಾರದು ಹೀಗಾಗಿ ಪ್ರತಿಯೊಂದು ಉದ್ಯೋಗ ವ್ಯಾಪಾರಗಳಲ್ಲಿ ಜನ ಹೇಗೆ ಸಂಪಾದಿಸುತ್ತಾರೆ, ಅವರಿಂದ ಎಷ್ಟರ ತನಕ ಹಣ ಕೇಳ ಬಹುದು, ಯಾರಿಂದ ಹೆಚ್ಚಿಗೆ ಕೇಳಬೇಕು, ಯಾರಿಂದ ಕಡಿಮೆ ಕೇಳ ಬೇಕು. ಇವನ್ನೆಲ್ಲ ಗೊತ್ತುಪಡಿಸುವ ಕೆಲಸವೂ ಸುಲಭದ್ದಲ್ಲ. ತುಂಬಾ ಜಿಗುಟಾದ ಸಮಸ್ಯೆ. ಹಾಲು ಕರೆಯುವ ಗೌಳಿ, ದನದ ಹೊಟ್ಟೆ

ತುಂಬಿಸಿ ಆ ಧನಕ್ಕೆ ಸಿಟ್ಟು ಬಾರದಂತೆ ನೋಡಿಕೊಂಡು, ಅದರ ಕರು ವಿಗೆ ಮೋಸವಾಗದಂತೆ ನೋಡಿ ಕೊಳ್ಳುವಂತೆ, ಜನರಿಂದ ಸರಕಾರ, ಕಂದಾಯ ತೆರಿಗೆ ಪಡೆಯಬೇಕಾಗುತ್ತದೆ. ಈ ಕೆಲಸಕ್ಕೂ ಬಹು ದೊಡ್ಡ ಏರ್ಪಾಟು ಬೇಕು. ಪ್ರಾಮಾಣಿಕರಾದ ಸೇವಕರು ಬೇಕು, ಲೆಕ್ಕ ಪತ್ರಗಳು ಬೇಕು, ಸರಕಾರದ ಕಣ್ಣು ತಪ್ಪಿ ಹಣ ವ್ಯಯವಾಗ ದಂತೆ ಲೆಕ್ಕ ಪರಿಶೋಧನೆ ಮಾಡುವ ಜನಗಳೂ ಬೇಕು.

ಬದಲಾವಣೆ ಇಲ್ಲ

ಹೀಗೆ ಒಂದು ಸರಕಾರಕ್ಕೆ ಬೇಕಾದ ಯಾವತ್ತು ಕೆಲಸಗಳನ್ನೂ ಮಾಡುವ ಜನವನ್ನು ನಾವು ಬದಲಾಯಿಸುವಂತೆಯೇ ಇಲ್ಲ. ಅಲ್ಲಿ ಕೆಲಸ ಮಾಡುವವರು ಅಭ್ಯಾಸ ಪಡೆಯುವುದಕ್ಕೆ ವರ್ಷಗಳೇ ಹೋಗು ತ್ತವೆ. ಅವರು ಸರಕಾರವನ್ನು ನಂಬಿ ಕೆಲಸ ಮಾಡಬೇಕಾದರೆ ಅವರಿಗೆ ವೇತನ ಕೊಡಬೇಕು. ಇಪ್ಪತ್ತು ಮುವತ್ತು ವರ್ಷ ಅವರ ಯೋಗ್ಯತೆಗೆ ಸಮನಾಗಿ ಸಂಬಳ ಕೊಡಬೇಕು. ಅವರು ಮುದುಕರಾಗಿ ಕೆಲಸಕ್ಕೆ ಅಯೋಗ್ಯರಾದಾಗ ಜೀವನ ಮಾಡಲು ಅವರಿಗೆ ಪೆನ್‌ಶನ್ ಕೊಡ ಬೇಕು. ಇಂಥ ಲಕ್ಷ್ಯಾವಧಿ ಜನರಿಂದ ಕೂಡಿದ ವಿವಿಧ ಇಲಾಖೆಗಳುಳ್ಳ ಒಂದು ಏರ್ಪಾಟನ್ನು, ಒಂದು ಮಹಾ ಯಂತ್ರವೆಂದೇ ನಾವು ತಿಳಿಯ ಬೇಕು. ಯಂತ್ರದ ಒಂದು ಗಾಲಿ ಕಳಚಿದರೂ ಕೆಲಸ ಹಾಳಾಗುತ್ತದೆ. ಆ ಗಾಲಿಗೆ ಬದಲಾಗಿ ತಕ್ಷಣ ಇನ್ನೊಂದು ಗಾಲಿಯನ್ನು ನಿಲ್ಲಿಸುವವರು ಆಗಬೇಕು. ಸವೆದ ಭಾಗಗಳನ್ನು ಬದಲಾಯಿಸಬೇಕು. ಹೀಗಾಗಿ ಸರಕಾರದ ಮುಖಂಡರಾಗಿ, ಅವು ಇಂಥ ಕೆಲಸ ಮಾಡಬೇಕು, ಮಾಡ ಬಾರದು ಎಂದು ನಿರ್ಣಯಿಸುವವರು, ತಲೆ ಮಾರಿನಿಂದ ಬಂದ ಅರಸ ನಾದರೂ ಸರಿಯೇ, ಜನರ ಪ್ರತಿನಿಧಿಗಳಾದ ಮುಖಂಡರಾದರೂ ಸರಿಯೇ. ಈ ಯಂತ್ರೋಪಕರಣ ಬದಲಾಗದ ಭದ್ರವಾದ, ವ್ಯವಸ್ಥೆ ಆಗಿರದೆ ಹೋದರೆ ದೇಶದ ಕೆಲಸ ಚೆನ್ನಾಗಿ ನಡೆಯಲಾರದು ಎಂಬು ದನ್ನು ನಾವು ತಿಳಿಯಬೇಕು.

ಜನರ ಮುಖಂಡರು

ಈ ಸರಕಾರದ ಯಂತ್ರದ ಮೂಲಕವಾಗಿಯೇ ಜನರ ಯಾವತ್ತು ಹಿತಾಹಿತಗಳನ್ನು ಅವರ ಪ್ರತಿನಿಧಿಗಳು ನಡೆಯಿಸಬೇಕಾಗುತ್ತದೆ. ಅದನ್ನು ನಡೆಯಿಸಲು– ಈ ಯಂತ್ರದ ಸವಿಸ್ತಾರವಾದ ಪರಿಚಯ, ಅದನ್ನು ನಡೆಯಿಸುವ ಮಂತ್ರಿಗಳಿಗೆ ಇರಲೇಬೇಕಷ್ಟೆ

ಯಂತ್ರನೇ ತಡೆಯಾದರೆ

ಈ ಯಂತ್ರ ಮನುಷ್ಯರಿಂದ ಕೂಡಿದ್ದು. ಆದುದರಿಂದ ಅವರಲ್ಲಿ ಸ್ವಾರ್ಥವಿರುವುದು ಸಹಜ. ಅವರು ಉಪಾಯವಾಗಿ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಲು ಅಪೇಕ್ಷಿಸುವುದು ಸಹಜ. ಎಷ್ಟೋ ಬಾರಿ ಈ ಯಂತ್ರದ ಸ್ವಾರ್ಥ ಜನಹಿತಕ್ಕೆ ಅಡ್ಡ ಬರಬಹುದು. ಸರಕಾರದ ಆಯ ಕಡಿಮೆಯಾದಾಗ, ಸರಕಾರದ ವೇತನ ತಗ್ಗಿಸುವ ಇಲಾಖೆಗಳನ್ನು ಕಡಿಮೆ ಮಾಡುವ ಎಂದರೆ– ಆವರು ನಮ್ಮೆದುರಿಗೆ ನಿಂತು ಬಿಡುವುದೂ ಉಂಟು.

ಕೆಲವೊಂದು ದೇಶಗಳಲ್ಲಿ– ಈ ಯಂತ್ರವೂ ಸರಕಾರ ನಡೆಯಿಸುವ ಜನಗಳೂ ಒಂದೇ ಎಂಬ ರೂಪದಲ್ಲಿರುತ್ತಾರೆ. ಆಗಲಂತು ಜನರಿಗೆ, ಈ ಸರಕಾರ ಎಂಬ ಯಂತ್ರದ ಸ್ವಾರ್ಥ ಜನರಹಿತಕ್ಕೆ ಅಡ್ಡ ಬಂತೆಂದು ಕಂಡಾಗ, ಅದನ್ನು ಎದುರಿಸುವ ಶಕ್ತಿಯೇ ಇಲ್ಲವಾಗುತ್ತದೆ.

ಆಳುವವರು ರಾಜನೇ ಇರಲಿ, ಇಂಥ ಒಂದು ವಿಶೇಷ ಯಂತ್ರವೇ ಇರಲಿ– ಆಳಿಸಿಕೊಳ್ಳುವವರ ವಿಮರ್ಶೆ, ಹಕ್ಕೋಟಿಗಳನ್ನು ಮೀರಿದ ರೀತಿಯಲ್ಲಿದ್ದರೇನೇ ಜನಕ್ಕೆ ಕ್ಷೇಮ. ಅದು ಪ್ರಜಾ ಪ್ರಭುತ್ವದ ರೀತಿ.

ಪ್ರಜಾ ಪ್ರಭುತ್ವವುಳ್ಳ ದೇಶಗಳಲ್ಲಿ ಕಂಡು ಬರುತ್ತಿರುವ ರಾಜಕೀಯ ಧೋರಣೆಗಳು

ಸಂಪತ್ತಿನ ವಿಚಾರದಲ್ಲಿ

ಇಂದಿನ ಪ್ರಜಾ ಪ್ರಭುತ್ವಗಳಲ್ಲಿ ಕೆಲವೊಂದು ದೇಶಗಳಲ್ಲಿ, ಮತ ಪಂಥಗಳನ್ನು ಆದರಿಸಿ ಮುಂದೆ ಬಂದುದನ್ನು ಕಾಣುತ್ತೇವೆ. ಫ್ರಾನ್ಸಿನಲ್ಲಿಯೂ, ಇಟಲಿಯಲ್ಲಿಯೂ ಇವುಗಳನ್ನಾಧರಿಸಿಕೊಂಡ ಪಂಗಡಗಳಿವೆ. 'ಕೆಥೊಲಿಕ್' ಮತಾವಲಂಬಿಗಳು ರಾಜಕೀಯ ಪಂಗಡ ಕಟ್ಟಿದ್ದನ್ನು ಕಾಣುತ್ತೇವೆ. ನಮ್ಮ ದೇಶದಲ್ಲೂ 'ಹಿಂದೂ ಮಹಾಸಭೆ'ಯಂತಹ ಮತಾನುಯಾಯಿ ಸಂಸ್ಥೆಗಳು, ರಾಜಕೀಯದಲ್ಲಿ ಧುಮುಕುವುದನ್ನು ಕಾಣಬಹುದು. ಆದರೆ ಹೆಚ್ಚಿನ ದೇಶಗಳಲ್ಲಿ ರಾಜಕೀಯಕ್ಕೂ, ಮತ ಧರ್ಮಕ್ಕೂ ನಿಕಟವಾದ ಯಾವ ಸಂಬಂಧವನ್ನೂ ನಾವು ಕಾಣಲಿಲ್ಲ. ಒಂದೊಂದು ಕಾಲದಲ್ಲಿ ಅನುಸರಿಸುತ್ತಿದ್ದ ಅರಸನ ಧರ್ಮ ಸರಕಾರದ ಧರ್ಮ ಎನಿಸಿಕೊಂಡಿತ್ತು. ಈಗ ಹಾಗಿಲ್ಲ. ಸರಕಾರದ ವಿಚಾರಗಳು ಮುಖ್ಯವಾಗಿ ಆರ್ಥಿಕವಾದುವು. ರಾಜಕೀಯವಾದವು. ಮತ ಧರ್ಮಗಳಲ್ಲಿ ಅದು ಕೈ ಹಾಕುವುದಿಲ್ಲ. ಮತ ಧರ್ಮ ಪ್ರಜೆಗಳ ಖಾಸಗೀ ಜೀವನಕ್ಕೆ ಅನ್ವಯಿಸಿದ ವಿಚಾರ ಎನಿಸಿದೆ. ಆದುದರಿಂದ, ರಾಜಕೀಯಕ್ಕೆ ಅವನ್ನು ಗಂಟು ಹಾಕುವುದು ತಪ್ಪು. ಸರಕಾರದ ಕ್ಷೇತ್ರ ಆರ್ಥಿಕ ಕ್ಷೇತ್ರ. ಜನರ ಸಾಂಪತ್ತಿಕ ಅಭಿವೃದ್ಧಿ, ದೇಶದ ಶಾಂತಿ, ರಕ್ಷಣೆ, ವಿದ್ಯಾ ಸಂಸ್ಕೃತಿಗಳ ಕೆಲಸ,— ಇವುಗಳೇ ಸರಕಾರದ ಮುಖ್ಯ ಗಮನ ಸೆಳೆಯುತ್ತವೆ. ಹೀಗಿರುತ್ತ ಇನ್ನು ಮುಂದೆಯೂ ಮತ ಧರ್ಮಗಳು ಯಾವುದೇ ದೇಶದ ರಾಜಕೀಯವನ್ನು ಆಧಿಕರಿಸಿ ಬೆಳೆಯಲಾರವು. ಒಂದೇ ದೇಶದ ಜನಗಳಲ್ಲಿ, ಜನಗಳ ಮನಸ್ಸನ್ನು ಸೆಳೆಯುವ ಈಗಿನ ಪ್ರಭಾವಗಳನ್ನು ಪರಿಶೀಲಿಸುವುದಾದರೆ, ಅವೆಲ್ಲ ಮುಖ್ಯವಾಗಿ ಆರ್ಥಿಕ ವಿಚಾರಗಳಿಗೂ, ವರ್ಣ ವಿಚಾರಗಳಿಗೂ, ರಾಜಕೀಯ ವಿಚಾರಗಳಿಗೂ— ಸಂಬಂಧಿಸಿದವು ಎಂಬುದನ್ನು ಕಾಣಬಹುದು.

ಮೂರು ಲಹರಿಗಳು

ಸಂಪತ್ತಿನ ವಿಚಾರದಲ್ಲಿ ನೋಡ ಹೋದರೆ- ಒಂದೊಂದು ಜನ ವರ್ಗದ ಹಿತ, ಅಹಿತ ಒಂದೊಂದು ತೆರನಾಗುತ್ತದೆ. ಕೃಷಿಕರ ಹಿತ ಒಂದು ಬಗೆಯಾದರೆ, ಉದ್ಯೋಗಕ್ಕೆ ಸಂಬಂಧಪಟ್ಟವರ ಹಿತ ಇನ್ನೊಂದು ಬಗೆ. ಭಂಡುವಳುಗಾರರ ಹಿತ ಒಂದು ತೆರನಾದರೆ, ಅದನ್ನಾಶ್ರಯಿಸಿದ ಶ್ರಮಗಾರರ ಹಿತ ಇನ್ನೊಂದು ತೆರ. ಜಮೀನು ದಾರರ ಹಿತ ಒಂದು ಕಡೆ, ಒಕ್ಕಲುಗಳ ಹಿತ ಇನ್ನೊಂದು ಕಡೆ. ತಮ್ಮ ಹಿತ ಉಳಿದವರ ಹಿತದಿಂದ ಬೇರೆಯಾದದ್ದು ಎಂದು ತಿಳಿದು ತಮ್ಮ ತಮ್ಮ ಗುಂಪುಗಳನ್ನು ಬೆಳೆಯಿಸಿ ಅದರ ಶಕ್ತಿ, ವರ್ಚಸ್ಸು ಹೆಚ್ಚಿಸಿ, ಸರಕಾರದ ಆಡಳಿತೆ ತಮ್ಮ ಕೈಳಗೆ ಬರಬೇಕು ಎಂದು ಹೋರಾ ಡುವ ಲಕ್ಷಣಗಳು ಎಲ್ಲೆಲ್ಲೂ ಕಾಣುತ್ತವೆ. ಇದರಿಂದಾಗಿ ಜಮೀನು ದಾರರುಗಳ ಗುಂಪು, ಕಿಸಾನರ ಗುಂಪು, ಶ್ರಮಗಾರರ ಗುಂಪು, ಪರ ಸ್ಪರ ಸ್ಪರ್ಧೆಯಲ್ಲಿ ನಿರತರಾದುದನ್ನು ಕಾಣುತ್ತೇವೆ.

ಆಫ್ರಿಕದಂತಹ ದೇಶದಲ್ಲಿರುವ ಜನ ಬಣಗಳಾಗಿ ಒಡೆಯುವು ದಕ್ಕೆ ಕೆಲವೊಂದು ಬೇರೆಯೇ ಕಾರಣಗಳುಂಟಾಗಿವೆ. ಅಲ್ಲಿ ನೆಲೆಸಿರುವ ಜನ ಆಫ್ರಿಕದ ಮೂಲ ನಿವಾಸಿಗಳು, ಯುರೋಪಿಯಾನರು ಮತ್ತು ಹಿಂದೀಯರು. ಈ ಮೂರು ತಂಡದ ಜನ ತಂತಮ್ಮ ಹಿತ ಸಾಧಿಸು ವುದರಲ್ಲಿ ತೊಡಗಿದಾಗ, ಉಳಿದವರನ್ನು ತಮ್ಮ ವೈರಿಗಳೆಂದು ತಿಳಿ ಯುವುದುಂಟು. ಚುನಾವಣೆಗೆ ನಿಲ್ಲುವವರು ವರ್ಣದ್ವೇಶಗಳಿಂದ ಪ್ರೇರಿತ ರಾಗಿ ಸ್ಪರ್ಧೆಗೆ ನಿಲ್ಲುತ್ತಾರೆ. ವ್ಯವಹಾರದಲ್ಲಿ ಈ ವರ್ಣದ್ವೇಶದ ಸಮಸ್ಯೆ, ಮತ ಧರ್ಮಗಳಷ್ಟೇ ಬಲವಾಗಿ ಕಾಡುವ ಪ್ರಶ್ನೆ. ಈ ಬೇರೆ ಬೇರೆ ವರ್ಣದವರ ಸಾಂಪತ್ತಿಕ ಅಭಿವೃದ್ಧಿಯು ಪರಸ್ಪರ ವಿರುದ್ಧವನ್ನು ಹುಟ್ಟಿಸುವುದರಿಂದ, ಈ ವರ್ಣದ್ವೇಶಕ್ಕೆ ಪುಷ್ಟಿಯುನ್ನು ಕೊಡುತ್ತದೆ

ರಾಷ್ಟ್ರ ಮೀರಿದ ಭಕ್ತಿ

ಕೆಲವೊಂದು ದೇಶಗಳಲ್ಲಿ ಕಂಡು ಬರುತ್ತಿರುವ ರಾಜಕೀಯ ಘೋರಣೆಗಳು ಆಯಾಯಾ ದೇಶದ ರಾಜಕೀಯ ಮೇರೆಯನ್ನು ದಾಟ

ಹೋಗುವುದುಂಟು ಉದಾಹರಣೆಗಾಗಿ- ಜಗತ್ತಿನ ಕಮ್ಯುನಿಸ್ಟರೆಲ್ಲ ಬಾಂಧವ ಕೊಟ್ಟ ಬುದ್ಧಿ. ಇವತ್ತು ಪ್ರಪಂಚದ ಯಾವತ್ತು ಕಮ್ಯು ನಿಸ್ಟ ಜನಗಳು, ತಮ್ಮ ಸ್ಫೂರ್ತಿಗಾಗಿ ರಶ್ಯದ ಕಡೆ ಮುಖ ಮಾಡಿ ನಿಂತಿದ್ದಾರೆ. ಆ ಜನ ರಶ್ಯದ ಕ್ಷೇಮ ಯಾವುದರಿಂದ ಆದೀತೋ ಅದ್ಕೇ ತಮ್ಮ ಕ್ಷೇಮವೆಂದು ತಿಳಿಯುತ್ತಿದ್ದಾರೆ. ತಮ್ಮ ದೇಶಕ್ಕೆ ವಿರುದ್ಧ ವಾಗಿಜಾದರೂ. ರಷ್ಯಕ್ಕೆ ಬೆಂಬಲವಾಗಲು ಅವರು ಸಿದ್ಧರಿದ್ದಾರೆ. ಇದೇ ರೀತಿಯಲ್ಲಿ ಸ್ವವರ್ಣದವರ ಮೇಲಿನ ಪ್ರೇಮದಿಂದ ಒಂದು ದೇಶದ ಜನ ಇನ್ನೊಂದು ದೇಶದಲ್ಲಿರುವ ತಮ್ಮ ವರ್ಣದ ಜನರನ್ನು ಎತ್ತಿ ಹಿಡಿದು, ತಮ್ಮ ದೇಶದ ಭಿನ್ನ ವರ್ಣದ ಜನಗಳ ಮೇಲೆ ಸ್ಪರ್ಧೆ ಹೂಡ ಬಹುದು. ಒಂದೊಂದು ರಾಷ್ಟ್ರದ ಸರಕಾರವು ಬೇರೆಯಾಗಿರುವಷ್ಟು ದಿನ, ಆ ರಾಷ್ಟ್ರದ ಶ್ರೇಯಸ್ಸನ್ನು ಅಲ್ಲಿನ ಯಾವತ್ತು ಪಂಗಡಗಳೂ, ತಮ್ಮ ಶ್ರೇಯಸ್ಸು ಎಂದು ತಿಳಿಯದೆ ಹೋದರೆ- ದೇಶದೊಳಗಿನ ರಾಜ ಕೀಯ ಸ್ಪರ್ಧೆ ವಿಷಮಕ್ಕೆ ಗುರಿಯಾಗುತ್ತದೆ. ಅನ್ಯ ರಾಷ್ಟ್ರಕ್ಕೆ ಹಿತ ವಾಗುವಂತಹ ಸ್ವರಾಷ್ಟ್ರಕ್ಕೆ ಹಾನಿಯಾಗುವಂಥ ರಾಜಕೀಯ ದೃಷ್ಟಿಯು ಒಂದು ದೇಶದ ಸರಕಾರದ ಸಂಚಾಲಕರಲ್ಲೂ, ನೌಕರರಲ್ಲೂ ಬಂದು ಬಿಟ್ಟರೆ. ಯುದ್ಧದಲ್ಲೂ. ಶಾಂತಿ ಕಾಲದಲ್ಲೂ ಆ ದೇಶವು ಗಟ್ಟಿ ಮುಟ್ಟಾಗಿ ನಿಲ್ಲುವುದು ಕಷ್ಟವಾಗುತ್ತದೆ. ಇಂಥ ಸಂದರ್ಭಗಳಲ್ಲಿ ಕೆಲವೊಂದು ಪಂಗಡಗಳ ತತ್ವಗಳು, (ಉದಾಹರಣೆಗಾಗಿ ಕಮ್ಯುನಿಸ್ಟ ಸಂಗಡದ ತತ್ವ) ಕೇವಲ ಆರ್ಥಿಕವಾದದ್ದಾದರೂ, ಅದರ ರಾಜನೀತಿ ದೇಶದ ಮೇರೆಯನ್ನು ಮೀರುವುದರಿಂದ, ಅನೇಕ ಸಂಧಿಗ್ಧ ಪ್ರಕ್ತಿ ಗಳನ್ನು ಹುಟ್ಟಿಸುವ ಸಂದರ್ಭಗಳುಂಟಾಗುತ್ತವೆ.

ಆರ್ಥಿಕ ಸ್ವಾರ್ಥ

ಒಂದು ದೇಶದ ಪ್ರಜೆಗಳೆಲ್ಲರೂ ಸರಿಸಮಾನರೆಂಬ ತತ್ವವನ್ನು ಮತದಾನ ಪದ್ಧತಿಯಲ್ಲಿ ಒಪ್ಪಿಕೊಂಡಂತೆಯೇ, ಆರ್ಥಿಕ ವಿಚಾರಗಳಲ್ಲಿ ಸಮಾಜವಾದಿಗಳು, ಕಮ್ಯುನಿಸ್ಟರು, ಸಮಾನತೆಯನ್ನು ಸಾಧಿಸ ಬೇಕೆಂದು ಪ್ರಯತ್ನಿಸುವರು. ಸಮಾಜವಾದಿಗಳು- ಸಂಪತ್ತಿನ

ಉತ್ಪನ್ನಕ್ಕೆ ಕಾರಣವಾದ ಎಲ್ಲ ಬಗೆಯ ಸಾಧನಗಳನ್ನು ಅಂದರೆ ಜಮೀನು, ಉದ್ಯೋಗ, ಗನಿ, ರೈಲ್ವೆ ಮೊದಲಾದುವುಗಳನ್ನು ಸರಕಾರವೇ ನಡೆಯಿಸಿಕೊಂಡು ಹೋಗಬೇಕೆಂಬ ಪಂಥದವರು ಉಳಿದ ಉದ್ಯೋಗಗಳನ್ನು ವ್ಯಕ್ತಿ ಪ್ರಯತ್ನಕ್ಕೆ ಬಿಡುವುದರಲ್ಲಿ ಅವರ ಆಕ್ಷೇಪವಿಲ್ಲ. ಈ ಬಗೆಯ ರಾಷ್ಟ್ರೀಕರಣವನ್ನು ಶಾಸನಗಳ ಮೂಲಕ ಮಾಡಬೇಕೆನ್ನುವುದು ಅವರ ಗುರಿ. ಕಮ್ಯುನಿಸ್ಟರು ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ. ಅವರು ಪ್ರತಿಯೊಂದು ವಿಷಯದಲ್ಲೂ ಸಂಪತ್ತಿನ ಸಾಧನಗಳು ರಾಷ್ಟ್ರದ ಸ್ವಾಧೀನವಾಗಿ ಇರಬೇಕೆನ್ನುವವರು. ವ್ಯಕ್ತಿಯು ತನ್ನಿಷ್ಟ ಬಂದ ಉದ್ಯೋಗ ಕೈಕೊಂಡು, ಸಂಪತ್ತನ್ನು ಗಳಿಸುವ ಅಧಿಕಾರವಿಲ್ಲ ಎನ್ನುವವರು. ಮತ್ತು ಈ ಬಗೆಯ ಬದಲಾವಣೆಯು ಶಾಸನದಿಂದಾಗುವ ತನಕ ಕಾಯುವ ತಾಳ್ಮೆ ಇಲ್ಲದವರು. ಒಂದೇ ಬಾರಿಗೆ ಬಲವಂತದಿಂದ ಸಂಪತ್ತನ್ನು ಕಸಿದುಕೊಳ್ಳ ಬಯಸುವವರು. ಸಮಾಜವಾದಿಗಳು– ತಾವು ರಾಷ್ಟ್ರೀಕರಣಗೊಳಿಸುವ ಸಾಧನಗಳ ಬಗ್ಗೆ ತಕ್ಕ ದ್ರವ್ಯ ಪರಿಹಾರವನ್ನು ಕೊಡುವುದಕ್ಕೆ ಒಪ್ಪುತ್ತಾರೆ. ಕಮ್ಯುನಿಸ್ಟ ಪಂಥದಂತೆ ಹೋದರೆ ಆ ಮಾತಿಲ್ಲ. ಬಲವಂತದ ಸಾಮ್ಯ ಒಂದೇ ಅವರ ಧ್ಯೇಯ. ಈ ಎರಡೂ ತತ್ವಗಳ ಪರಿಣಾಮ ಸಮಾಜದ ಮೇಲೆ ಯಾವ ರೀತಿಯಿಂದಾಗುತ್ತದೆ– ಎಂಬುದನ್ನು ಪ್ರತಿಯೊಬ್ಬ ಮತದಾರನೂ ವಿಚಾರಿಸಬೇಕಾಗುತ್ತದೆ

ಅಸಮತೆಗೆ ಕಾರಣ

ಬಡವರು, ಶ್ರೀಮಂತರೆಂಬ ಬೇಧವನ್ನು ನಾವು ಸಮಾಜದಲ್ಲಿ ಕಾಣುತ್ತಲಿದ್ದೇವೆ. ಅನೇಕ ಶತಮಾನಗಳಿಂದ ಇದು ನಡೆದು ಬಂದಿದೆ ಈ ವ್ಯತ್ಯಾಸದಿಂದಾಗಿ ಕೆಲವೊಂದು ಮಂದಿ ಸುಖದಲ್ಲಿ ತೇಲಾಡುವುದನ್ನು ಬಹು ಜನ ಬಡತನ, ಹಸಿವಿನಿಂದ ನರಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದು ಅನ್ಯಾಯ, ಇದನ್ನು ಹೋಗಲಾಡಿಸಬೇಕು, ಎಂಬುದು ಮೇಲಿನ ಎರಡು ಬಗೆಯ ವಾದಗಳಿಗೂ ಮೂಲ ಕಾರಣವಾದದ್ದು.

ಬಡತನ, ಶ್ರೀಮಂತಿಗಳು ಹೇಗೆ ಉಂಟಾಗುತ್ತವೆ! ಅದರ ಸ್ಥೂಲ ಕಾರಣವೆಂದರೆ– ಸಂಪತ್ತನ್ನು ಹುಟ್ಟಿಸುವುದಕ್ಕೆ ಬೇಕಾದ ಅನು

ಕೂಲತೆಗಳು ಮೊದಲಿನಿಂದಲೂ ಜನಗಳಲ್ಲಿ ವ್ಯತ್ಯಾಸವಾಗಿ ಹಂಚಿ ಹೋಗಿರುವುದು ಕಾರಣ. ಕೆಲವರಿಗೆ ತುಂಬ ಜಮೀನು ಇರುತ್ತದೆ. ಕೆಲವರು ಬಾಡಿಗೆ ಮನೆಯಲ್ಲೇ ನಿಲ್ಲಬೇಕಾಗುತ್ತದೆ. ತುಂಬಾ ಕೃಷಿ, ಜಮೀನು ಇರುವ ಜನ, ತಾವು ಕೆಲಸ ಮಾಡದೆ, ನೆಲವನ್ನು ಬಾಡಿಗೆಗೆ ಕೊಟ್ಟು ಶ್ರೀಮಂತರಾಗುತ್ತಾರೆ. ಬಾಡಿಗೆಗೆ ಕೊಂಡ ಜನ ಬಾಡಿಗೆ ಕೊಟ್ಟು ಉಳಿಯುವ, ಕಾಳು ಸಾಲದೆ ಬಡತನದಿಂದ ನರಳುತ್ತಾರೆ. ಉದ್ಯೋಗ, ಗನಿ ಮೊದಲಾದುವುಗಳಲ್ಲಿ ಸಾವಿರಾರು ಜನರು ಶ್ರಮ ದಿಂದ ದುಡಿದುದರಿಂದ ಬರುವ ಲಾಭವನ್ನು ಕೆಲವರೇ ಹೊಂದುತ್ತಾರೆ. ಗಿರಣಿಯ ಶ್ರಮಗಾರರು, ಗನಿಗಳ ಕೆಲಸಗಾರರು ಬಡವರಾಗಿಯೇ ಉಳಿಯುತ್ತಾರೆ. ಈ ಬಗೆಯ ಆರ್ಥಿಕ ಅಸಮತೆ – ನಮಗೆ ಅನ್ಯಾಯ ವಾಗಿ ಕಾಣುತ್ತದೆ. ಶ್ರೀಮಂತರು ಇರುವ ಸಂಪತ್ತಿನಿಂದ ಲಾಭ ಪಡೆದು ತಮ್ಮ ಉದ್ಯೋಗಗಳನ್ನು ವಿಸ್ತರಿಸಿ, ಇನ್ನೂ ಹೆಚ್ಚಿನ ಸಂಪತ್ತ ನ್ನು ಗಳಿಸುವುದನ್ನು ಕಾಣುತ್ತೇವೆ. ಬಡವರು ಶ್ರೀಮಂತರಾಗುವುದನ್ನು ಕಾಣುವುದಿಲ್ಲ. ಕಂಡರೂ ಬಹು ಕಡಿಮೆ. ಸುಮಾರು ಸೇಕಡಾ ಹತ್ತ ರಷ್ಟು ಜನ ಸಂಪತ್ತುಳ್ಳವರು. ತೊಂಬತ್ತರಷ್ಟು ಸಂಪತ್ತಿಲ್ಲದವರು. ಸೇಕಡಾ ತೊಂಬತ್ತರಷ್ಟು ಇದ್ದವರಿಂದ ಹಣ ಕಸಿದುಕೊಂಡು ಎಲ್ಲರಿಗೂ ಸಮಾನವಾಗಿ ಹಂಚಬೇಕೆನ್ನುವ ತತ್ವ ಯೋಗ್ಯವಾಗಿ ಕಾಣುವುದು ಸಹಜ.

ಹೀಗೆ ಸಮಾನವಾಗಿ ಹಂಚುವುದಕ್ಕೆ ಬರುತ್ತದೆಯೆಂದು ಊಹಿ ಸುವ. ಆದರೆ ಸಂಪತ್ತೆಂಬುದು ನಗದಿ ದುಡ್ಡೇ ಅಲ್ಲ. ವಸ್ತು, ಒಡವೆ, ಸಲಕರಣೆ. ಇವುಗಳಿಂದ ಕೂಡಿದ್ದು. ಹಣ ಇವುಗಳಿಂದ ಆಗುವ ವಸ್ತು. ಇವುಗಳನ್ನು ಕೆಲವನ್ನು ಹಂಚಲು ಬಂದೀತು; ಕೆಲವನ್ನು ಹಂಚಲು ಬರಲಾರದು. ನೆಲವನ್ನು ತೀರ ಹಂಚಿದರೆ ಆಗ ತೀರ ತುಣುಕು ವಿಭಾಗಗಳಾಗಿ, ಸಾಗುವಳಿಗೆ ಅಯೋಗ್ಯವಾಗುತ್ತದೆ. ಗನಿ ಗಳಂತೂ ಮನೆ ಮನೆಯಲ್ಲಿ ಹಂಚುವ ವಸ್ತುಗಳಲ್ಲ. ಗನಿ ಉದ್ಯೋಗ ಮೊದಲಾದುವು ಹಂಚಲು ಬಾರದವು. ಹಂಚಿದರೂ ಒಬ್ಬೊಬ್ಬರು ಅದನ್ನು ನಡೆಯಿಸಿಕೊಂಡು ಹೋಗಲಾರರು. ಕಾರಣ ನಡೆಯಿಸಿ

ಕೊಂಡು ಹೋಗಲು ಬೇಕಾದ ಸಲಕರಣೆಗಳು ಒಬ್ಬೊಬ್ಬನಿಂದ ಕೊಳ್ಳಲಾರದಷ್ಟು ಬೆಲೆಯುಳ್ಳವು. ಈ ಕಾರಣದಿಂದ ಅವನ್ನೆಲ್ಲ ಸಾರ್ವಜನಿಕರೇ ಅಂದರೆ ಸರಕಾರವೇ ನಡೆಯಿಸಿಕೊಂಡು ಹೋಗಬೇಕೆಂಬುದು ಕೆಲವರ ವಾದ. ಮೂಲ ಸ್ವಾಮ್ಯ ಸರಕಾರಕ್ಕೆ. ಉತ್ಪನ್ನವಾದ ಲಾಭ ಎಲ್ಲ ಜನತೆಗೆ ಎಂಬುದು ಇದರ ದೃಷ್ಟಿ.

ಶ್ರೀಮಂತರು ಅತಿ ಶ್ರೀಮಂತರಾಗದಂತೆ ವರಮಾನ ತೆರಿಗೆ, ತಲೆತೆರಿಗೆ ಹಾಕುತ್ತಾರೆ. ಶ್ರೀಮಂತರ ವರಮಾನದಲ್ಲಿ ರೂಪಾಯಿಗೆ ಹತ್ತಾಣೆ ಭಾಗದಷ್ಟು ಸರಕಾರಕ್ಕೆ ಹೋಗುವುದನ್ನು ಕಾಣುತ್ತೇವೆ. ಹದಿನೈದಾಣೆಯಷ್ಟು ಸರಕಾರ ಕಿತ್ತುಕೊಂಡ ಕಾಲವಿದೆ. ಮರಣ ತೆರಿಗೆಯಿಂದ ತಂದೆಯ ಸಂಪತ್ತು ಮಗನ ಕೈಗೆ ಬರುವಾಗ ಸೇಕಡಾ ಹತ್ತರಷ್ಟೋ ಹೆಚ್ಚಿಗೋ ಸರಕಾರಕ್ಕೆ ಹೋಗುತ್ತದೆ. ಶ್ರೀಮಂತರು ಗಳಿಸುವಿಕೆಯಲ್ಲಿ ನಾವೆಣಿಸುವಷ್ಟು ನಿರಂಕುಶರಾಗಿಲ್ಲ. ಅವರು ಕೊಡುವ ತೆರಿಗೆ, ಲಾಭ, ಸಮಾಜಕ್ಕೇನೇ ದೊರೆಯುತ್ತದೆ. ಅವರು ಏರ್ಪಡಿಸುವ ವ್ಯವಸ್ಥೆ, ಸಾಹಸಗಳ ಫಲದಿಂದ ಅವರು ಶ್ರೀಮಂತರಾದರು. ಅವರ ಕಾರ್ಖಾನೆ, ಗಣಿಗಳಲ್ಲಿ ದುಡಿಯುವ ಜನಕ್ಕೆ— ಯೋಗ್ಯ ವಸತಿ, ಸಂಬಳ, ಬೇಕಾದರೆ ನಿವೃತ್ತಿ ವೇತನ, ವಿಶ್ರಾಂತಿಗಳನ್ನು ಕಡ್ಡಾಯವಾಗಿ ಕಲ್ಪಿಸುವ ಪ್ರಯತ್ನ ಮಾಡಬೇಕೇ ಹೊರತು ವ್ಯಕ್ತಿ 'ಪ್ರಯತ್ನದಿಂದ ಸಂಪತ್ತನ್ನು ಹೆಚ್ಚಿಸುವ ಕೆಲಸ ಮಾಡುವುದೇ ತಪ್ಪು' ಎಂಬುದು ತಪ್ಪಲ್ಲವೇ? ಅದರಿಂದ ಉತ್ಪಾದನೆ ತಗ್ಗಲಾರದೆ? ಎಂಬ ವಾದವೂ ಇದೆ. ಈ ಮಾತು ಹುರುಳಿಲ್ಲದಲ್ಲ. ನಮ್ಮ ದೇಶದಲ್ಲಾಗಲೀ, ಅನ್ಯ ದೇಶಗಳಲ್ಲಾಗಲೀ ಶ್ರೀಮಂತರ ಇತಿಹಾಸವನ್ನು ನೋಡಿದರೆ, ತಲೆಮಾರುಗಳಿಂದಲೂ ಶ್ರೀಮಂತರಾಗಿಯೇ ಉಳಿದು ಬಂದವರ ಸಂಖ್ಯೆ ತೀರ ಕಡಿಮೆ. ಕೂಲಿಗಳಾಗಿ ಜೀವನ ತೊಡಗಿ, ತುಂಬ ಧನಿಕರಾದವರನ್ನು ನಾವು ಕಾಣುತ್ತಲಿದ್ದೇವೆ. ಎರಡು ಮೂರು ತಲೆಮಾರುಗಳಲ್ಲಿ ಶ್ರೀಮಂತರಾದವರನ್ನು ಕಾಣುತ್ತಿದ್ದೇವೆ. ಇದೆಲ್ಲ ಕೇವಲ ಒಡೆತನ, ಅನ್ಯಾಯಗಳಿಂದಲೇ ಆಯಿತು— ಎಂಬುದು ವಿವಾದಾಸ್ಪದ ಸಂಗತಿ! ವ್ಯಕ್ತಿಯು ಸ್ವಾರ್ಥಕ್ಕಾಗಿ ಅಂದರೆ, ತನ್ನ ಮತ್ತು

ಕುಟುಂಬದ ಸಲುವಾಗಿ ಹೋರಾಡುವ ಜೇಪಿ ತಾನು ದುಡಿದುದು ತನಗೆ ಉಳಿಯುತ್ತದೆ ಎಂಬ ಆಶೆ ಅವನಿಗಿಲ್ಲದ್ದಾದರೆ, ಆತ ಅಷ್ಟೊಂದು ಚೆನ್ನಾಗಿ ದುಡಿಯಲಾರ. ಇನ್ನೊಬ್ಬರಿಗಾಗಿ ದುಡಿಯುವುದು, ಅದು ಒಡೆಯನಿಗಾಗಿ ಇರಲಿ, ಸರಕಾರಕ್ಕಿರಲಿ, ತನಗೆ ಅದರ ಹೆಚ್ಚಿನ ಫಲ ದೊರೆಯುವುದಿಲ್ಲ ಎಂದು ತಿಳಿದಿರುವಷ್ಟು ಕಾಲ ಆತ ಮನಃಪೂರ್ವಕ ವಾಗಿ ಕೆಲಸ ಮಾಡಲಾರ ಎಂಬುದು ನಿಜವೇ. ಸಂಪತ್ತು ಹೆಚ್ಚಬೇಕಾದರೆ, ವ್ಯಕ್ತಿಗೆ ತನ್ನ ಕೆಲಸಕ್ಕೆ ತಕ್ಕ ಪ್ರತಿಫಲ, ಲಾಭ ದೊರೆಯುತ್ತದೆ ಎಂಬ ಆಸೆ ಉಳಿಯಬೇಕು. ಆ ಭರವಸೆಯನ್ನು ಆರ್ಥಿಕ ಏರ್ಪಾಡು ಒದಗಿಸಬೇಕು.

ರಾಷ್ಟ್ರೀಕರಣ

ಈಗಾಗಲೇ ರಾಷ್ಟ್ರೀಕರಣ ಗೊಳಿಸಿರುವ ಕೆಲವೊಂದು ಉದ್ಯೋಗ ಗಳನ್ನು ಕಂಡರೆ, ನಮಗೆ ಬೇರೆ ಕೆಲವು ಅಂಶಗಳೂ ತಿಳಿಯುತ್ತವೆ. ನಮ್ಮ ದೇಶದ ವಿಚಾರ ಎತ್ತಿಕೊಳ್ಳುವ ನಮ್ಮಲ್ಲಿನ ಟಪ್ಪಾಲು ಮತ್ತು ರೈಲುಖಾತೆಗಳು ರಾಷ್ಟ್ರೀಯ ಸ್ವಾಮ್ಯದ ಕೆಳಗೆನೆ ಇವೆ. ಅಲ್ಲಿ ದುಡಿಯು ತ್ತಿರುವ ಸೇವಕರಿಗೆ, ನಮ್ಮ ದೇಶದ ಕೃಷಿಕನಿಗೂ, ಅವರ ಸಮಾನ ವರ್ಗದ ಇತರ ಅನೇಕ ಸರಕಾರಿ ಉದ್ಯೋಗಿಗಳಿಗೂ ದೊರೆಯುವ ವೇತನಕ್ಕಿಂತ ಹೆಚ್ಚಿನ ವೇತನ ದೊರೆಯುತ್ತದೆ. ಆದರೂ— ಈ ಇಲಾ ಖೆಗಳ ನೌಕರರು ರಾಷ್ಟ್ರದ ನೌಕರರಾದರೂ, ರಾಷ್ಟ್ರದ ಮಿಕ್ಕ ಜನರ ಹಿ ತವನ್ನು ಅಲಕ್ಷಿಸಿ, ಅವರು ತಮಗಿಂತ ಕಡಿಮೆ ಸಂಪತ್ತಿನವರು ಎಂಬು ದನ್ನು ಮರೆತು, ತಮಗಿಂತ ಹೆಚ್ಚಿಗೆ ಸಂಬಳ ಪಡೆಯುವ ಜನರ ಕಡೆಗೆ ಬೆರಳು ತೋರಿಸಿ "ಸಂಪು" ಹೂಡುತ್ತಿರುವುದನ್ನು ಕಾಣುತ್ತಿದ್ದೇವೆ. ಕಮ್ಯುನಿಸ್ಟ ಪಂಥದವರೇ ಈ ಸಂಪಿಗೆ ಬೆಂಬಲ ಕೊಡುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಅತೃಪ್ತಿ ಇರುವಷ್ಟುದಿನ ಈ ಇಲಾಖೆಯ ಸೇವಕರು ಮನಃಪೂರ್ವಕವಾಗಿ ಸೇವೆ ಸಲ್ಲಿಸುತ್ತಾರೆ— ಎಂಬುದು ನಂಬಿಕೆಯ ಮಾತಲ್ಲ. ರಾಷ್ಟ್ರಸ್ವಾಮ್ಯವುಳ್ಳ ರಷ್ಯಾದೇಶದಲ್ಲಿ— ಯಾವ ಬಗೆಯ ಸಂಪು, ಇಲ್ಲವೆ ವ್ಯಕ್ತಿ ವಿರೋಧಕ್ಕೂ ಎಡೆಯಿಲ್ಲ. ವಿರೋಧ ತೋರಿಸಿ

ದರೆ ದಂಡನೆಗೆ ಗುರಿಯಾಗ ಬೇಕಾದೀತು ಎಂಬುದನ್ನು ನಮ್ಮ ಕಮ್ಯುನಿಸ್ಟ ಜನ ಮರೆತೇ ಬಿಡುತ್ತಾರೆ. ಈಗ ಸಂಪು ಹೂಡಿ, ಸರಕಾರವನ್ನು ಬೆದರಿಸಿ ಅದನ್ನು ಕಮ್ಯೂನಿಸ್ಟರೇ ವಶಪಡಿಸಿಕೊಂಡರೆಂದು ತಿಳಿಯುವ. ನಾಳೆಯ ದಿನ ಎಲ್ಲರಿಗೂ ಅನ್ನ ಹಾಕಬೇಕಾಗಿ ಬರುವ ಅವರ ಸರಕಾರ, ಇದ್ದ ಸಂಪತ್ತನ್ನು ಹಂಚಬೇಕಾಗಿ ಬಂದ ಕಾಲದಲ್ಲಿ, ಇವರ ವೇತನ ಹೆಚ್ಚಿಸುವ ಬದಲು ಕಡಿಮೆಮಾಡಬೇಕಾಗಿಯೂ ಬಂದೀತು ಎಂಬುದನ್ನು ಮರೆಯಬಾರದು.

ಫ್ರಾನ್ಸ್ ದೇಶದ ರಾಷ್ಟ್ರ ಸಾಮ್ಯವುಳ್ಳ ಎಷ್ಟೋ ಕಾರ್ಖಾನೆಗಳಲ್ಲಿ ಕೆಲಸಗಾರರಲ್ಲಿ ವೇತನಕ್ಕೆ ತಕ್ಕ ಸೇವೆ ಸಲ್ಲಿಸುವ ಬುದ್ಧಿಯೇ ಹೋಗಿ ರಾಷ್ಟ್ರೀಕರಿಸಿದ ಉದ್ಯೋಗಗಳು ಸರಕಾರಕ್ಕೆ ಲಾಭ ತರುವ ಬದಲು ನಷ್ಟ ಉಂಟು ಮಾಡುತ್ತಿರುವುದನ್ನು ಕಾಣಬಹುದು. ವ್ಯಕ್ತಿಯ ಅಭಿವೃದ್ಧಿ, ಪ್ರಯತ್ನಗಳಿಗೆ ತಕ್ಕ ಬಹುಮಾನದ ಆಸೆ ಇಲ್ಲದೆ ಹೋದರೆ, ಅವನೇಕೆ ಶ್ರಮ ಪಡಬೇಕು ಎಂಬುದನ್ನು ನಾವು ಗಮನಿಸಲೇ ಬೇಕಾದ ಪ್ರಶ್ನೆ.

ಎಲ್ಲರೂ ಸಮಾನರೇ?

ಪ್ರತಿಯೊಬ್ಬ ಪ್ರಜೆಯೂ ಸಮಾನನು ಎಂಬ ತತ್ವವನ್ನು ಒಪ್ಪಿ, ಅವನಿಗೆ ಮತದಾನದ ಹಕ್ಕನ್ನು ಕೊಟ್ಟದ್ದಾರೆ ಅವನ ತಿಳುವಳಿಕೆಯ ಮಿತಿಯಿಂದ, ಈ ಹಕ್ಕು ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತಲಿಲ್ಲ ಎಂಬುದನ್ನು ಹಿಂದೆ ಹೇಳಿದ್ದಾಯಿತು. ಈಗ ಆರ್ಥಿಕ ಸಮತೆಯ ವಿಚಾರ ಮಾತನಾಡುವ. ಎಲ್ಲ ಜನ ಪ್ರಜೆಗಳಲ್ಲೂ ಶರೀರ ಶಕ್ತಿ, ದುಡಿಯುವ ಶಕ್ತಿ, ಬುದ್ಧಿ ಶಕ್ತಿ, ಸಂಶೋಧನೆ ಶಕ್ತಿ ಮೊದಲಾದುವು ಸಮಾನವಾಗಿರುತ್ತದೆಯೇ? ಎಲ್ಲ ಬಗೆಯ ಉದ್ಯೋಗಗಳೂ ಸಮಾನವಾದ.ದೇ? ಒಂದೇ ಉದ್ಯೋಗದಲ್ಲಿ ಬೇರೆಬೇರೆ ಕೆಲಸಗಳನ್ನು ಮಾಡುವ ಜನವನ್ನು ತೀರ ಸಮಾನವಾಗಿ ಎಣಿಸುವುದು ಸಾಧ್ಯವೆ? ಎಂಬುದನ್ನೆಲ್ಲ ನಾವು ವಿಚಾರಿಸಬೇಡವೇ? ಗನಿಯ ಕೆಲಸಗಾರನಿಗೆ, ಮಣ್ಣು ಹೊರುವವನಿಗೆ. ಜೀವನ ತೊಡಗಲು ಹೆಚ್ಚಿಗೆ ಕಲಿಯಬೇಕಾದ ಅಂಶವಿಲ್ಲ

ಮುಂದೆ ಬರಿಯ ಅಭ್ಯಾಸದಿಂದ ಆತ ಕೆಲಸ ನಿರ್ವಹಿಸಬಲ್ಲ. ಸಹುಷ್ಣತೆ ಮತ್ತು ಶರೀರ ಬಲ ಇವೆರಡೂ ಇದ್ದರೆ ಆತ ಕೆಲಸ ಮಾಡಬಲ್ಲ; ಇಲ್ಲ ವಾದರೆ ಅದನ್ನು ನಿರ್ವಹಿಸಲಾರ. ಇವನಿಗೂ ಒಂದೇ ಸಂಬಳ. ಅವನ ಮೇಲೆ ಎಂಜಿನಿಯರನಾಗಿ ನಿಂತು, ಮನೆ, ಸೇತುವೆ, ಕಟ್ಟಿಸುವವನಿಗೂ ಒಂದೇ ಸಂಬಳ ಕೊಡುವುದು ನ್ಯಾಯವಾದೀತೇ? ಕೊಡುವಲ್ಲಿ–ಅವ ನೇತಕ್ಕೆ ಹದಿನಾರು ಹದಿನೆಂಟು ವರ್ಷಗಳ ಕಾಲ ಶಾಲೆ ಕಾಲೇಜುಗಳಿಗೆ ಹೋಗಿ, ಶಿಕ್ಷಣ ಪಡೆದು, ಬುದ್ಧಿ ಶ್ರಮದಿಂದ ದುಡಿಯಲು ಬರುತ್ತಾನೆ? ಹೀಗೆ ಒಂದೊಂದು ಉದ್ಯೋಗವನ್ನು ಕಲಿಯುವುದಕ್ಕೆ ತಿಂಗಳಿನಿಂದ ಹಿಡಿದು ವರ್ಷ ವರ್ಷಗಳ ತನಕ ಶಿಕ್ಷಣ ಬೇಕಾಗುವುದುಂಟು. ಅಂಥ ಪೂರ್ವ ತಯಾರಿಗಳಿಗೆ ಬೇಕಾದ ಶ್ರಮ, ಹಣ ವ್ಯಯ ಮಾಡಲು ವ್ಯಕ್ತಿಗೆ ಹೆಚ್ಚಿನ ಭರವಸೆ ಬೇಕಾಗುತ್ತದೆ. ರಶ್ಯದೇಶದಲ್ಲಿಯೂ ಗವರ್ನ ರನ ಸಂಬಳ, ಕೂಲಿಕಾರನ ಸಂಬಳ, ಎಂಜಿನಿಯರನ ಸಂಬಳ ಅವನ ವನ ಬುದ್ಧಿ ಕೌಶಲ್ಯವನ್ನು ಹೊಂದಿಕೊಂಡೇ ನಡೆಯುತ್ತಿದೆ. ಸರಿಸಮ ವೇತನ ಎಂಬುದು ಸರಿತಮ ಗಂಟೆ, ದಿನಗಳ ಕೆಲಸಗಳ ಮೇಲೆ ಹೊಂದಿ ರುವುದು ಸಾಧ್ಯವಿಲ್ಲ. ಸಾವಿರ ಕೂಲಿಗಳ ದುಡಿತವನ್ನು ಒಬ್ಬ ಸಂಶೋ ಧಕ, ತನ್ನ ಬುದ್ಧಿ ಬಲದಿಂದ ಕೆಲವು ಗಂಟೆಗಳಲ್ಲಿ ನಿರ್ಮಿಸಿದ ಒಂದು ಯಂತ್ರ ಮಾಡುವಾಗ ಅವನೂ ಕೂಲಿಯೂ ಒಂದೇ ಎಂದು ತಿಳಿಯು ವುದು ಸಮಾನವಾದೀತೇ?

ಕನಿಷ್ಠ ನೀತಿ

ನಾವು ಒಪ್ಪಬಹುದಾದ ತತ್ವವೆಂದರೆ ಯಾವ ಬಗೆಯ ಸರಕಾರ ದಲ್ಲೂ ಜನರ ಕನಿಷ್ಟ ಆವಶ್ಯಕತೆಗಳು, ಅಂದರೆ ಅನ್ನ, ಬಟ್ಟೆ, ವಸತಿ ಸೌಕರ್ಯಗಳು ದೊರಕುವಂತಿರಬೇಕು ಎಂಬುದನ್ನು. ಇನ್ನು ಪ್ರತಿ ಯೊಬ್ಬನೂ ತನ್ನ ತನ್ನ ಬುದ್ಧಿಶಕ್ತಿಯನ್ನು ಶಿಕ್ಷಣದಿಂದ ಬೆಳೆಯಿಸಿ ಕೊಳ್ಳಲು ಬೇಕಾದಂತಹ ಅವಕಾಶವಿರಬೇಕೆಂದು. ಇಂಥ ಅವಕಾಶವಿದೆ ಎಂದ ಮಾತ್ರಕ್ಕೆ ಎಲ್ಲರೂ ಎಂಜಿನಿಯರಾಗಲಾರರು, ವೈದ್ಯರಾಗ ಲಾರರು, ಸಂಶೋಧಕರಾಗಲಾರರು, ಕಲಾವಿದರಾಗಲಾರರು. ಅನರಸು

ಅಭಿರುಚಿ, ಬುದ್ಧಿಶಕ್ತಿ, ಪರಿಶ್ರಮಗಳನ್ನು ಹೊಂದಿಯೇ ಅವರ ಜೀವನ ರೂಪಿತವಾಗಬೇಕಾಗುತ್ತದೆ. ಇವೆಲ್ಲವೂ ವ್ಯಕ್ತಿ ಪ್ರಯತ್ನಕ್ಕೆ ನಾವು ಕೊಡುವ ಅವಕಾಶ, ಪ್ರೋತ್ಸಾಹವನ್ನು ಹೊಂದಿರುತ್ತದೆ. ವ್ಯಕ್ತಿ ಪ್ರಯತ್ನದಿಂದ ಶ್ರೀಮಂತರು, ಬಡವರು ಎಂಬ ಭೇಧ ಉಂಟಾಗುತ್ತದೆ ಎಂಬ ಒಂದೇ ಕಾರಣದಿಂದ, ಆ ತತ್ವವನ್ನೇ ಮನ್ನಿಸದೆ ಹೋದರೆ, ಆಗಲೂ ದೇಶಕ್ಕೆ ಹಾನಿಯಿದೆ. ಪ್ರಯತ್ನಕ್ಕೆ ತಕ್ಕ ಫಲವಿಲ್ಲವೆಂದು, ಜೀವನದ ಮಟ್ಟ ಹೆಚ್ಚಿಸಿಕೊಳ್ಳುವ ಅವಕಾಶವಿಲ್ಲವೆಂದಾಗ ಹಲವು ಜನ, ವಿಶೇಷ ಪ್ರಯತ್ನಮಾಡದೆ ಕುಳಿತರು. ಸಂಪತ್ತಿನ ಸ್ವಾಮ್ಯ ರಾಷ್ಟ್ರದ ಕೈಯಲ್ಲಿದ್ದರೂ ಈ ಮನೋವೃತ್ತಿ ಬೆಳೆಯಲು ಅವಕಾಶವಿದ್ದರೆ, ಆಗ ದೇಶದ ಸಂಪತ್ತು ಹೆಚ್ಚಬೇಕು ಹೇಗೆ? ವ್ಯಕ್ತಿ ವ್ಯಕ್ತಿಗೆ ಸಮಾನನು ಎಂಬ ತತ್ವವನ್ನು ವಿಪರೀತ ಹಿಗ್ಗಿಸಿದರೆ ಅರ್ಥವಿಲ್ಲದ ತತ್ವವೇ ಆಗುತ್ತದೆ ರಾಷ್ಟ್ರದಲ್ಲಿ ಹಣದ ಅಡಚಣೆಯಿಂದ ಜನಗಳು ತಮ್ಮ ಅಭಿರುಚಿ, ಬುದ್ಧಿಶಕ್ತಿಗಳನ್ನು ಬೆಳೆಯಿಸಿಕೊಳ್ಳುವುದಕ್ಕೆ ತಡೆ ಬರಬಾರದು, ಎಂಬ ವಿಚಾರದಲ್ಲಿ—ಎಲ್ಲರ ಸಹಾನುಭೂತಿ ಇದೆ. ಅದಕ್ಕೂ ಮೀರಿ ವ್ಯಕ್ತಿಗೆ ಬೆಳವಣಿಗೆಗೆ ಸಾಕಷ್ಟು ಭರವಸೆ ದೊರೆಯಬೇಕು; ಲಾಭದ ಆಸೆ ಇರಬೇಕು.

ರಾಷ್ಟ್ರ ಸ್ವಾಮ್ಯ

ರಾಷ್ಟ್ರ ಸ್ವಾಮ್ಯದ ತತ್ವವನ್ನು ಅಖಂಡವಾಗಿ ಆಚರಿಸಹೋದರೆ ಏನಾದೀತು ಎಂಬುದನ್ನು ನಾವು ಪರಿಶೀಲಿಸಬೇಕು. ಸಾರಿಗೆ,ವಸತಿ,ಗನಿ, ಜಮೀನು ಪ್ರತಿಯೊಂದೂ ಸರಕಾರದ ವಶವಿರುತ್ತದೆ. ಜನಕ್ಕೆ ತಮ್ಮದೆಂಬ ಬದುಕೇನೇ ಉಳಿಯುವುದಿಲ್ಲ. ಇದು ಹಿತವೇ? ಸಂಪತ್ತು ಹುಟ್ಟುವುದು ಸಾಧನಗಳಿಂದ. ಸಾಧನ ಉಪಯೋಗಿಸಿ ಬುದ್ಧಿಶ್ರಮಗಳಿಂದ ವಸ್ತುಗಳನ್ನು ನಿರ್ಮಾಣಮಾಡುತ್ತೇವೆ. ಆಹಾರ ನಿರ್ಮಾಣಮಾಡುತ್ತೇವೆ. ಅದೇನೆ ಸಂಪತ್ತು. ತನ್ನ ಮನೆಯೇ ತನ್ನದಲ್ಲ, ತಾನು ದುಡಿಯುವ ನೆಲವೂ ತನ್ನದಲ್ಲ, ಎಲ್ಲವೂ ರಾಷ್ಟ್ರದ್ದು ಎನ್ನುವಾಗ—ವ್ಯಕ್ತಿಗೆ ಏನು ಆಸೆ ಉಳಿಯುತ್ತದೆ? ಸಂಪತ್ತು ಹೆಚ್ಚಬೇಕೆಂಬ ಆಸೆ ಏಕೆ ಉಳಿಯಬೇಕು? ಅಲ್ಲದೆ ವ್ಯಕ್ತಿ

ತನ್ನ ಇಷ್ಟ ಬಂದ ಊರಿನಲ್ಲಿ ಬದುಕಬೇಕು, ತನ್ನ ಆಪ್ತರಿಗೆ ಹತ್ತಿರ ವಾಗಿರಬೇಕು ಎಂಬ ಆಸೆಯಿಂದ, ಅನ್ನ ಬಟ್ಟೆಗಳು ದೊರೆಯುತ್ತವೆ ಎಂಬೊಂದು ಆಸೆಯಿಂದ ಸರಕಾರ ಹೇಳಿದ ಊರಿಗೆ ಹೋಗಲು, ಹಾಕಿದ ಉದ್ಯೋಗಕ್ಕೆ ಸೇರಲು, ಬಯಸುತ್ತಾರೆಯೇ? ಹಾಗಿರಬೇಕಾದದ್ದು ಒಂದು ದಿನವಲ್ಲ ಎರಡು ದಿನಗಳಲ್ಲ ಇಡಿಯ ಆಯುಷ್ಯಕಾಲ. ಇಂಥ ಬಾಳಿನಲ್ಲಿ ಸವಿಯುಂಟು? ವ್ಯಕ್ತಿಗೆ, ಹಣ, ಅನುಕೂಲತೆ ಎಷ್ಟು ಬೇಕೋ ಅಷ್ಟೇನೇ ಬೇಕಾದ ಇತರ ವಸ್ತುಗಳಿವೆ. ತನಗೆ ಹಿತವಾಗುವ ಆವರಣ, ತನಗೆ ಪ್ರಿಯವಾದ ಉದ್ಯೋಗ, ತನ್ನ ಜನಗಳೊಡನೆ ಇರಬೇಕೆಂಬ ಆಸೆ, ಕೆಲಸದಲ್ಲಿ ಬೇಸರ ಬಂದಾಗ ವಿಶ್ರಮಿಸುತ್ತೇನೆ, ಅಲೆದಾಡುತ್ತೇನೆ ಎಂಬ—ಸ್ವಾತಂತ್ರ್ಯ, ಇವಿಲ್ಲದಂಥ ವ್ಯಕ್ತಿಯ ಬಾಳು ಬರಿದು ನೂರಾರು ಜನ ಹೊಟ್ಟೆಗಿಲ್ಲದೆ ನರಳುವುದಕ್ಕಾದರೂ ಸಿದ್ಧರಿದ್ದಾರೆ; ಈ ಬಗೆಯ ಸರ್ವಸ್ವಾತಂತ್ರ್ಯವನ್ನು ರಾಷ್ಟ್ರವೆಂಬ ಸ್ವಾಮಿಗಾಗಿ ಕಳೆದುಕೊಳ್ಳಲು ಸಿದ್ಧರಿಲ್ಲ. ಎಷ್ಟೋ ಬಡಮಂದಿ, ನಾಲ್ಕು ದಿನ ಕೂಲಿ ಗಳಿಸಿ, ಇನ್ನು ನಾಲ್ಕು ದಿನ ಕೆಲಸಮಾಡದೆ, ಕೆಲಸ ಇದ್ದರೂ ಹೋಗದೆ, ಕುಳಿತಿರುವುದನ್ನು ಕಾಣುತ್ತೇವೆ. ಏತಕ್ಕೆ —ಎಂದು ವಿಚಾರಿಸಬೇಡವೇ? ದುಡಿತದಿಂದ ಬೇಸರ ಬಂದು, ನಾಲ್ಕು ದಿನ ಹಾಯಾಗಿರಬೇಕು ಎಂಬ ಆಸೆಯಿಂದ. ಬರಿಯ ಅನ್ನವಸ್ತ್ರಗಳೇನೆ ಜೀವನದ ಪೂರ್ಣ ಪ್ರಶ್ನೆಗಳಲ್ಲ. ಆರ್ಥಿಕ ಸಮತೆಗಳನ್ನು ಬಿಟ್ಟು ನೂರಾರು ಪ್ರಶ್ನೆಗಳು ಮನುಷ್ಯನಿಗಿವೆ. ಅವನ್ನು ಅಲ್ಲಗಳೆಯುವ ಅಖಂಡ ರಾಷ್ಟ್ರ ಸಾಮ್ಯವಾದ ಮಾನವನ ಈ ಕಲ್ಯಾಣಕ್ಕೆ, ಮನುಷ್ಯನಲ್ಲಿರುವ ಅತ್ಯುತ್ತಮ ಗುಣಗಳನ್ನು ವಿಕಸಿಸುವುದಕ್ಕೆ ಸಹಾಯ ಮಾಡಲಾರದು.

ಕಾರ್ಯದಲ್ಲಿ ರಾಷ್ಟ್ರ ಸಾಮ್ಯ

'ರಾಷ್ಟ್ರ' ಜನರದ್ದು ಎಂದ ಮಾತ್ರಕ್ಕೆ ಅದರ ಸಾಮ್ಯ ಜನಗಳದ್ದಾಗುವುದಿಲ್ಲ. ಜನಕ್ಕೆ ತಮ್ಮ ಅಭಿಪ್ರಾಯ ಯಾವುದೇ ಇರಲಿ, ಅದನ್ನು ಹೇಳುವ ಅವಕಾಶವಿರಬೇಕು ತಮಗೆ ಯೋಗ್ಯವೆಂದು ಕಂಡುಬರುವ ರಾಜಕೀಯ ಧೋರಣೆಗೆ ಬೆಂಬಲ ಕೊಡುವ ಅವಕಾಶವಿರಬೇಕು. ಹಾಗೆ ಬೆಂಬಲ

ಕೊಡಬೇಕಾದರೆ, ವಿವಿಧ ಪಂಗಡಗಳಿರುವ ಅವಕಾಶ ಬೇಕು. ಪ್ರತಿಭಟಿ ಸಹಿಸದ ಒಂದೇ ಪಂಗಡ ನಡೆಯಿಸುವ ಸರಕಾರ–ಎಂದೂ ಪ್ರಜಾ ಪ್ರಭುತ್ವದ ಸರಕಾರವೆಂದಾಗಲೀ, ಬಹುಮತದ ಸರಕಾರವೆಂದಾಗಲೀ ಆಗುವಂತಿಲ್ಲ. ಇನ್ನೊಂದು ಅಭಿಪ್ರಾಯ ಪಾರ್ಲಿಮೆಂಟಿನಲ್ಲಿ ಮಾತ್ರವಲ್ಲ, ಖಾಸಗಿಯಿಂದ ಪತ್ರಿಕೆಗಳ ಮೂಲಕ ವ್ಯಕ್ತವಾಗಲು ಅವಕಾಶವಿಲ್ಲದ ನಾಡಿನಲ್ಲಿ, ಜನರ ಇಷ್ಟದಂತೆ ಸರಕಾರ ನಡೆಯುತ್ತದೆ ಅನ್ನುವ ಬದಲು, ಸರಕಾರದ ಇಷ್ಟದಂತೆ ಜನ ನಡೆಯಬೇಕಾಗುತ್ತದೆ ಎನ್ನಬಹುದು.

ಸರಕಾರ ಯಾರದು?

ಸರಕಾರ ಎಂದರೆ ಇಂಥಲ್ಲಿ ಅದರ ಸಂಚಾಲಕರಾದ ವರಿಷ್ಠ ಮಂತ್ರಿಗಳು ದೊಡ್ಡದೊಡ್ಡ ಇಲಾಖೆಗಳಲ್ಲಿರುವ ಪ್ರಮುಖ ಆಫೀಸರರು. ಇವರೆಲ್ಲರೂ ಸ್ವಾರ್ಥಲೇಶವಿಲ್ಲದ ಜನರಾಗಿರಬೇಕಿಲ್ಲ. ತಮ್ಮ ಪದವಿ ಯನ್ನು ಕಾಯ್ದುಕೊಂಡು ಇನ್ನೂ ಮೇಲಕ್ಕೇರುವ ಹಂಬಲವಿರುವುದು ಸ್ವಾಭಾವಿಕ. ಅಂಥವರ ಕೈಯಲ್ಲಿ ಅಂಕುಶ ಇರುತ್ತದೆ. ಸೇನೆ, ಪೋಲೀಸುಗಳ ಬಲ ಇರುತ್ತದೆ. ಅಂಥವರು ತಮ್ಮನ್ನು ಕುರಿತಾದ ವಿಮರ್ಶೆಯನ್ನು ಹುಟ್ಟುವಲ್ಲೇ ಮುರಿಯುವುದು ತೀರ ಸುಲಭ. ಜನ ಹಿತ ಆಗಲಿ, ಆಗದಿರಲಿ, ತಮ್ಮ ಸ್ವಾರ್ಥಕ್ಕಾಗಿ ಮೇಲಿನವರನ್ನು ಒಲಿಸಿ ಕೊಳ್ಳುವುದಕ್ಕಾಗಿ, ತಮ್ಮ ಕೆಳಗಿನವರನ್ನು ಬೇಕಾದಂತೆ ದಣಿಸಿ, ದುಡಿಸಿ ಕೊಂಡು, ರಾಷ್ಟ್ರಹಿತದ ಸೋಗು ಹಾಕುವುದು ತೀರ ಸಾಧ್ಯ. ಪ್ರಜಾ ಪ್ರಭುತ್ವಗಳಲ್ಲಿ, ಸರಕಾರ ಎಂಬ ಯಂತ್ರ ಬೇರೆಯಾಗಿದೆ. ಅದರ ಮೇಲ್ವಿಚಾರಣೆ ನಡೆಯಿಸುವುದಕ್ಕೆ ಇರುವ ಜನ ಬೇರೆಯೇ ಆಗಿದ್ದಾರೆ. ಆ ಜನ ಪರಸ್ಪರ ಭೀತಿಯಿಂದ ಇರಬೇಕಾಗುವ ಅವಕಾಶವಿಲ್ಲ. ಕಮ್ಯುನಿಸ್ಟ ರಾಷ್ಟ್ರಗಳಲ್ಲಿ ಇವರೆಲ್ಲರೂ ಒಂದೇ ಗುಂಪಿಗೆ ಸೇರುವವರು. ಹೀಗಾಗಿ ಸರಕಾರವೆಂಬ ಯಂತ್ರವೇ ಯಾವತ್ತು ಜನ ಜೀವನವನ್ನು ಅಧಿಕರಿಸುವ ಯಂತ್ರವಾಗುತ್ತದೆ. ತನ್ನ ಶ್ರೇಯಸ್ಸಿಗೆ, ತನ್ನ ಬಲ ಹೆಚ್ಚಿಸಿಕೊಳ್ಳುವುದಕ್ಕೆ ದುರ್ಬಲ ಜನರ ಮೇಲೆ ಅಂಥ ಸರಕಾರ ಎಂತಹ ಕ್ರಮವನ್ನು ತೆಗೆದುಕೊಳ್ಳಬಹುದು. ಇದನ್ನು ತಡೆಯುವ ಶಕ್ತಿ

ಜನರಿಗಿಲ್ಲ. ಈ ಬೆದರಿಕೆಯಿಂದಾಗಿಯೇ ಅನೇಕ ದೇಶಗಳಲ್ಲಿ ಶ್ರಮಗಾರರು, ರೈತರು, ಬಹು ಸಂಖ್ಯಾತರಾಗಿದ್ದರೂ, ಈ ಬಗೆಯ ಸರಕಾರವನ್ನು ತಮ್ಮ ಅಸಂಖ್ಯಾತ ಓಟುಗಳ ಬಲದಿಂದ ಪಡೆಯುವುದು ಸಾಧ್ಯವಿದ್ದರೂ ಅವರು ಹಾಗೆ ಮಾಡುತ್ತಲಿಲ್ಲ. ಇಂಗ್ಲೆಂಡಿನಲ್ಲೂ, ಅಮೇರಿಕದಲ್ಲೂ ಸೇಕಡಾ ತೊಂಬತ್ತರಷ್ಟು ಓಟಿನ ಅಧಿಕಾರ ಬಡ ಜನರ ಕೈಯಲ್ಲಿದೆ. ಅವ್ಯವಸ್ಥಿತರಾದ ಬಡ ಜನರೂ ಅಲ್ಲ ಅವರು ಬದಲು Trade Union ಸಂಸ್ಥೆಗಳಂತಹ ವ್ಯವಸ್ಥಿತ ಸಂಗಡಗಳ ಸದಸ್ಯರು— ಅಂತಹ ಜನ ಪಾರ್ಲಿಮೆಂಟ್ ಉರುಳಿಸಿ ಒಂದೇ ದಿನದಲ್ಲಿ ತಮ್ಮ ಕೈಗೆ ಸರಕಾರ ತೆಗೆದುಕೊಳ್ಳುವುದು ಸಾಧ್ಯ. ಯಾಕೆ ಅವರು ಹಾಗೆ ಮಾಡುತ್ತಲಿಲ್ಲ? ಏನು ತಡೆ— ಎಂಬುದನ್ನು ನಾವು ವಿಚಾರಿಸಬೇಡವೆ? ಕೂಲಿಗಾರರೆಲ್ಲ ಒಂದುಗೂಡಿ ಬಂಡುವಾಳಗಾರರಿಂದ ಹೆಚ್ಚಿನ ವೇತನ ಅನುಕೂಲತೆ ಕಸಿಯುವಷ್ಟು ಸಾಧ್ಯತೆ ನಾಳೆ ರಾಷ್ಟ್ರ ಸ್ವಾಮ್ಯ ಬಂದ ಮೇಲೆ ಬರಲಾರದು. ಅಲ್ಲಿ ಮುಷ್ಕರ ಹೂಡುವ ಬೆದರಿಕೆ ಯಾರಿಗೂ ತೋರಿಸುವಂತಿಲ್ಲ. ಆಗ ತಮಗಿರುವ ಅವಕಾಶಕ ಅಧಿಕಾರ, ಸ್ವಾತಂತ್ರ್ಯ ಹೆಚ್ಚುವ ಬದಲು ಕಡಿಮೆಯಾಗುವ ಸಂಭವವೇ ಹೆಚ್ಚು. ಬರಿಯ ಆರ್ಥಿಕ ಸಮಾನತೆಯೊಂದೇ ಆದರ್ಶವೇ ಅವರನ್ನು ಬಾಧಿಸುತ್ತಲಿಲ್ಲ. ಅವರು ಈಗಿರುವ ಸ್ಥಿತಿಯಲ್ಲೇ ಸ್ವಾರ್ಥ ಸಾಧನೆಗೆ ಹೆಚ್ಚಿನ ಅವಕಾಶವಿದೆ, ತಮ್ಮ ಸಂಘ ಶಕ್ತಿಯಿಂದ ಲಾಭ ಪಡೆಯುವ ಅವಕಾಶವಿದೆ ಎಂದು ಅವರು ಬಲ್ಲರು, ನಮ್ಮ ದೇಶದ ಮತದಾರರು ಈ ವಾದದ ಸಾಧಕ ಬಾಧಕಗಳನ್ನು ತಿಳಿಯುವುದು ಒಳ್ಳೆಯದು.



ಈ ವರೆಗೆ ಪ್ರಕಟವಾದ 'ಅಂತರಂಗ'ದ ಪ್ರಕಟಣೆಗಳು

೧೯೪೪ರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಹೈದರಾಬಾದ್ ವಿಜಯ (ಯಕ್ಷಗಾನ ,,)	0	3	0
ಸೆರೆಯಾಳು (ನೀಳ್ಗತೆ) ಕುಲಕರ್ಣಿ ಬಿಂದುಮಾಧವ	0	4	0
ಗಾದೆಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ. ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ ನೀಳ್ಗತೆ ಪ. ಸು ಭಟ್ಟ	0	3	0
ಬಲಿಪೀಠದಲ್ಲಿ (ನಾಟಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ ವಿ. ಹೆಗ್ಡೆ)	0	3	0
ನನ್ನ ಹೆಂಡತಿ (ಕತೆಗಳು) ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ (ನೀಳ್ಗತೆ) ಗಿರಿಬಾಲೆ	0	3	0
ಸುಖದದಾರಿ (ವೈರಾಗ್ಯಶತಕ) ಕೆ. ಎ. ದೇವದಾಸ	0	3	0
ಸುಕಾಂತ (ಅನುವಾದಿತ ಕತೆ) ವೀ ಚ- ಹಿತ್ತಲಮನಿ	0	3	0
ಪಂಚಮುಖಿ (5 ಪ್ರಬಂಧಗಳು) ಬಿ. ಎಚ್. ಶ್ರೀಧರ	0	3	0
ಜಾತೀಭೂತಕ್ಕೆ ಬಲಿ (ನೀಳ್ಗತೆ) ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! (ಕತೆ) ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಅವಳು (ಕತೆ) ಶ್ರೀಪತಿ	0	3	0
ತ್ರಿವೇಣಿ (ಪ್ರಬಂಧಗಳ ಸಂಗ್ರಹ)	0	3	0
ನಿಲುವಂಗಿ (ಕತೆ)ಎಸ್.ಸುಬ್ಬರಾಮಯ್ಯ, ಬಿ ಎ. (ಆನರ್ಸ್)	0	3	0
ಬಾಡಿಗೆಯ ಮನೆ ಮತ್ತು ಮುಸುಕು (ನಾಟಕಗಳು)	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಅದರ ಸಾಧನೆ(ಬಿ. ವಿ. ಶರ್ಮ)	0	3	0
ಎರಡು ಕತೆಗಳು	0	3	0
ಸರಸ–ವಿರಸ! (೪ ವಿನೋದ ಚಿತ್ರಗಳು)	0	3	0
ಹೃದಯೇಶ್ವರಿ (ಕಾದಂಬರಿ)	0	3	0
ವಿವಿಧ ವಿಷಯ ಕೋಶ ಭಾಗ ೨ (ವೈಜ್ಞಾನಿಕ ಸಂಗ್ರಹ)	0	6	0
ನುಡಿ ಮುತ್ತುಗಳು (ಎಂ. ವಿ. ಹೆಗ್ಡೆ) ಮಾಲೆ ೧	0	3	0
,, ,, ಮಾಲೆ ೨	0	3	0
,, ,, ಮಾಲೆ ೩	0	3	0
ಕುಲವಿಲ್ಲದ ಹೆಣ್ಣು (ಪಿ.ವೆಂಕೋಬಾಚಾರ್ಯ ಬಿ.ಎ., ಬಿ.ಟಿ.)	1	0	0
ತವರು ಮನೆಯಿಂದ (ಸೌ ಶಾರದಾ ದೇವಿ)	0	3	0
ಭಾಗ್ಯ ಲಕ್ಷ್ಮಿ (ನಾಟಕ) ಬೆಳ್ತಂಗಡಿ ಲಕ್ಷ್ಮಣರಾವ್	1	0	0
ಯುಗವಾಣಿ (ಕವನ ಸಂಗ್ರಹ) ಕು. ಶಿ. ಹರಿದಾಸಭಟ್ಟ	0	8	0
ಸ್ತ್ರೀ ಹೃದಯ—ವಾಸಂತಿ ಪಡುಕೋಣೆ	0	3	0
ದ್ವೇಷ-ಶ್ರೀನಿವಾಸಮೂರ್ತಿ ಗೊರೂರು	0	3	0

Regd. No. M. 3935 **Antaranga Weekly**
15 & 22—11—'49

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:
ಅಂತರಂಗ ಕಾರ್ಯಾಲಯ, ಉಡುಪಿ.
ನವಯುಗ ಪ್ರೆಸ್, ಉಡುಪಿ

Edited Printed & Published dy K. H. Shetty
at Navayuga Press Udipi.